Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–4 | ಜನವರಿ 20–26, 2025 | ಪುಟ 16 | ರೂ.10/–
Volume-19 | Issue-4 | January 20-26, 2025 | Pages:16 | Price: 10/-



ದೆಹಲಿ: ಆಮ್ ಆದ್ಮಿ ಅಧಿಕಾರ ಉಳಿಸಿಕೊಳ್ಳುವುದೇ?



ವಾರಕ್ಕೆ 90 ಗಂಟೆಗಳ ಕೆಲಸದ ಉಪದೇಶ!
ಶ್ರಮಿಕರ ರಕ್ತ ಹಿಂಡುವ ಹುನ್ನಾರ




'ಜನವಿರೋಧಿ ಪೊಲೀಸ್ ಕಮಿಷನರ್ ಮಂಗಳೂರಿಗೆ ಬೇಡ' ಮುಖ್ಯಮಂತ್ರಿಗೆ ಬಹಿರಂಗ ಪತ್ರ

ಆಡಳಿತ ಮತ್ತು ವಿರೋಧ ಪಕ್ಷಗಳ ಒಳ ಬೇಗುದಿಗಳು

ಯೋಗೇಂದ್ರ ಯಾದವ್ ಮತ್ತು 'ಜಾಗೃತ ಕರ್ನಾಟಕ'



ಕಪ್ಪು ಗುಲಾಮರ, ಭಾರತೀಯ ಕೂಲಿಕಾರರ ರಕ್ತ ಬಸಿದು ಬೆಳೆದ ಬ್ರಿಟಿಷ್ ಬಂಡವಾಳಶಾಹಿ



ಭಾಗ 11

ಜಿ.ಎನ್. ನಾಗರಾಜ್

"ಹಿಡಕೊಳ್ಳಿ ಅವಳನ್ನ, ತಪ್ಪಿಸಿಕೊಳ್ಳಲು ಬಿಡಬೇಡಿ, ಜೋಸೆಫ್ ನೀನು ಇವಳನ್ನ ಹಿಡಕೊ, ಜಾನ್ ನೀನು ಅವಳನ್ನ ಹಿಡಕೊ. ನೀವೆಲ್ಲ ಒಬ್ಬೊಬ್ಬಳನ್ನು ಹಿಡಿದುಕೊಳ್ಳಿ. ಅವರು ಮುಟ್ಟಾಗಿ ಗರ್ಭ ಧರಿಸಲು ಪ್ರಶಸ್ತ ಕಾಲದಲ್ಲಿದ್ದಾರೆ. ಅವರಿಂದ ನೀವು ಮಕ್ಕಳನ್ನು ಹುಟ್ಟಿಸಬೇಕು. ಬೇರೆಲ್ಲಿಗೋ ಏಕಾಂತಕ್ಕೆ ಕರೆದುಕೊಂಡು ಹೋಗುವುದು ಮತ್ತೊಂದು ಏನಿಲ್ಲ. ಇಲ್ಲೆ ಅವರನ್ನು ಕೂಡಿ ಗರ್ಭ ಧರಿಸುವಂತೆ ಮಾಡಿ. ನಿಮಗೆ ಹಣ ಕೊಡಲಾಗುತ್ತದೆ."

ಇದು ಕಪ್ಪು ಗುಲಾಮರ ವ್ಯಾಪಾರಿಯೊಬ್ಬನ ಚೀರಾಟಗಳು. ಹರೆಯದ ಕಪ್ಪು ಹೆಣ್ಣುಗಳನ್ನು ಹಸುಗಳಂತೆ ದೊಡ್ಡಿಗಳಲ್ಲಿ ಕೂಡಿ ಹಾಕಿ ಅವರ ಮೇಲೆ ಬೇರೆ ಗಂಡುಗಳನ್ನು ಹೋರಿ ಹತ್ತಿಸಿದಂತೆ ಹತ್ತಿಸಿ ಕರಿಯ ಮಕ್ಕಳನ್ನು ಪಡೆಯುತ್ತಿದ್ದರು. ಅವರನ್ನು ಗುಲಾಮರ ಮಾರುಕಟ್ಟೆಗಳಲ್ಲಿ ಮಾರುತ್ತಿದ್ದರು. ಅದರಲ್ಲಿ ಬಿಳಿಯ ಗಂಡುಗಳನ್ನು ಒಪ್ಪಿಸಿ ಅವರಿಂದ ಕಪ್ಪು ಹೆಣ್ಣುಗಳು ಮಕ್ಕಳನ್ನು ಪಡೆಯುವಂತೆ ಮಾಡಿದರೆ ಹುಟ್ಟುವ ಮುಲಾಟ್ಟೊ (ಬೆರಕೆ)ಗಳಿಂದ ಹೆಚ್ಚು ಹಣ. ಇದು ಆಫ್ರಿಕಾದಿಂದ ಹಡಗುಗಳಲ್ಲಿ ಕಪ್ಪು ಗುಲಾಮರನ್ನು ಹಿಡಿದು ತಂದು ಮಾರುವ ವೆಚ್ಚಕ್ಕಿಂತ ಕಡಿಮೆ ವೆಚ್ಚದ್ದೆಂದು ಕೆಲ ಗುಲಾಮ ವ್ಯಾಪಾರಗಾರರು ಅನುಸರಿಸುತ್ತಿದ್ದ ವಿಧಾನ.

ಬಹಳ ಕಡಿಮೆ ಜನಸಂಖ್ಯೆಯುಳ್ಳ ವಿಶಾಲ ಪ್ರದೇಶಗಳನ್ನು ವಶಪಡಿಸಿಕೊಂಡದ್ದಾಯಿತು. ಈ ಭೂಮಿಯ ಮೇಲೆ ದುಡಿಯುವ ಶ್ರಮಿಕರಿಲ್ಲದಿದ್ದರೆ ಆ ವಿಸ್ತಾರದಿಂದ ಏನು ಪ್ರಯೋಜನ? ಈ ಭೂಮಿಯಲ್ಲಿ ಸಿಗುವ ಖನಿಜ ಸಂಪತ್ತು, ಅವುಗಳಲ್ಲಿ ಬೆಳೆದ ಬೆಳೆಗಳಿಂದ ಯುರೋಪು, ಮುಖ್ಯವಾಗಿ ಬ್ರಿಟನ್ ಗಳಿಸಿದ ಅಪಾರ ಸಂಪತ್ತು, ಶೇಖರಿಸಿದ ಬಂಡವಾಳ, ಅದನ್ನು ಹೂಡಿ ಕೈಗಾರಿಕಾ ಕ್ರಾಂತಿಯನ್ನು ಮಾಡಿಕೊಂಡ ಬಗ್ಗೆ ಹಿಂದಿನ ಲೇಖನದಲ್ಲಿ ವಿವರಿಸಲಾಗಿದೆ.

ಮೂಲನಿವಾಸಿ ಗುಲಾಮರು:

ಯುರೋಪಿನ ಆಕ್ರಮಣಕಾರರು ಮೊದ ಮೊದಲು ಅಲ್ಲಿದ್ದ ಆದಿವಾಸಿ ಬುಡಕಟ್ಟು ಜನರನ್ನು ಗುಲಾಮರನ್ನಾಗಿ ದುಡಿಸಿಕೊಂಡು ಲಾಭ ಪಡೆಯಲು ಪ್ರಯತ್ನಿಸಿದರು. ಆದರೆ ಅದು ಯಶಸ್ವಿಯಾಗಲಿಲ್ಲ. ಈ ಬುಡಕಟ್ಟು ಜನರ ಅಲೆಮಾರಿ, ಬೇಟೆಗಾರ ಜೀವನ ಪದ್ಧತಿಗೂ ಸ್ಥಿರವಾಗಿ ಒಂದು ಸ್ಥಳದಲ್ಲಿ ನೆಲೆ ನಿಂತು ಗಣಿಗಾರಿಕೆ ಮಾಡುವ ಅಥವಾ ಕೃಷಿ ಕೈಗೊಳ್ಳುವುದಕ್ಕೂ ಹೊಂದಿಕೆಯಾಗಲಿಲ್ಲ. ಇಂತಹ ಉತ್ಪಾದನೆಗೆ ಅವಶ್ಯವಾದ ಕನಿಷ್ಠ ಕೌಶಲ್ಯಗಳೂ ಅವರಲ್ಲಿರಲಿಲ್ಲ. ಜೊತೆಗೆ ಇಂತಹ ಗುಲಾಮಗಿರಿ ಜೀವನವನ್ನು ಅವರು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲ ಈ ವಿಶಾಲ ಪ್ರದೇಶದಲ್ಲಿ ಉತ್ಪಾದನೆ ಕೈಗೊಳ್ಳಲು ಅವಶ್ಯವಾದ ಜನಸಂಖ್ಯೆಯೂ ಅವರದಲ್ಲ.

ಬಿಳಿ ಜೀತಗಾರರು–ರಾಜ ರಾಣಿಯರು, ನ್ಯಾಯಾಧೀಶರ ಪಾಲುದಾರಿಕೆ:

ಆಗ ಯುರೋಪಿನ ಸಾಮ್ರಾಟರ ಮತ್ತು ಈ ಪ್ರದೇಶಗಳ ಆಕ್ರಮಣದಾರರ ಗಮನ ಹರಿದದ್ದು ಯುರೋಪಿನ ಬಿಳಿಯರತ್ತ. ಬ್ರಿಟಿಷರ ವಶದಲ್ಲಿದ್ದ ಪ್ರದೇಶಗಳೇ ಬಹಳವಾಗಿದ್ದರಿಂದ ಬ್ರಿಟನ್‌ನ ಬಿಳಿಯ ಜನರು ಈ ಲಾಭದಾಹಕ್ಕೆ ತುತ್ತಾದರು.

ಹೀಗೆ ಅಮೆರಿಕ, ಆಸ್ಟ್ರೇಲಿಯಾಗಳಿಗೆ ಸಾಗಿಸಲ್ಪಟ್ಟ ಬಿಳಿಯರಲ್ಲಿ ಮೂರು ನಾಲ್ಕು ವಿಧ. ಒಂದನೆಯದು, ಬಿಳಿಯ ಅಪರಾಧಿಗಳನ್ನು ಜೈಲುಗಳ ಬದಲಾಗಿ ಈ ಪ್ರದೇಶಗಳಿಗೆ ಸಾಗಿಸಿ ದುಡಿಸಿಕೊಂಡದ್ದು. ಎರಡನೆಯದು, ಬ್ರಿಟನ್‌ನಲ್ಲಿ ಹಲವಾರು ರೀತಿ ಕಿರುಕುಳ, ಹಿಂಸೆಗಳಿಗೆ ಒಳಗಾಗುತ್ತಿದ್ದ ಅಲ್ಪ ಸಂಖ್ಯಾತ ಕ್ರಿಶ್ಚಿಯನ್ ಪಂಥಗಳು, (ಉದಾಹರಣೆಗೆ ಕ್ವೇಕರ್ಸ್ ಅಂತಹ ಒಂದು ಪಂಥ) ಬ್ರಿಟನ್‌ನ ಆಂಗ್ಲಿಕನ್ ಕ್ರಿಶ್ಚಿಯನ್‌ರಿಂದ ಪೀಡನೆಯಿಂದ ತಪ್ಪಿಸಿಕೊಂಡು ಹೊಸ ಜಗತ್ತಿನಲ್ಲಿ ಹೊಸ ಬದುಕು ಕಟ್ಟಿಕೊಳ್ಳಬಹುದು ಎಂದು ಭಾವಿಸಿದವರು. ಮೂರನೆಯದಾಗಿ, ಬ್ರಿಟನ್ ಅಧಿಪತ್ಯದಲ್ಲಿ ಅಂತರಿಕ ವಸಾಹತುಗಳಂತಾಗಿದ್ದ ಐರ್ಲೆಂಡ್‌ನ ಜನತೆ ರಾಜಕೀಯ ದಬ್ಬಾಳಿಕೆಗೆ ಒಳಗಾಗಿದ್ದವರು ಅದರಿಂದ ತಪ್ಪಿಸಿಕೊಳ್ಳಲು ಅಮೆರಿಕ, ಆಸ್ಟ್ರೇಲಿಯಾಗಳಿಗೆ ಪಲಾಯನ ಮಾಡಿದರು. ಕೆಲವೊಮ್ಮೆ ಸ್ಕಾಟ್ಲೆಂಡ್ ಜನರು ಕೂಡ. ಯಾವಾಗೆಲ್ಲ ರಾಜಕೀಯ, ಧಾರ್ಮಿಕ ಅಶಾಂತತೆ ಹೆಚ್ಚಿತೋ ಆಗೆಲ್ಲ ಆ ಸಮುದಾಯಗಳು ಹೆಚ್ಚು ಹೆಚ್ಚು ಪಲಾಯನ ಮಾಡಿದರು. ಇಂತಹುದೆ ಹೊಸ ಬದುಕಿನ ಆಸೆಯಿಂದ ಹೊರಟ ಬ್ರಿಟನ್‌ನ ಬಡವರು. ನಾಲ್ಕನೆಯದಾಗಿ, ಮೋಸದಿಂದ ಕಿಡ್ನಾಪ್ ಮಾಡಿ ಹಿಡಿದುಕೊಂಡು ಬಂದವರು.

ಇವರುಗಳೆಲ್ಲ ಅಲ್ಲಿಗೆ ಹೋಗುವ ಹಡಗನ್ನು ಏರಬೇಕೆಂದರೇ ಪ್ರಯಾಣದರಕ್ಕೆ ಬದಲಾಗಿ ಹಡಗಿನ ಕ್ಯಾಪ್ಟನ್‌ಗಳಿಗೆ ಅಥವಾ ಅವರನ್ನು ಇಲ್ಲಿಯೇ ಪಡೆದುಕೊಂಡು ಒಯ್ಯುತ್ತಿದ್ದವರಿಗೆ ಹತ್ತು ವರ್ಷ, ಅದಕ್ಕಿಂತ ಹೆಚ್ಚು ಕಾಲ ಆಳುಗಳಾಗಿ ದುಡಿಮೆ ಮಾಡುತ್ತೇವೆಂದು ಬರೆದುಕೊಡಬೇಕಾಗಿತ್ತು. ವಸಾಹತುಗಳನ್ನು ತಲುಪಿದ ನಂತರ ಹಡಗಿನ ಕ್ಯಾಪ್ಟನ್ ಅಥವಾ ಅವರನ್ನು ಕರೆದೊಯ್ದವರು ಅವರನ್ನು ಮಾರಿಕೊಳ್ಳುತ್ತಿದ್ದರು ಅಥವಾ ತಮ್ಮದೇ ಉದ್ಯಮಗಳಲ್ಲಿ ಇರಿಸಿಕೊಳ್ಳುತ್ತಿದ್ದರು. ಹೀಗೆ ಅವರು ನಿರ್ದಿಷ್ಟ ಅವಧಿಗೆ ಜೀತಗಾರರಾಗುತ್ತಿದ್ದರು.

ಈ ಬಿಳಿಯ ಜೀತಗಾರರು ಅಲ್ಲಿಯ ಗಣಿ ಹಾಗೂ ಕೃಷಿ ಉದ್ಯಮಿಗಳಿಗೆ ಬಹಳ ತುರ್ತಾಗಿ, ಹೆಚ್ಚಾಗಿ ಬೇಕಾಗಿದ್ದರು. ಬ್ರಿಟನ್ ರಾಣಿಯೇ ಜೈಲಿನಲ್ಲಿದ್ದ ಅಪರಾಧಿಗಳನ್ನು ತನಗೆ ಬೇಕಾದ ಉದ್ಯಮಿಗಳಿಗೆ ಹಂಚಿ ಕಳಿಸುತ್ತಿದ್ದರು, ಅದರಿಂದ ಗಳಿಸುತ್ತಿದ್ದರು. ಅಧಿಕಾರಿಗಳು, ಸ್ಥಳೀಯ ಪುರಸಭೆಗಳ ಮೇಯರ್ ಮೊದಲಾದವರು ಸಣ್ಣ ಪುಟ್ಟ ಅಪರಾಧಗಳಿಗೂ ವಸಾಹತುಗಳಿಗೆ ಸಾಗಹಾಕುವ ಶಿಕ್ಷೆ ನೀಡುತ್ತಿದ್ದರು. ನ್ಯಾಯಾಧೀಶರುಗಳೂ ಈ ಶಿಕ್ಷೆ ನೀಡುವ ಆಟದ ದುರ್ಲಾಭಗಳಲ್ಲಿ ಪಾಲು ಪಡೆಯುತ್ತಿದ್ದರು. ಸ್ಪೇನ್, ಪೋರ್ಚುಗಲ್, ಫ್ರಾನ್ಸ್, ನೆದರ್ಲ್ಯಾಂಡ್ಸ್, ಡೆನ್ಮಾರ್ಕ್ ಮೊದಲಾದ ಇತರ ಕೆಲ ವಸಾಹತುಶಾಹಿ ದೇಶಗಳಿಂದಲೂ ಅವರವರ ವಸಾಹತುಗಳಿಗೆ ಇಂತಹುದೇ ಸಾಗಹಾಕುವ ಕೆಲಸ ನಡೆಯುತ್ತಿತ್ತು.

ಹೀಗೆ ಬ್ರಿಟನ್ ಮತ್ತು ಇತರ ದೇಶಗಳ ಬಡವರನ್ನು ಸಾಗಹಾಕಿ ಆ ದೇಶಗಳ ಜನಸಂಖ್ಯೆ ಸಮಸ್ಯೆಯೇನೋ ಕಡಿಮೆಯಾಯಿತು. ಆದರೆ ಬ್ರಿಟನ್‌ನ ನೂರಿಪ್ಪತ್ತೈದು ಪಟ್ಟು ವಿಶಾಲವಾದ ಆ ಪ್ರದೇಶಗಳಲ್ಲಿ ಉದ್ಯಮಿಗಳ ಲಾಭದ ಬಕಾಸುರ ಹಸಿವಿಗೆ ಈ ಬಿಳಿಯ ಜೀತಗಾರರ ಸಂಖ್ಯೆ ಯಾವ ಮೂಲೆಗೂ ಸಾಲದಾಯಿತು. ಆದ್ದರಿಂದ ದುಡಿಮೆಗೆ ಹಚ್ಚಬಹುದಾದ ಶ್ರಮಿಕರು ವಿಪುಲವಾಗಿ ದೊರಕಬಹುದಾದ ಮತ್ತು ಅಮೆರಿಕಾ ಖಂಡಕ್ಕೆ ಬಹಳ ಹತ್ತಿರ ಇರುವ ಆಫ್ರಿಕಾ ಖಂಡದೆಡೆಗೆ ತಿರುಗಿದರು.

ಈ ಹೊಸ ವಸಾಹತುಗಳಲ್ಲಿ ನೆಲೆಸಿದ ಬಡ ಬಿಳಿಯರು ಕೂಡಾ ಯುರೋಪಿಗೆ ಮುಖ್ಯವಾಗಿ ಬ್ರಿಟನ್‌ನ ಆರ್ಥಿಕ ಬೆಳವಣಿಗೆಗೆ ತಮ್ಮ ಶ್ರಮದ ಕೊಡುಗೆ ಮಾತ್ರವೇ ಅಲ್ಲದೆ ಹಲವು ರೀತಿಯಲ್ಲಿ ಕಾರಣರಾದರು. ಈ ಬಿಳಿಯರು ಬ್ರಿಟನ್‌ನ ಜೀವನ ಪದ್ಧತಿಯನ್ನು ಅನುಸರಿಸುತ್ತಿದ್ದವರಲ್ಲವೇ! ಅದರಿಂದಾಗಿ ಬ್ರಿಟನ್‌ನ ಕೈಗಾರಿಕಾ ತಯಾರಿಕೆಗಳಿಗೆ ಮುಖ್ಯ ನೆಚ್ಚಿನ ಮಾರುಕಟ್ಟೆಯಾದರು. ಬ್ರಿಟನ್‌ನಲ್ಲಿಯೇ ಇದ್ದ ಒಬ್ಬ ಬಿಳಿಯನಿಗಿಂತ ಅಮೇರಿಕಾ, ಆಸ್ಟ್ರೇಲಿಯಾಗಳಲ್ಲಿದ್ದ ಬಿಳಿಯ ಇಪ್ಪತ್ತರಷ್ಟು ಹೆಚ್ಚು ಲಾಭಕರವಾಗಿದ್ದನಂತೆ. ಇವರು ಬ್ರಿಟನ್‌ನ ಉತ್ಪಾದನಾ ವಿಧಾನಗಳ ಬಗ್ಗೆ ಒಂಚೂರು ಪರಿಚಯ ಇದ್ದವರು. ಆದ್ದರಿಂದ ಪ್ಲಾಂಟೇಷನ್ ಮಾಲಿಕರಿಗೆ ಕೃಷಿ ಕಾರ್ಯಗಳಲ್ಲಿ ಹೆಚ್ಚು ಸಹಾಯಕರಾಗಿದ್ದರು. ಕಪ್ಪು ಗುಲಾಮರಿಗೆ ಈ ಕೃಷಿ ವಿಧಾನಗಳನ್ನು ಕಲಿಸಲು, ಅವರ ಉಸ್ತುವಾರಿ ಮಾಡಲು ಉಪಯೋಗಕ್ಕೆ ಬಂದರು. ದೊಡ್ಡ ಸಂಖ್ಯೆಯ ಕಪ್ಪು ಗುಲಾಮರು ಇರುವಲ್ಲಿಯೂ ಅವರು ದಂಗೆ ಏಳಲಾಗದ ವಾತಾವರಣ ರೂಪಿಸುವುದು ಎಲ್ಲಕ್ಕಿಂತ ಹೆಚ್ಚು ಪ್ರಯೋಜನಕಾರಿಯಾಗಿದ್ದರು.

ತಮ್ಮ ಜೀತಗಾರಿಕೆಯ ಅವಧಿ ಮುಗಿದ ನಂತರ ಅಲ್ಲಿಯೇ ಸಣ್ಣ ರೈತರಾದರು. ಹಲವು ಸಾವಿರ ಎಕರೆಗಳ ದೊಡ್ಡ ಪ್ಲಾಂಟೇಷನ್‌ಗಳಲ್ಲಿ ಬೆಳೆಯದ ಸಣ್ಣ ಬೆಳೆಗಳನ್ನು ಬೆಳೆದು ಯುರೋಪಿನ ಮತ್ತು ಸ್ಥಳೀಯ ಅಗತ್ಯಗಳನ್ನು ಪೂರೈಸಿದರು.

ಆದರೆ ಇಂತಹ ಪ್ಲಾಂಟೇಷನ್‌ಗಳು ವಿಸ್ತಾರವಾಗುತ್ತಾ ಈ ಬಿಳಿಯ ಸಣ್ಣ ರೈತರು ತಮ್ಮ ಹೊಲಗಳನ್ನು ಕಳೆದುಕೊಂಡು ಇನ್ನೂ ಪ್ಲಾಂಟೇಷನ್ ಕೃಷಿ ಪದ್ಧತಿ ಆವರಿಸದ ಅಮೆರಿಕದ ಪಶ್ಚಿಮ ಪ್ರದೇಶಗಳಿಗೆ ದೂಡಲ್ಪಟ್ಟರು.

ಕಪ್ಪು ಚಿನ್ನ ಎಂದು ಕರೆಯಲ್ಪಟ್ಟ ಗುಲಾಮರ ವ್ಯಾಪಾರ:

ಈ ವಿಶಾಲ ಪ್ರದೇಶಗಳಲ್ಲಿ ದುಡಿಯಲು ಆಫ್ರಿಕಾದ ಕಪ್ಪು ಜನರನ್ನು ಆಮದು ಮಾಡಲು ಆರಂಭಿಸಿದವರು ಸ್ಪೇನಿನ ಜನರಾದರೂ ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದವರು ಪೋರ್ಚುಗೀಸರು. ಹಿಂದಿನ ಲೇಖನಗಳಲ್ಲಿ ಹೇಳಿದಂತೆ ಪೋಪರು ಸ್ಪೇನ್ ಮತ್ತು ಪೋರ್ಚುಗಲ್ ನಡುವೆ ಇಡೀ ವಿಶ್ವವನ್ನು ಹಂಚಿಕೊಟ್ಟರಲ್ಲ, ಅದರ ಪ್ರಕಾರ ಆಫ್ರಿಕಾ ಮತ್ತು ಬ್ರೆಜಿಲ್ ಪೋರ್ಚುಗೀಸರ ಪಾಲಿಗೆ ಬಂದಿತ್ತು. ಬ್ರೆಜಿಲ್ ಒಂದು ದೊಡ್ಡ ದೇಶ. ಅರಬ್ ವ್ಯಾಪಾರಿಗಳ ಹಿಡಿತದಿಂದ ಬಿಡಿಸಿ ಯುರೋಪಿನ ಸಕ್ಕರೆ ಬಕಾಸುರತನವನ್ನು ಹೆಚ್ಚಿಸಿ ಲಾಭ ಪಡೆಯಲು ಬ್ರೆಜಿಲ್‌ನಲ್ಲಿ ಹತ್ತಾರು ಸಾವಿರ, ಲಕ್ಷಾಂತರ ಎಕರೆಗಳಲ್ಲಿ ಕಬ್ಬಿನ ಪ್ಲಾಂಟೇಷನ್‌ಗಳಿಗಾಗಿ ತಮ್ಮ ಹಿಡಿತದ ಆಫ್ರಿಕಾದ ಪ್ರದೇಶಗಳಿಂದ ಕಪ್ಪು ಗುಲಾಮರನ್ನು ಆಮದು ಮಾಡಿಕೊಂಡರು. ಇದು ಕೇವಲ ಕಪ್ಪು ಜನರ ಗುಲಾಮಗಿರಿ ಮಾತ್ರವಲ್ಲ, ಕಪ್ಪು ಗುಲಾಮರ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ಆರಂಭವಾಯಿತು. ಎರಡು ಶತಮಾನಗಳ ಕಾಲ ಈ ನೀಚ ವ್ಯಾಪಾರ ಪೋರ್ಚುಗೀಸರ ಕೈಯಲ್ಲಿತ್ತು. ಅವರು ಹದಿನೇಳು ಲಕ್ಷ ಗುಲಾಮರನ್ನು ಮಾರಿದರು. ನಂತರ ಕಡಲುಗಳ್ಳತನದಲ್ಲಿ, ನಾವಿಕ ಸೈನ್ಯದ ಪರಿಣತಿಯಲ್ಲಿ ಬ್ರಿಟನ್ ಇಡೀ ವಿಶ್ವದ ಮೇಲೆ ಮೇಲುಗೈ ಸ್ಥಾಪಿಸಿತು. ಅದು ಪೋಪ್ ರಂತಹ ಯಾರ ಆದೇಶಗಳನ್ನೂ ಲೆಕ್ಕಿಸದೇ ಇಡೀ ಗುಲಾಮ ವ್ಯಾಪಾರವನ್ನು ತಮ್ಮ ಮುಷ್ಟಿಯಲ್ಲಿರಿಸಿಕೊಂಡರು. ಆಫ್ರಿಕಾದಿಂದ ಗುಲಾಮರನ್ನು ಕೊಂಡು ತಮ್ಮ ಹಡಗುಗಳಲ್ಲಿ ಸಾಗಿಸಿ ದಕ್ಷಿಣ ಅಮೆರಿಕಾ, ಮೆಕ್ಸಿಕೊಗಳ ಪೋರ್ಚುಗೀಸ್, ಸ್ಪೇನಿಷ್ ಭೂಮಾಲಕರು, ಗಣಿ ಮಾಲಿಕರಿಗೆ ಮಾರಲಾರಂಭಿಸಿದರು. ಬ್ರಿಟನ್‌ನ ಅಧೀನಕ್ಕೆ ಬಂದ ವೆಸ್ಟ್ ಇಂಡೀಸ್ ಮೊದಲಾದ ದ್ವೀಪಗಳ, ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮಾರಿದರು.

ಬ್ರಿಟನ್‌ನ ಗುಲಾಮ ವ್ಯಾಪಾರಿಗಳು ಅಷ್ಟಿಷ್ಟಲ್ಲ, ಎಂಬತ್ತು ಲಕ್ಷಕ್ಕೂ ಹೆಚ್ಚು ಗುಲಾಮರನ್ನು ಕೊಂಡು ಮಾರಿದರು. ಅಂದಾಜಿಸಲ್ಪಟ್ಟಂತೆ ಮೂವತ್ತಾರು ಸಾವಿರಕ್ಕೂ ಹೆಚ್ಚು ಹಡಗು ಪ್ರಯಾಣದಲ್ಲಿ ಒಟ್ಟು ಒಂದು ಕೋಟಿ ಜನರನ್ನು ಸಾಗಿಸಲಾಯಿತು.

ಗುಲಾಮರನ್ನು ಕೊಳ್ಳುವ, ಸಾಗಿಸುವ ಕ್ರೌರ್ಯ, ತ್ರಿಕೋಣ ವ್ಯಾಪಾರದ ಲಾಭ:

ಕಪ್ಪು ಜನರನ್ನು ಆಫ್ರಿಕಾದ ಪೂರ್ವ ತೀರದ ದೇಶಗಳಿಂದ ಅದರ ಒಳನಾಡುಗಳಿಂದ ಆಫ್ರಿಕಾದ ರಾಜರು, ಕುಲಾಧಿಪತಿಗಳಿಂದ ಕೊಂಡು ತರಲಾಗುತ್ತಿತ್ತು. ಅದಕ್ಕೆ ಉಪಯೋಗಿಸುತ್ತಿದ್ದ ಹಣ ಆಫ್ರಿಕಾದ ರಾಜರು ಬಹಳವಾಗಿ ಬಯಸುತ್ತಿದ್ದ ಮುಖ್ಯವಾಗಿ ಬ್ರಿಟಿಷ್ ತಯಾರಿಯ ಗನ್‌ಗಳು, ರಮ್ ಮದ್ಯ. ಅದಲ್ಲದೆ ಎಷ್ಟೋ ಬಾರಿ ಅವರು ಇಷ್ಟಪಡುತ್ತಿದ್ದ ಬಹಳ ಅಗ್ಗವಾದ

ಪುಟ 4 ಕ್ಕೆ

ನ್ಯಾಯಾಂಗದ ಘನತೆ ಸಂರಕ್ಷಿಸಬೇಕು

ಸಂಪಾದಕೀಯ

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವೇದವ್ಯಾಸಾಚಾರ್ಯ ಶ್ರೀಶಾನಂದ ಅವರು ಇತ್ತೀಚಿನ ಮೊಕದ್ದಮೆಯ ವಿಚಾರಣೆಯಲ್ಲಿ ಆಡಿದ ಅವಹೇಳನಕಾರಿ ಮಾತುಗಳ ಬಗ್ಗೆ ಸಾರ್ವಜನಿಕ ಆಕ್ರೋಶ ವ್ಯಕ್ತವಾಗಿದೆ. ಸುರಪುರದಲ್ಲಿ ಜನ ಅಂಗಡಿ ಮುಂಗಟ್ಟುಗಳನ್ನು,, ದೈನಂದಿನ ಕಛೇರಿ ವ್ಯವಹಾರಗಳನ್ನು ಸ್ಥಬ್ದಗೊಳಿಸಿ ಪ್ರತಿಭಟನೆ ದಾಖಲಿಸಿದ್ದಾರೆ. 'ಯಾರನ್ನು ಬೇಕಿದ್ದರೂ ಮದುವೆ ಮಾಡಿಕೊಳ್ಳಬಹುದು. ಮೊದಲ ರಾತ್ರಿ ಮಾತ್ರ ನಾಯಕನ ಜೊತೆ ಎಂಬ ಆಚರಣೆ ಇಂದಿಗೂ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಅಸ್ತಿತ್ವದಲ್ಲಿದೆ' ಎಂದಿದ್ದರು. ಇದು ಬೀಸು ಹೇಳಿಕೆ ಮಾತ್ರವಲ್ಲ, ಸುರಪುರದ ಬಗ್ಗೆ ಮತ್ತು ಅಲ್ಲಿನ ಒಂದು ಜನಾಂಗದ ಬಗ್ಗೆ ಅವಹೇಳನಕಾರಿ ಎಂಬ ತೀವ್ರ ಟೀಕೆಗಳು ವ್ಯಕ್ತವಾಗಿವೆ.

ಇಂತಹ ಹೇಳಿಕೆಗಳನ್ನು ಈ ಹಿಂದೆಯೂ ನೀಡಿದ್ದಿದೆ. 2024 ಜೂನ್ 6 ರಂದು ಭೂ ಒಡೆಯ ಮತ್ತು ಬಾಡಿಗೆದಾರರ ನಡುವಿನ ಮೊಕದ್ದಮೆಯೊಂದರ ವಿಚಾರಣೆಯ ಸಂದರ್ಭದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಬೆಂಗಳೂರಿನ ಪ್ರದೇಶವೊಂದನ್ನು ಉಲ್ಲೇಖಿಸಿ 'ಅದು ಪಾಕಿಸ್ತಾನ' ಎಂದಿದ್ದರು. 2024 ರ ಆಗಸ್ಟ್ 28 ರಂದು ವಾದ ಮಂಡಿಸುತ್ತಿದ್ದ ಮಹಿಳಾ ನ್ಯಾಯವಾದಿಯೊಂದಿಗೆ ಮಹಿಳೆಯರಿಗೆ ಅವಮಾನವಾಗುವ, ಅವಹೇಳನಕಾರಿ, ತಾರತಮ್ಯದಿಂದ ಕೂಡಿದ ಆಕ್ಷೇಪಾರ್ಹವಾದ ಮಾತುಗಳನ್ನು ಬಳಸಿದ್ದರು. ಅಂದು ನ್ಯಾಯಮೂರ್ತಿ ಶ್ರೀಶಾನಂದ ಅವರು ಮಹಿಳಾ ವಕೀಲರಿಗೆ "ವಿರೋಧ ಪಕ್ಷದ" ಬಗ್ಗೆ ಸಾಕಷ್ಟು ತಿಳಿದಿರುವಂತೆ ತೋರುತ್ತಿದೆ. ಅವರ ಒಳ ಉಡುಪು ಚೆಡ್ಡಿಗಳ ಬಣ್ಣವನ್ನೂ ತಿಳಿದಿರಬಹುದು ಎಂದಿದ್ದರು. ಈ ಪ್ರಕರಣಗಳಲ್ಲಿ ನ್ಯಾಯಮೂರ್ತಿಗಳು ಆಡಿದ ಮಾತುಗಳ ವಿರುದ್ಧವಾಗಿ ನ್ಯಾಯಾಲಯದ ಘನತೆಯನ್ನೇ ಕುಂದಿಸುವ ಮತ್ತು ಅತ್ಯಂತ ಅವಹೇಳನಕಾರಿಯಾಗಿ ಮಾತನಾಡುವುದನ್ನು ವಿರೋಧಿಸಿ ನಾಗರೀಕರು ಮತ್ತು ವಕೀಲ ವೃಂದದ ವತಿಯಿಂದ ತೀವ್ರ ಪ್ರತಿಭಟನೆ ದಾಖಲಾಗಿತ್ತು. ಸಾರ್ವಜನಿಕ ಆಕ್ರೋಶ ಹೆಚ್ಚುತ್ತಿರುವ ಮತ್ತು ನ್ಯಾಯಾಲಯದ ಘನತೆಗೆ ಕುಂದುಂಟಾಗುವ ಸನ್ನಿವೇಶಗಳನ್ನು ಗಮನಿಸಿ ಸರ್ವೋಚ್ಚ ನ್ಯಾಯಾಲಯ ಸ್ವಯಂ ಪ್ರೇರಿತವಾಗಿ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆಯನ್ನು ನಡೆಸಿತ್ತು. ಅವರಾಡಿದ ಮಾತುಗಳ ವಿಡಿಯೋ ತುಣುಕುಗಳನ್ನು ನೋಡಿದ ಮತ್ತು ಸಾರ್ವಜನಿಕ ಅಭಿಪ್ರಾಯ, ಅಕ್ಷೇಪಗಳನ್ನು ಗಮನಕ್ಕೆ ತೆಗೆದುಕೊಂಡ ಸರ್ವೋಚ್ಚ ನ್ಯಾಯಮೂರ್ತಿಗಳ ಪೀಠ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀಶಾನಂದ ಅವರ ಹೇಳಿಕೆಗಳು ಮತ್ತು ವರ್ತನೆ ಅತ್ಯಂತ ಅಕ್ಷೇಪಣೆಯ ಮತ್ತು ಸಂವಿಧಾನಾತ್ಮಕವಾದ ನ್ಯಾಯಾಂಗದ ಚೌಕಟ್ಟಿಗೆ ವ್ಯತಿರಿಕ್ತವಾಗಿದ್ದು ಅದರ ಘನತೆಯನ್ನು ಕುಗ್ಗಿಸುತ್ತದೆ. ಅವರಿಗೆ ಲಿಂಗ ಸಂವೇದನೆಯ ತರಬೇತಿಯ ಅವಶ್ಯಕತೆ ಇದೆ ಎನ್ನುವ ವ್ಯಕ್ತಪಡಿಸಿದ್ದರು, ಎಚ್ಚರಿಸಿದ್ದರು. ಈ ಪ್ರಕರಣ ಈ ಹಂತದಲ್ಲಿರುವಾಗಲೇ ಶ್ರೀಶಾನಂದರವರು ತಮ್ಮ ವಿಷಾದ ಮತ್ತು ಕ್ಷಮೆಯನ್ನು ಕೋರಿದ್ದರಿಂದ ಆ ಪ್ರಕರಣವನ್ನು ಅಲ್ಲಿಗೆ ಕೈ ಬಿಡಲಾಯಿತು. ಸರ್ವೋಚ್ಚ ನ್ಯಾಯಾಲಯ ಈ ವಿಷಯದಲ್ಲಿ ಕೇವಲ ಎಚ್ಚರಿಕೆ ಕೊಟ್ಟು ಬಿಟ್ಟ ಬಗ್ಗೆಯೂ ವ್ಯಾಪಕವಾದ ವಿರೋಧವು ವ್ಯಕ್ತವಾಗಿತ್ತು. ಈ ಎಚ್ಚರಿಕೆಯನ್ನು ಶ್ರೀಶಾನಂದ ರವರು ಮುಂದಿನ ದಿನಗಳಲ್ಲಿ ಪಾಲಿಸಲಿಲ್ಲ ಎನ್ನುವ ವಿಷಯವನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕಿದೆ. ಅವರು ಇನ್ನೂ ಹಲವಾರು ಪ್ರಕರಣಗಳಲ್ಲಿಯೂ ಅತ್ಯಂತ ಹಗುರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲೇ ಬಂದಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸಂವಿಧಾನವನ್ನು ಮತ್ತು ನ್ಯಾಯಾಂಗದ ಘನತೆಯನ್ನು ಎತ್ತಿ ಹಿಡಿಯಬೇಕಿರುವ ನ್ಯಾಯಮೂರ್ತಿಗಳೇ ಅತ್ಯಂತ ವ್ಯತಿರಿಕ್ತವಾಗಿ, ಪಾಳೇಗಾರಿ ಪ್ರವೃತ್ತಿಯನ್ನು ತೋರುತ್ತಿರುವುದು ವಿಷಾದನೀಯ. ಮಾನವರ ಘನತೆಯನ್ನು ಅವಮಾನಿಸುವಂತೆ ಬಹಳ ಮುಖ್ಯವಾಗಿ ಮಹಿಳೆಯರ ಕುರಿತಾದ ಅತ್ಯಂತ ಹೀಗೆಳೆವ ಮಾತುಗಳನ್ನು ಆಗೀಗ ಆಡುತ್ತಲೇ ಬಂದಿದ್ದಾರೆ.

ಒಂದೆಡೆ ಸಂವಿಧಾನವನ್ನು ಒಪ್ಪದ ಹಲವಾರು ಮತೀಯವಾದೀ ಸಂಘಟನೆಗಳು ಭಾರತದ ಸಂವಿಧಾನದ ವಿರುದ್ಧ ತೀವ್ರವಾದ ದಾಳಿಯನ್ನು ನಡೆಸುತ್ತಿರುವಾಗ ಆ ಸ್ಥಾನದಲ್ಲಿ ಮತೀಯವಾಗಿ ಮತ್ತು ಮನುವಾದಿ ನೀತಿ ಸಂಹಿತೆಗಳನ್ನು ಜಾರಿಗೊಳಿಸಬೇಕು ಎಂದು ತೀವ್ರವಾಗಿ ಆಗ್ರಹಿಸುತ್ತಿರುವಾಗ ನ್ಯಾಯಾಂಗ ಪೀಠದಲ್ಲಿರುವ ನ್ಯಾಯಮೂರ್ತಿಗಳೇ ಸಂವಿಧಾನಕ್ಕೆ ವಿರೋಧವಾಗಿ ಮಾತನಾಡುತ್ತಿರುವುದು ಅತ್ಯಂತ ಆತಂಕಕಾರಿಯಾಗಿದೆ. ನ್ಯಾ.ಶ್ರೀಶಾನಂದರಂತವರು ವ್ಯಕ್ತಿಗತವಾಗಿ ಹಲವು ನಂಬಿಕೆ, ಮೌಲ್ಯಗಳನ್ನು ಇಟ್ಟುಕೊಂಡಿರಬಹುದು. ಸಂಘ ಪರಿವಾರದ ವಿಚಾರಗಳ ಪ್ರಭಾವಕ್ಕೂ ಒಳಗಾಗಿರಲೂಬಹುದು. ಆದರೆ ಸಂವಿಧಾನದ ಮಹತ್ವದ ಅಂಗವಾಗಿರುವ ನ್ಯಾಯ ಪೀಠದಲ್ಲಿ ಕೂರುವಾಗ ಅದಕ್ಕೆ ಅದರದೇ ಆದ ವ್ಯಕ್ತಿತ್ವ ಮೌಲ್ಯ ನಂಬಿಕೆ ಮತ್ತು ಜೀವನಕ್ರಮ ಅವಶ್ಯಕವಾಗಿರುತ್ತವೆ. ಅವರು ಕುಳಿತ ಸ್ಥಾನದ ಘನತೆಗೆ ಕುಂದುಂಟು ಮಾಡುವ ಮತ್ತು ಸಂವಿಧಾನಕ್ಕೆ ಅಪಚಾರ ಮಾಡುವಂತೆ ವ್ಯಕ್ತಿಗತ ವಿಚಾರಗಳು ಎಂದು ಆಗಬಾರದು. ಹಾಗಾದರೆ ನಿಷ್ಪಕ್ಷಪಾತವಾದ ನ್ಯಾಯ ವಿತರಣೆ ಸಾಧ್ಯವೇ? ನಾಗರೀಕರ ಹಕ್ಕುಗಳನ್ನು ಸಂರಕ್ಷಿಸಲು ಸಾಧ್ಯವೇ? ಭಾರತದ ಸಂವಿಧಾನ ಮತ್ತು ಮಹಿಳೆಯರ ಹಾಗೂ ಮಾನವ ಘನತೆಯನ್ನು ಒಪ್ಪದ ವಿಚಾರವುಳ್ಳವರು ಸಂವಿಧಾನಾತ್ಮಕ ಸಂಸ್ಥೆಗಳ ಒಳಗಡೆಯಲ್ಲಿ ಇರಬಹುದೇ ? ಇದು ಹೇಗೆ ಸಾಧ್ಯವಾಗುತ್ತಿದೆ ಎನ್ನುವ ಪ್ರಶ್ನೆಯು ಕೂಡ ಉದ್ಭವಿಸುತ್ತದೆ. ಅವರ ವ್ಯಕ್ತಿಗತ ನಂಬಿಕೆಗಳೇ ಶ್ರೇಷ್ಠವಾಗಿದ್ದಲ್ಲಿ ನ್ಯಾಯ ಪೀಠದಿಂದ ಕೆಳಗಿಳಿದು ಅವರು ಅದನ್ನೇ ಹೊಂದಬಹುದಲ್ಲವೇ?

ಇವೆಲ್ಲವುಗಳನ್ನ ಕೇವಲ ವ್ಯಕ್ತಿಗತ ದೋಷದಿಂದಲೇ ಆಗುತ್ತಿವೆ ಎಂದು ಭಾವಿಸುವುದು, ಸೂಕ್ತವಾಗುವುದಿಲ್ಲ. ಅಂತಹ ವಾತಾವರಣವೂ ನಿರ್ಮಾಣಗೊಳ್ಳುತ್ತಿದೆ. ಯಾಕೆಂದರೆ 2025 ರಲ್ಲಿ ಆರ್‌ಎಸ್‌ಎಸ್ ತನ್ನ ಶತಮಾನೋತ್ಸವದ ಸಂದರ್ಭದಲ್ಲಿ ಇಡೀ ಭಾರತವನ್ನು ಫ್ಯಾಶಿಸ್ಟ್ ಮನೋಭಾವದ 'ಹಿಂದುರಾಷ್ಟ್ರ' ನಿರ್ಮಿಸುವುದಾಗಿ ಘೋಷಿಸಿದೆ. ದೇಸದ ಎಲ್ಲವನ್ನೂ ಹಿಂದುತ್ವದಿಂದ ಆವರಿಸುವ ಘೋಷಣೆ ಮಾಡಿ ಕಾರ್ಯಾಚರಣೆಗೆ ಇಳಿದಿರುವ ಪರಿಣಾಮವು ಇದರಲ್ಲಿ ಕಾಣಬಹುದಾಗಿದೆ. ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಮತ್ತು ಅದರ ಮೂಲಭೂತ ಮೌಲ್ಯಗಳ ಮೇಲೆ ದಾಳಿ ನಡೆಸುವುದೇ ಅದಕ್ಕಿರುವ ದಾರಿ ಎಂದು ನಂಬಿದವರಿದ್ದಾರೆ. ಹೀಗೇ ವ್ಯಾಖ್ಯಾನಿಸುವ ನಾಯಕರೇ ಅಧಿಕಾರದಲ್ಲಿರುವಾಗ ಅಂತಹ ವಿಚಾರ ವಿಕೃತಿ ಮನಸುಗಳು ಇರುವ ಕಡೆಗಳಲ್ಲೆಲ್ಲ ಸಂಘ ಸಂಸ್ಥೆಗಳನ್ನು ದುರುಪಯೋಗ ಮಾಡಿ ಸಂವಿಧಾನಾತ್ಮಕ ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ದಾಳಿ ಮಾಡುವುದನ್ನು ಕರ್ತವ್ಯದಂತೆ ಭಾವಿಸಲಾಗುತ್ತಿದೆ. ಇದು ಅತ್ಯಂತ ನಿರ್ಣಾಯಕವಾದ ಸನ್ನಿವೇಶ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಸರ್ವೋಚ್ಚ ನ್ಯಾಯಾಲಯ ಕೂಡಲೇ ಮಧ್ಯ ಪ್ರವೇಶಿಸಿ ಕಠಿಣವಾದ ಸಂವಿಧಾನಾತ್ಮಕ ಕಾನೂನಿನ ಕ್ರಮಗಳನ್ನು ಜರುಗಿಸುವುದು ಅತ್ಯಗತ್ಯ.

ಇಲ್ಲವಾದಲ್ಲಿ ನ್ಯಾಯಾಂಗದ ಘನತೆಯನ್ನು ಕುಗ್ಗಿಸುವ ಇಂತಹ ವರ್ತನೆಗಳು ಪುನರಾವರ್ತನೆ ಯಾದರೆ ಆಶ್ಚರ್ಯವಿಲ್ಲ.

ಆಡಳಿತ ಮತ್ತು ವಿರೋಧ ಪಕ್ಷಗಳ ಒಳ ಬೇಗುದಿಗಳು

ಈ ವಾರ

ಎಸ್.ವೈ.ಗುರುಶಾಂತ್

ಕರ್ನಾಟಕದಲ್ಲಿನ ಆಡಳಿತ ಮತ್ತು ವಿರೋಧ ಪಕ್ಷಗಳ ಒಳಗೆ ಎದ್ದಿರುವ ಬೇಗುದಿ, ಬಡಿದಾಟ ಲಂಬಿಸುತ್ತಲೇ ಇವೆ! ಎರಡೂ ಪಕ್ಷಗಳ ನಾಯಕರು ಪ್ರತಿ ಮಾತಿನ ಕೊನೆಯಲ್ಲಿ 'ಹೈ ಕಮಾಂಡ್ ಹೇಳಿದಂತೆ' ಎಂದೇ ಹೇಳುತ್ತಾರಾದರೂ ಈ ಬಣ ಬಡಿದಾಟ ನಿಂತಿಲ್ಲ, ನಿಲ್ಲಿಸಲೂ ಆ ಹೈ ಕಮಾಂಡ್‌ಗಳಿಗೆ ಇಷ್ಟ ಇಲ್ಲವೇ? ಅಥವಾ ಆಗದ ಕೆಲಸವೇ? ಈ ಆಂತರಿಕ ಬಡಿದಾಟಗಳಿಗೆ ಅಂತ್ಯ ಹಾಡಲು ಕಾಲವಿನ್ನೂ ಪಕ್ವ ಆಗಿಲ್ಲವೆಂದು, ಇನ್ನೂ ಪೂರ್ವೋಪಾಧಿ ಎಂದು ಅವು ಭಾವಿಸಿವೆಯೇ? ಎರಡೂ ಪಕ್ಷಗಳಲ್ಲಿ ಬಹುತೇಕ ಏಕ ಕಾಲದಲ್ಲಿ ಟೆನ್ಷನ್ ಹೆಚ್ಚಳದ ನಡುವೆ ಏನಾದರೂ ಬಹಿರಂಗಕ್ಕೆ ಕಾಣದ ಅಂತರ್ ಸಂಬಂಧಗಳಿವೆಯೇ?

ಲೋಕಸಭಾ ಚುನಾವಣೆ ಮುಗಿದ ಬಳಿಕ ಕಾಂಗ್ರೆಸ್ ಸರ್ಕಾರ ಉರುಳುವುದು ಶೇಕಡಾ ನೂರಕ್ಕೆ ನೂರು ಗ್ಯಾರಂಟಿ' ಎಂದು ಸಾರುತ್ತಿದ್ದ ಕರ್ನಾಟಕದ ಬಿಜೆಪಿ ಫಲಿತಾಂಶ ಬರುವ ಬೆನ್ನಲ್ಲೇ ಬಣಗಳ ಬಡಿದಾಟಕ್ಕೆ ಈಡಾಯಿತು. ಯಡಿಯೂರಪ್ಪ–ವಿಜಯೇಂದ್ರರ ವಿರುದ್ಧ ಅಸಹನೆ ವ್ಯಕ್ತಪಡಿಸುತ್ತಿದ್ದ ಇನ್ನೊಂದು ಬಣ (ಬಿ.ಎಲ್.ಸಂತೋಷ್ –ಸಂಘದ) ಶಾಸಕ ಬಸವರಾಜ ಪಾಟೀಲ್ ಯತ್ನಾಳ್ ಮೂಲಕ ತೀವ್ರ ನಿಂದನಾತ್ಮಕ ಟೀಕಾ ಪ್ರಹಾರಕ್ಕಿಳಿಯಿತು. ಯಡಿಯೂರಪ್ಪನವರ ಬಣವೂ ಅಖಾಡಕ್ಕೆ ಇಳಿಯಿತು! ಉಭಯ ಬಣಗಳ ದೆಹಲಿಯಾತ್ರೆ. ಅಹವಾಲು, ದೂರು ಸಲ್ಲಿಕೆ. ಇನ್ನೇನು ಅದ್ಯಕ್ಷರನ್ನು ವಜಾ ಮಾಡಿಯೇ ಬಿಡಲಿದ್ದಾರೆ ಎನ್ನುವಷ್ಟು ಯತ್ನಾಳ ಬಣದ ಬಿಲ್ಡಪ್! ಯತ್ನಾಳರ ಮೇಲೆ ಶಿಸ್ತು ಕ್ರಮ ಗ್ಯಾರಂಟಿ ಎಂದಿತು ಬಿಎಸ್‌ವೈ ಟೀಂ. ಆದರೆ ಏನೂ ಆಗಲಿಲ್ಲ. ಸಿದ್ಧರಾಮಯ್ಯನವರ ರಾಜೀನಾಮೆ ಪಡೆಯುವವರೆಗೆ, ಸರ್ಕಾರ ಉರುಳುವವರೆಗೆ ವಿಶ್ರಾಂತಿ ಇಲ್ಲ ಎನ್ನುತ್ತಿದ್ದ ಕಮಲ ಪಡೆಯ ಹೋರಾಟ ತೆರೆಗೆ ಸರಿದಿತ್ತು. ಬಣ ಬಡಿದಾಟದಲ್ಲಿ ಆಯಾಸಗೊಂಡಿತ್ತು. ಅಸೆಂಬ್ಲಿಯಲ್ಲಿ ಹತಾಶೆಯಿಂದ ಮಾತನಾಡಿದ್ದ ಸಿ.ಟಿ.ರವಿ ಅಲ್ಲಿ ಉದ್ಭವವಾದ ಪ್ರಸಂಗದಿಂದ 'ಹುತಾತ್ಮ'ನಾಗಲು ನೋಡಿದರೆ, ಅದನ್ನೇ ದೊಡ್ಡದು ಮಾಡಿ ಸರಕಾರದ ವಿರುದ್ಧ ಹಾರಾಡಲು ಬಿಜೆಪಿ ನೋಡಿತು. ಇತ್ತೀಚಿನ ಬಿಜೆಪಿಯ 'ವಿರೋಧ' ತಕರಾರು ಹೋರಾಟಗಳು ಹಾಸ್ಯಾಸ್ಪದ ಎನಿಸುವಂತಿವೆ. ಆದರೆ ಸಿಗುವ ಒಂದು ಸಣ್ಣ ಅವಕಾಶವನ್ನೂ ಅದು ಬಳಸಿಕೊಳ್ಳಲು ಹಿಂದೆ ಬೀಳುತ್ತಿಲ್ಲ! ಇದರ ನಡುವೆಯೂ ಉಭಯ ಬಣಗಳು ಗುಂಪುಗಳ ಗುದ್ದಾಟವನ್ನು ಕಾಪಿಟ್ಟುಕೊಂಡೇ ಬರುತ್ತಿವೆ!!

ಸುರ್ಜೆವಾಲಾರ ಸಂಧಾನ ಸಭೆಯ ಬಳಿಕವೂ ಕಿತ್ತಾಟ ನಿಂತಿರಲಿಲ್ಲ. ಅಂತೂ ಕೊನೆಗೂ ಕಾಂಗ್ರೆಸ್ ಪಕ್ಷದ ಅ.ಭಾ.ಅದ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು 'ಎಲ್ಲರೂ ಬಾಯಿ ಮುಚ್ಚಿಕೊಂಡಿರಬೇಕು' ಎಂದು ಪಕ್ಷದ ನಾಯಕರಿಗೆ ತಾಕೀತು ಮಾಡಿದ್ದಾರೆ. 'ಯಾವಾಗ, ಎಂತಹ ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಹೈಕಮಾಂಡ್‌ಗೆ ಎಲ್ಲವೂ ಗೊತ್ತಿದೆ 'ಎಂದೂ ಎಚ್ಚರಿಸಿದ್ದಾರೆ. ಕೆಪಿಸಿಸಿ ಅದ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅದ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕು ಎನ್ನುವುದು ಇನ್ನೊಂದು ಬಣದ ಬೇಡಿಕೆ. ಅವರು ಉಪ ಮುಖ್ಯಮಂತ್ರಿ ಆಗಿರುವುದರಿಂದ ಎರಡು ಹುದ್ದೆಗಳೇಕೆ? ಎನ್ನುವುದು ಮಂಡಿತವಾದ ಒಂದು ವಾದ. ಆದರೆ ಇಷ್ಟೆ ಉದ್ದೇಶ ಅಲ್ಲಿಲ್ಲ. ಸರ್ಕಾರ ರಚನೆ ಆಗುವಾಗ ಮಾಡಿಕೊಂಡ ಅಧಿಕಾರ ಹಂಚಿಕೆ ಸೂತ್ರದಂತೆ ಎರಡೂವರೆ ವರ್ಷಗಳನ್ನು ಪೂರೈಸಿದ ಕೂಡಲೇ ಸಿದ್ದರಾಮಯ್ಯನವರು ಇಳಿದು ಡಿಕೆಶಿ ಮುಖ್ಯಮಂತ್ರಿ ಆಗುವುದು. ಸಿದ್ಧರಾಮಯ್ಯ ಬಿಟ್ಟು ಕೊಡಬೇಕೆ? ಬಹಳಷ್ಟು ಶಾಸಕರ ಬೆಂಬಲ ಇರುವ ಅವರ್ಯಾಕೆ ಬಿಡಬೇಕು? ಡಿಕೆಶಿ ಪಡೆದ ಈ ಅಧಿಕಾರ, ಅವಕಾಶ ಸಾಕಲ್ಲವೇ? ಹಾಗೆ ಒಂದು ವೇಳೆ ಸಿಎಂ ಬದಲಾಗಬೇಕೆಂದರೆ ಬೆರೆಯವರನ್ನೇ ಯಾಕೆ ಆರಿಸಬಾರದು? ಇಲ್ಲಿಯವರೆಗೂ ದಲಿತ ಸಿಎಂ ಆಗಿಲ್ಲ, ಆಗಬಾರದೇಕೆ? ಬಿಜೆಪಿಯನ್ನು ಎದುರಿಸಲು ಲಿಂಗಾಯತ ಜಾತಿಯವರು ಆಗಬಾರದೇಕೆ? ಪ.ಪಂಗಡ– ಎಸ್.ಟಿ.ಯಿಂದ ಯಾಕಿಲ್ಲ? ಹೀಗೆ ಜಾತಿ, ಹಣ, ವರ್ಚಸ್ಸು ಮುಂತಾದ ಲೆಕ್ಕಗಳ ಉರುಳಾಟ ಆಟದ ಕಣದಲ್ಲಿವೆ. ಹೀಗಾಗಿ ಈ ಹಂತದಲ್ಲಿ ಡಿಕೆಶಿ ಅದ್ಯಕ್ಷ ಸ್ಥಾನ ಕಳೆದುಕೊಂಡರೆ ಅಷ್ಟು ಮಟ್ಟಿಗೆ ದುರ್ಬಲ ಆದಂತೆ ಎಂಬ ಲೆಕ್ಕಾಚಾರವೂ ವಿರೋಧಿ ಬಣದಲ್ಲಿ ಇಲ್ಲದಿಲ್ಲ. ಇದಕ್ಕೆ ಸಿದ್ಧರಾಮಯ್ಯನವರು ಏನನ್ನುತ್ತಾರೆ ಎಂದರೆ ಏನನ್ನೂ ಬಹಿರಂಗವಾಗಿ ಹೇಳುತ್ತಿಲ್ಲ. ಮೌನವೇ ಒಂದು ಪ್ರಬಲ ಸಂಕೇತ. ಏನಿದ್ದರೂ ಹೈಕಮಾಂಡ್ ನಿರ್ಧಾರ ಅಂತಿಮ ಎನ್ನಲಾಗುತ್ತಿದ್ದರೂ ಅವರವರ ಬಲ ಕ್ರೋಡೀಕರಣ, ಲಾಭಿ ನಿಂತಿಲ್ಲ, ಎಲ್ಲರೂ ಯಾರ್ಯಮಗ್ನರೇ! ಅದಕ್ಕಾಗಿ ಅಹೋರತ ಶ್ರಮಿಸುತ್ತಿದ್ದಾರೆ. ಅಧಿಕಾರ ದಕ್ಕಿಸಿಕೊಳ್ಳಬೇಕೆಂದರೆ ಇವೆಲ್ಲ ಇರುವುದೇ ಎನ್ನುವುದು ಬಲಪಂಥೀಯ ಪಕ್ಷಗಳ ಸಹಜ ಲೆಕ್ಕಾಚಾರ.

ಈ ಒಳ ಬೇಗುದಿ, ಪ್ರಯತ್ನಗಳೇ ಸರ್ಕಾರದ, ಸಚಿವ ಸಂಪುಟದ ಕಾರ್ಯ ವಿಧಾನಗಳಲ್ಲಿಯೂ ಪ್ರತಿಫಲನಗೊಳ್ಳುತ್ತಿವೆ. ಇತ್ತೀಚಿಗೆ ನಡೆದ ಸಚಿವ ಸಂಪುಟದಲ್ಲಿ, ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಬೆಳಗಾವಿಯಲ್ಲಿ ಪಕ್ಷದ ಕಛೇರಿ ಉದ್ಘಾಟನೆಯ ಸಂದರ್ಭದಲ್ಲಿಯೂ ಪ್ರದರ್ಶನಗೊಂಡಿವೆ. ಡಿಕೆಶಿಯವರು ಜಿಲ್ಲೆಯ ಅಭಿವೃದ್ಧಿ ವಿಷಯದಲ್ಲಿಯೂ, ಪಕ್ಷದ ಕಛೇರಿ ನಿರ್ಮಾಣದಲ್ಲಿಯೂ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಕೊಡುಗೆಯನ್ನು ಶ್ಲಾಘಿಸಿದರೆಂದೂ, ಈ ಮೂಲಕ ಸಚಿವ ಸತೀಶ ಜಾರಕಿಹೊಳಿ ಯವರನ್ನು ನಗಣ್ಯಗೊಳಿಸಿದರೆಂದೂ ಆಕ್ರೋಶ ಸ್ಪೋಟಗೊಂಡಿತು. ಜಾರಕಿಹೊಳಿಯವರು ಸಿಎಂ ಆಕಾಂಕ್ಷಿ ಆಗಿರುವುದು ಮತ್ತು ಅದಕ್ಕಾಗಿ ಪ್ರಯತ್ನವನ್ನು ಎಲ್ಲಾ ಹಂತಗಳಲ್ಲಿ ನಡೆಸಿರುವುದು ಇಲ್ಲಿನ ಶ್ಲಾಘನೆ ಮತ್ತು ಸ್ಪೋಟಗಳ ಕಾರಣ. ಬೆಳಗಾವಿಯಲ್ಲಿ ಜಾರಕಿಹೊಳಿಯವರ ಹಿಡಿತಕ್ಕೆ ಪರ್ಯಾಯವಾಗಿ ಹೆಬ್ಬಾಳ್ಕರ್ ಅವರನ್ನು ಡಿಕೆಶಿ ಬೆಂಬಲಿಸುತ್ತಾರೆ ಎನ್ನುವ ಪ್ರಬಲ ಆರೋಪ. ಇಬ್ಬರ ನಡುವೆ ಇದೂ ಬೆಂಕಿ ಹೊತ್ತಲು ಒಂದು ಕಾರಣ.

ಕಾಂಗ್ರೆಸ್ ಒಳಗಿನ ಈ ತೀವ್ರ ಕಲಹ ಎಲ್ಲಿಯವರೆಗೆ ಎಳಸಬಹುದು? ಹೈಕಮಾಂಡ್ ಹಚ್ಚಿರುವ ತೇಪೆ ಅದು ತೇಪೆಯೇ. ಈ ಮೇಲಾಟದಲ್ಲಿ ಸಿದ್ಧರಾಮಯ್ಯನವರ ಬಣ ಒಂದು ವೇಳೆ ಮೇಲುಗೈ ಪಡೆದು ಡಿ.ಕೆ.ಶಿವಕುಮಾರ ಅವರನ್ನು ಅಧಿಕಾರ ವಂಚಿತರನ್ನಾಗಿ ಮಾಡಿದರೆ ಆಗ ಅವರ ಪ್ರತಿಕ್ರಿಯೆ ಏನಾಗಿರಬಹುದು? ತನ್ನ ಬೆಂಬಲಿಗರ ಜೊತೆ ಹೊರ ಬರಬಹುದೇ? ಬಿಜೆಪಿ–ಜೆಡಿಎಸ್ ಪಕ್ಷಗಳು ಇವರನ್ನು ಕ್ಯಾಚ್ ಮಾಡಿ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಬಹುದೇ? ಉರುಳಿಸುವಷ್ಟು ಮಟ್ಟಿಗೆ ಡಿಕೆಶಿ ಗುಂಪಿಗೆ ಬೆಂಬಲಿಸಿ ಸಿಎಂ ಮಾಡಬಹುದೇ? ಅಥವಾ ಬಿಜೆಪಿ ಪಕ್ಷದಲ್ಲಿನ ಒಂದು ಬಣ ಅಲ್ಲಿಂದ ಹೊರ ಬಂದು ಕಾಂಗ್ರೆಸ್ ಬಣದೊಂದಿಗೆ ಸೇರಿ ಸರ್ಕಾರ ರಚಿಸಬಹುದೇ? ಈ ನಡುವೆ ಜೆಡಿಎಸ್ ಏನಾಗಬಹುದು? ಅಲ್ಲಿನ ಒಕ್ಕಲಿಗ ಶಾಸಕರು ಕಾಂಗ್ರೆಸ್‌ನತ್ತ ವಲಸೆ ಬರುವ ವದಂತಿ ಯಾಕೆ ಬಂತು? ಅಥವಾ ಹಾಗೆ ಉಳಿದರೂ ಅದು ವಹಿಸುವ ಪಾತ್ರ ಏನು? ಪುಟ 4 ಕ್ಕೆ

ಸ್ಕೀಂ ನೌಕರರನ್ನು ಖಾಯಂ ಮಾಡಿ, ಕೋರ್ಟ್‌ಗಳ ತೀರ್ಪುಗಳನ್ನು ಜಾರಿ ಮಾಡಿ

ಭಾರತದ ಸಂವಿಧಾನದ ಆಶಯದಂತೆ ಪ್ರತಿಯೊಬ್ಬ ಮನುಷ್ಯನಿಗೆ ಘನತೆಯಿಂದ ಬದುಕುವ ಹಕ್ಕಿದೆ. ಪಾಲನೆ-ಪೋಷಣೆ, ಕಡ್ಡಾಯ ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು ಪ್ರಭುತ್ವದ ಕರ್ತವ್ಯವಾಗಬೇಕು ಎಂಬುದನ್ನು ಪ್ರತಿಪಾದಿಸಿದೆ. ಇದರ ಆಧಾರದಲ್ಲಿ ಆಹಾರ, ಆರೋಗ್ಯ ಮತ್ತು ಶಿಕ್ಷಣವನ್ನು ದೇಶದ ಎಲ್ಲಾ ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಎಲ್ಲಾ ಹಂತದ ಜನರಿಗೆ ಕೊಡಬೇಕಿತ್ತು. ಆದರೆ ಜಿಡಿಪಿಯ ಶೇ.1ರಷ್ಟು ಮಾತ್ರ ಆಹಾರಕ್ಕೆ, ಶೇ.2ರಷ್ಟು ಮಾತ್ರ ಶಿಕ್ಷಣಕ್ಕೆ ವ್ಯಯಮಾಡುತ್ತಿದೆ. ಇದರಿಂದಾಗಿ ಈ ಕ್ಷೇತ್ರಗಳನ್ನು ಸಂಪೂರ್ಣ ಸಾಧನೆ ಮಾಡಲಾಗದೇ ಸುಧಾರಣಾವಾದದ ಭಾಗವಾಗಿ ICDS, MOM, NHM, NRLMನಂತಹ ಯೋಜನೆಗಳನ್ನು ತಂದು ಆಹಾರ, ಆರೋಗ್ಯ ಮತ್ತು ಶಿಕ್ಷಣದ ಪ್ರಗತಿ ಸಾಧಿಸುತ್ತೇವೆ ಎಂದು ಹೇಳುತ್ತಿದೆ. ಈ ಯೋಜನೆಗಳ ಸೌಲಭ್ಯಗಳನ್ನು ತಲುಪಿಸಲು ಅಂಗನವಾಡಿ, ಬಿಸಿಯೂಟ, ಆಶಾ, ಸಂಜೀವಿನಿ, ಸ್ವಚ್ಛವಾಹಿನಿ ಎಂದು ದೇಶದಲ್ಲಿ ಸುಮಾರು 60 ಲಕ್ಷ, ರಾಜ್ಯದಲ್ಲಿ 4 ಲಕ್ಷ ಮಹಿಳೆಯರು ಗೌರವಧನ, ಸಂಭಾವನೆಯ ಆಧಾರದಲ್ಲಿ ದುಡಿಯುತ್ತಿದ್ದಾರೆ. ಈ ಯೋಜನೆಗಳಿಗೆ ಬಿಜೆಪಿ ನೇತೃತ್ವದ ಸರ್ಕಾರ ಬಂದ ನಂತರ 60:40 ಅನುಪಾತದಲ್ಲಿ ಬಜೆಟ್ ಅನ್ನು ಬದಲಾಯಿಸಿದೆ.



ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಉದ್ಯೋಗಸ್ಥರೆಂದು ಪರಿಗಣಿಸಿ, 1972 ಗ್ರಾಚ್ಯುಟಿ ಪಾವತಿ ಕಾಯ್ದೆಯಡಿ ಅರ್ಹರೆಂದು ಸುಪ್ರೀಂಕೋರ್ಟ್ 48 ವರ್ಷಗಳ ನಂತರ ಬಂದ ಏಕೈಕ ತೀರ್ಪು, ಗುಜರಾತ್ ಹೈಕೋರ್ಟ್ C ಮತ್ತು D ಗುಂಪಿನ ನೌಕರರನ್ನಾಗಿ ಪರಿಗಣಿಸಬೇಕೆಂಬ ತೀರ್ಪುಗಳು ಆಶಾದಾಯಕವಾಗಿದೆ.

45ನೇ ಭಾರತೀಯ ಕಾರ್ಮಿಕ ಸಮ್ಮೇಳನ ಇವರನ್ನು ಕಾರ್ಮಿಕರೆಂದು ಗುರ್ತಿಸಿ ಶಾಸನಬದ್ಧ ಸೌಲಭ್ಯಗಳನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿ ಹಲವು ವರ್ಷಗಳು ಕಳೆದಿವೆ. ಆದರೆ ಜನವಿರೋಧಿಯಾಗಿರುವ ಪ್ರಭುತ್ವಗಳು ಶಾಸನಬದ್ದ ಸೌಲಭ್ಯಗಳನ್ನು ಕೊಡಲು ಹಣಕಾಸಿನ ವೆಚ್ಚ ಹೆಚ್ಚಾಗುತ್ತದೆ ಎಂಬ ಪ್ರತಿಪಾದನೆಯನ್ನು ಮಾಡಲಾಗುತ್ತಿದೆ.

ಬೇಟಿ ಬಚಾವೋ, ಬೇಟಿ ಪಢಾವೋ ಎಂದು ಹೇಳುವ ಕೇಂದ್ರ ಸರ್ಕಾರ 2018ರಿಂದ ಒಂದು ಪೈಸೆಯನ್ನು ವೇತನ ಹೆಚ್ಚಳ ಮಾಡಲಿಲ್ಲ.

ಈಗ ಕೊಡುತ್ತಿರುವ ವೇತನದಲ್ಲಿ ಅಂಗನವಾಡಿ ಕಾರ್ಯಕರ್ತೆಗೆ 4,500, ಅಂಗನವಾಡಿ ಸಹಾಯಕಿಗೆ 2,200, ಆಶಾ ಕಾರ್ಯಕರ್ತೆಗೆ 2,000, ಬಿಸಿಯೂಟದವರಿಗೆ 1,000 ರೂ. ಮಾತ್ರವೇ ಕೊಡುತ್ತಿದೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರ ಹೆಚ್ಚು ಮಾಡಿದರೆ ನಮ್ಮ ಪಾಲಿನ ಹಣ ನಾವು ಕೊಡುತ್ತೇವೆ ಎಂದು ವಾದಮಾಡುತ್ತಿದೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವಾಗ ಕಾಂಗ್ರೆಸ್ ಸರ್ಕಾರ ಅಂಗನವಾಡಿಯವರಿಗೆ 15,000, ಬಿಸಿಯೂಟದವರಿಗೆ 7,000ಕ್ಕೆ ವೇತನ ಹೆಚ್ಚಳದ ಭರವಸೆಯನ್ನು ಇನ್ನು ಈಡೇರಿಸಿಲ್ಲ.

ಈ ವಿಭಾಗದ ನೌಕರರಿಗೆ ಕೇಂದ್ರ ಸರ್ಕಾರ ಅಂಗನವಾಡಿಯವರಿಗೆ 21,000, ಬಿಸಿಯೂಟದವರಿಗೆ 10,000, ಆಶಾ ಕಾರ್ಯಕರ್ತೆಯರಿಗೆ ಸೇರಿದಂತೆ ಕನಿಷ್ಠ ವೇತನ ನಿಗದಿ ಮಾಡಿದರೆ 1 ಲಕ್ಷ 29 ಸಾವಿರದ 480 ಕೋಟಿ ಹಣ ಒಂದು ವರ್ಷಕ್ಕೆ ಬೇಕಾಗುತ್ತದೆ. ಇದರಿಂದ 56 ಲಕ್ಷ ಕುಟುಂಬಗಳು ಬದುಕಲು ಸಾಧ್ಯವಾಗುತ್ತದೆ. ಆದರೆ ಕೇಂದ್ರ ಸರ್ಕಾರ ದೇಶದ ಬಂಡವಾಳಗಾರರಿಗೆ ಕೊಟ್ಟಿರುವ ಸಾಲ ಮನ್ನಾಕ್ಕೆ ಜಿಡಿಪಿಯ ಶೇ.25 ವ್ಯಯವಾಗುತ್ತಿದೆ. ಆದರೆ ಈ ದೇಶದ ಜನರ ಕಲ್ಯಾಣಕ್ಕಾಗಿ ಶ್ರಮಿಸುವ ಸ್ಕೀಂ ನೌಕರರಿಗೆ ಕನಿಷ್ಠ ವೇತನ ಕೊಡದೆ ದೇಶದ ಅಸಮಾನತೆಯ ಬದುಕಿಗೆ ಹಾದಿ ಮಾಡಿಕೊಡುವುದನ್ನು ವಿರೋಧಿಸಬೇಕಾಗಿದೆ.

ಯೋಜನಾ ಕಾರ್ಮಿಕರ ಕೆಲಸವನ್ನು ಖಾಯಂಗೊಳಿಸಲು ಹಾಗು ಈ ಕಾರ್ಮಿಕರ ಕುರಿತ ನ್ಯಾಯಾಲಯಗಳ ತೀರ್ಪುಗಳ ಜಾರಿಗಾಗಿ ಸರ್ಕಾರಗಳನ್ನು ಒತ್ತಾಯಿಸುವ ನಿರ್ಣಯವನ್ನು ಸಿಪಿಐ(ಎಂ) 24ನೇ ಕರ್ನಾಟಕ ರಾಜ್ಯ ಸಮ್ಮೇಳನವು ಅಂಗೀಕರಿಸಿದೆ.

ಈ ವಾರ....... ಪುಟ 3 ರಿಂದ

ಹೀಗೆ ಅನೇಕ ಊಹಾಪೋಹಗಳನ್ನು, ಗೊಂದಲ ಗೋಜಲುಗಳನ್ನು ಈ ಎಲ್ಲ ಬೆಳವಣಿಗೆಗಳು ಹುಟ್ಟು ಹಾಕಿವೆ.

ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳೆಣಿಗೆಗಳನ್ನು ಆಧರಿಸಿ ಬಿಜೆಪಿ ಪಕ್ಷದೊಳಗೂ ಆಂತರಿಕ ಕಲಹ, ಪುನರ್ ಹೊಂದಾಣಿಕೆಗಳು ನಡೆಯುತ್ತಿರುವುದನ್ನು ತಳ್ಳಿ ಹಾಕಲಾಗದು. ಸರ್ಕಾರ ಉರುಳಿದರೆ ತಾನು ರಚಿಸುವ ಸರ್ಕಾರದಲ್ಲಿ ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದೂ ಈ ಬೇಗುದಿಗಳ ಒಂದು ಅಂಶ ಇರಬಹುದು. ಇಲ್ಲಿಯೂ ಆರ್‌ಎಸ್‌ಎಸ್ ಮತ್ತಷ್ಟು ನಿಯಂತ್ರಣ ಪಡೆಯಲು ಕ್ರಿಯಾಶೀಲವಾಗಿದೆ. ಕಾಂಗ್ರೆಸ್ ಒಳಗಿನ ಕಿತ್ತಾಟ ಬಳಸಿ, ಇಲ್ಲವೇ ಆಪರೇಷನ್ ಕಮಲ ಮಾಡಿಯಾದರೂ ಸರ್ಕಾರ ಉರುಳಿಸುವ ಪ್ರಯತ್ನ ನಿಂತಿಲ್ಲ ಎನ್ನುವುದನ್ನೂ ಮರೆಯಬಾರದು.

ಆಡಳಿತ ಮತ್ತು ವಿರೋಧ ಪಕ್ಷಗಳ ಈ 'ಕಾರ್ಯಮಗ್ನತೆ ಹೊಣೆಗೇಡಿತನ ಎಂದೇ ಹೇಳಬೇಕು. ನಾಯಕತ್ವದ ಬದಲಾವಣೆ ವಿಷಯ ಅವರವರ ಪಕ್ಷಗಳ ಆಂತರಿಕ ವಿಷಯಗಳು. ಅದನ್ನು ಇಷ್ಟು ಬೀದಿ ಬಡಿದಾಟ ಮಾಡುವುದು ಹೇಸಿಗೆ ಹುಟ್ಟಿಸುತ್ತದೆ ಮತ್ತು ಖಂಡನೀಯ.

ಪರಿಣಾಮ ಜಿಡ್ಡುಗಟ್ಟಿರುವ ಆಡಳಿತ ಜನರ ಪಾಲಿಗೆ ಮತ್ತಷ್ಟೂ ಇಲ್ಲವಾಗುತ್ತಿದೆ. ಎಳ್ಳಷ್ಟೂ ಕಡಿಮೆ ಆಗದ ಭ್ರಷ್ಟಾಚಾರ, ಅಧಿಕಾರಶಾಹಿ ಜನರನ್ನು ಹಿಂಡುತ್ತಿದೆ. ಮುಡಾ ಕೇಸ್‌ನ ಬಳಿಕ ಸಿದ್ಧರಾಮಯ್ಯನವರು ಮೆತ್ತಗಾಗಿದ್ದಾರೆ ಎಂದು ಕೇಳಿ ಬರುವ ಮಾತುಗಳು ಆಡಳಿತಕ್ಕೆ ಚುರುಕು ಮುಟ್ಟಿಸದೇ ಹೇಗೋ ಸಾಗಲಿ ಎನ್ನುವುದನ್ನು ಕಾಣುವಾಗ ಇರಬಹುದು ಅನಿಸುತ್ತದೆ. ಆಕ್ರಮಣಕಾರಿಯಾಗಿ ವರ್ತಿಸುತ್ತಿರುವ ಬಿಜೆಪಿಗೆ ಇದಕ್ಕಿಂತ ಇನ್ನೇನು ಬೇಕಾದೀತು?

ಕಪ್ಪು ಗುಲಾಮರ, ಭಾರತೀಯ ಕೂಲಿಕಾರರ ರಕ್ತ ಬಸಿದು..... ಪುಟ 2 ರಿಂದ

ಶೋಕೇಸ್ ವಸ್ತುಗಳನ್ನು ಬಹಳ ಬೆಲೆಯಿಟ್ಟು ವಂಚಿಸಲಾಗುತ್ತಿತ್ತು.

ಈ ಗುಲಾಮರಲ್ಲಿ ದೃಢಕಾಯರಾದ ಗಂಡು ಯುವಕರು ಬಹಳ ಬೆಲೆ ಬಾಳುತ್ತಿದ್ದರು. ಒಬ್ಬ ವೆಸ್ಟ್ ಇಂಡೀಸ್‌ನ ಕವಿ ಗುಲಾಮರನ್ನು ಕೊಳ್ಳುವ ಬಗ್ಗೆ ಹೀಗೆ ಉಪದೇಶ ನೀಡಿದ್ದಾನೆ: ಅವರ ನಾಲಗೆ ಕೆಂಪಾಗಿರಲಿ, ಎದೆ ಅಗಲವಾಗಿರಲಿ, ಹೊಟ್ಟೆ ಕಂಡು ಕಾಣದಂತಿರಲಿ, ಯವ್ವನದ ಮಿಂಚಿರಲಿ.

ಜಾತ್ರೆಗಳಲ್ಲಿ ಎತ್ತುಗಳನ್ನು ಕೊಳ್ಳಲು ಮಾಡುವಂತೆ ವಯಸ್ಸನ್ನು ಅಳೆಯಲು ಹಲ್ಲು ಎಣಿಸಿ, ನಾಲಗೆ ಹೊರ ಚಾಚಿಸಿ, ತೋಳಿನ ಮಾಂಸಖಂಡಗಳನ್ನು ಹಿಸುಕಿ ಅವರನ್ನು ಆಯ್ಕೆ ಮಾಡಲಾಗುತ್ತಿತ್ತು. ಹೆಣ್ಣು ಗುಲಾಮರಲ್ಲಿ ಅವರ ಯವ್ವನ, ಸೌಂದರ್ಯ, ಮೊಲೆಗಳ ಬಿಗುಹು ಇತ್ಯಾದಿಗಳು ಮುಖ್ಯವಾಗಿದ್ದವು.

ಆಫ್ರಿಕಾದ ಈ ಪ್ರದೇಶಗಳಲ್ಲಿ ಆ ವೇಳೆಗೆ ಗುಲಾಮಗಿರಿ ಅಸ್ತಿತ್ವದಲ್ಲಿದ್ದುದರಿಂದ ದೊಡ್ಡ ಭೂಮಾಲಕರು, ಪಾಳೆಯಗಾರರು, ರಾಜ, ರಾಣಿಯರಿಂದ ಕೊಳ್ಳಲಾಗುತ್ತಿತ್ತು. ಗುಲಾಮರಾಗಿಲ್ಲದ ಸ್ವತಂತ್ರ ಕರಿಯರನ್ನೂ ಬಲವಂತವಾಗಿ, ಬಂದೂಕಿನ ಹೆದರಿಕೆ ತೋರಿಸಿ ಹಿಡಿ ತರಲಾಗುತ್ತಿತ್ತು. ಆ ಪ್ರದೇಶದ ಮುಖ್ಯಸ್ಥರೂ ಇವರ ಬಗೆಗೂ ಹಣ ಪಡೆಯುತ್ತಿದ್ದರು. ಇವರನ್ನು ಹಲವು ರೀತಿಯಲ್ಲಿ ಸರಪಳಿಗಳಲ್ಲಿ ಕಟ್ಟಿ ಹಾಕಿ ನೂರಾರು ಕಿಲೋಮೀಟರ್ ನಡೆಸಿಕೊಂಡು ಬರಲಾಗುತ್ತಿತ್ತು. ಸ್ವಲ್ಪ ಪ್ರತಿಭಟನೆ ತೋರಿದರೂ ಚಾಟಿಯೇಟು.

ಬಂದರುಗಳಿಗೆ ಇವರನ್ನು ಕರೆತಂದು ಹಡಗುಗಳಲ್ಲಿ ಒಬ್ಬರಿಗೆ ಕೇವಲ ಐದೂವರೆ ಅಡಿ ಉದ್ದ ಹದಿನಾರು ಇಂಚು ಅಗಲ ಅಷ್ಟೇ, ಮಿಸುಕಾಡಲೂ ಜಾಗವಿಲ್ಲದಂತೆ ಪ್ಯಾಕ್ ಮಾಡಿ ಕಟ್ಟಿ ಹಾಕಿ ಪೇರಿಸಲಾಗುತ್ತಿತ್ತು. ಈ ಸಾಗರ ಪ್ರಯಾಣದಲ್ಲಿ ದಿನಕ್ಕೆ ಒಂದು ಹೊತ್ತು ಮಾತ್ರ ಊಟ. ಸರಿಯಾದ ಕುಡಿಯುವ ನೀರು ಕೂಡಾ ಇಲ್ಲದೆ ಡಿಹೈಡ್ರೇಷನ್‌ನಿಂದ ಸತ್ತು ಹೋಗುತ್ತಿದ್ದರು. ವಾಂತಿ ಬೇಧಿ, ಪ್ಲೇಗ್, ಟೈಫಾಯ್ಡ್, ಸಿಡುಬು ಮುಂತಾದ ಕಾಯಿಲೆಗಳಿಗೆ ತುತ್ತಾಗಿ ಪ್ರಯಾಣದಲ್ಲಿಯೇ ಶೇ.15ರಿಂದ 20ರಷ್ಟು ಸತ್ತು ಹೋಗುತ್ತಿದ್ದರು. ಅಂಟು ರೋಗ ಬಂದರೆ ಸಾಯುವ ಮೊದಲೇ ಹಡಗಿನಿಂದ ಎಸೆದುಬಿಡುತ್ತಿದ್ದರು.

ಇಂತಹ ಕಡು ಕಷ್ಟಗಳನ್ನು ಎದುರಿಸಿ ದಡ ಸೇರುತ್ತಿದ್ದವರು ಸಾಮಾನ್ಯವಾಗಿ 14ರಿಂದ 30ರವರೆಗಿನ ವಯಸ್ಸಿನವರು. ಹೆಚ್ಚಾಗಿ ಗಂಡು ಹುಡುಗರು. ಶೇ.25ರಷ್ಟು ಮಾತ್ರ ಹುಡುಗಿಯರು.

ಹಾಗೂ ಹೀಗೂ ಬದುಕುಳಿದು ವಸಾಹತುಗಳನ್ನು ಸೇರುತ್ತಿದ್ದವರನ್ನು ನ್ಯೂಯಾರ್ಕ್, ಮೊದಲಾದ ಗುಲಾಮ ಮಾರುಕಟ್ಟೆಗಳಲ್ಲಿ ಹರಾಜು ಹಾಕಿ, ಗುಲಾಮರ ಕಸುವು, ಹೆಣ್ಣುಗಳ ರೂಪ ಯೌವ್ವನಗಳನ್ನು ವರ್ಣಿಸಿ ಮಾರಲಾಗುತ್ತಿತ್ತು.

ಈ ಎಲ್ಲ ವ್ಯವಹಾರದಲ್ಲಿ ಗಂಡ, ಹೆಂಡತಿ ಮಕ್ಕಳು ಎಂಬ ಮಮತೆಯ ಪ್ರಶ್ನೆಯೇ ಲೆಕ್ಕಕ್ಕಿಲ್ಲದಂತೆ ಗಂಡ ಒಬ್ಬರಿಗೆ ಹೆಂಡತಿ ಮತ್ತೊಬ್ಬರಿಗೆ ಮಕ್ಕಳು ಒಬ್ಬೊಬ್ಬರೂ ಬೇರೆ ಬೇರೆಯವರಿಗೆ ಮಾರಲ್ಪಡುತ್ತಿದ್ದರು. ಮೇಲೆ ಹೇಳಿದಂತೆ ಕಪ್ಪು ಗಂಡಸರೇ ಹೆಚ್ಚಿರುತ್ತಿದ್ದುದರಿಂದ ಅವರ ಲೈಂಗಿಕ ಸಂಬಂಧಗಳ ವಿರೂಪಗಳ ಬಗ್ಗೆ ಹೇಳಲಸಾಧ್ಯ.

ಹೀಗೆ ಸಾಗಿಸಲಾದ ಕಪ್ಪು ಗುಲಾಮರು ಮೇಲೆ ಹೇಳಿದ ಬಿಳಿಯ ಜೀತಗಾರರಿಗಿಂತ ಬಹಳ ಬಹಳ ಅಗ್ಗವಾಗಿದ್ದರು. ಬಿಳಿಯರ ಜೀತಗಾರಿಕೆ ಕೇವಲ ಐದು, ಹತ್ತು ವರ್ಷಗಳಿಗೆ ಸೀಮಿತವಾಗಿತ್ತು. ಆದರೆ ಕಪ್ಪು ಜನರು ಜೀವಮಾನ ಪರ್ಯಂತ ಮಾತ್ರವಲ್ಲ, ಅವರ ಮುಂದಿನ ತಲೆಮಾರುಗಳೂ ಕೂಡ ಗುಲಾಮರೇ.

ಬಿಳಿ ಆಸ್ಟ್ರೇಲಿಯಾ ನೀತಿಯಿಂದ ಇಂತಹ ಕಪ್ಪು ಗುಲಾಮರನ್ನು ಕೊಳ್ಳಲೊಪ್ಪದ ಕಾರಣ ಆಸ್ಟ್ರೇಲಿಯಾದ ಉತ್ಪನ್ನಗಳು ಹಲವು ಪಟ್ಟು ದುಬಾರಿಯಾಗಿದ್ದವು. ಗುಲಾಮರ ಶ್ರಮದಿಂದ, ಹಲವು ಸಾವಿರ ಎಕರೆಗಳ ಪ್ಲಾಂಟೇಷನ್‌ಗಳಲ್ಲಿ ಬೆಳೆದ ಹತ್ತಿ, ಸಕ್ಕರೆ, ತಂಬಾಕಿನ ಜೊತೆ ಭಾರತದ ಸಣ್ಣ ರೈತರು ತಮ್ಮ ಕುಟುಂಬದ ಶ್ರಮದಿಂದ ಬೆಳೆದ ಈ ಉತ್ಪನ್ನಗಳು ಸ್ಪರ್ಧಿಸಬೇಕಾಗುತ್ತಿತ್ತು.

ಹೀಗೆ ಗುಲಾಮರನ್ನು ಹೊತ್ತ ಹಡಗುಗಳು ಮತ್ತೆ ಬ್ರಿಟನ್‌ಗೆ ವಾಪಸಾಗುವಾಗ ಈ ವಸಾಹತುಗಳ ಉತ್ಪನ್ನಗಳಾದ ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ಲೋಹಗಳು, ಸಕ್ಕರೆ, ತಂಬಾಕು, ಹತ್ತಿ, ಮೊಲಾಸಸ್ (ಮದ್ಯವನ್ನು ತಯಾರಿಸಲು ಬಳಸುವ ಸಕ್ಕರೆಯ ಉಪ ಉತ್ಪನ್ನ) ಮುಂತಾದವುಗಳನ್ನು ಹೊತ್ತು ತಂದು ಬ್ರಿಟನ್‌ನಲ್ಲಿ ಮಾರಲಾಗುತ್ತಿತ್ತು.

ಹೀಗೆ ಅದೊಂದು ಅತ್ಯಂತ ಲಾಭಕರ ತ್ರಿಕೋಣ ವ್ಯಾಪಾರವಾಗಿತ್ತು. ಒಂದು ಕಡೆ ಬ್ರಿಟನ್‌ನ ಗನ್, ರಮ್ ಮೊದಲಾದ ಕೈಗಾರಿಕೆಗಳು ಬೆಳೆದವು. ಮತ್ತೊಂದು ಕಡೆ ಬ್ರಿಟಿಷರಿಗೆ ಅವಶ್ಯವಾದ ವಸ್ತುಗಳು ಅಗ್ಗವಾಗಿ ದೊರಕಿದವು. ಬೇರಾವ ದೇಶದ ಮೇಲೆ ಅವಲಂಬನೆ ಹೊರಟುಹೋಯಿತು.

ರಾಜ ರಾಣಿಯರು, ಪಾಳೆಯಗಾರರ ಅತಿ ಲಾಭ

ಗುಲಾಮರ ವ್ಯಾಪಾರದಿಂದ ಶೇ. 100ರಿಂದ 300 ರವರೆಗೂ ಲಾಭ ಸಿಗುತ್ತಿತ್ತು. ಇಂತಹ ವ್ಯಾಪಾರದಲ್ಲಿ ರಾಯಲ್ ಆಫ್ರಿಕನ್ ಕಂಪನಿ, ರಾಯಲ್ ಅಡ್ವೆಂಚರರ್ಸ್ ಮೊದಲಾದ ರಾಜ, ರಾಣಿಯರು, ಇತರ ರಾಜ ಮನೆತನದವರು ಪಾಲುದಾರರಾದ ಕಂಪನಿಗಳು ಪ್ರಮುಖವಾಗಿದ್ದವು. ಬ್ರಿಟನ್‌ನ ಬ್ರಿಸ್ಟಲ್, ಲಿವರ್‌ಪೂಲ್ ಇಂತಹ ಗುಲಾಮ ವ್ಯಾಪಾರದ ಕಂಪನಿಗಳ ಕೇಂದ್ರವಾಗಿದ್ದವು. ಇಂದಿನ ಪ್ರಸಿದ್ಧ ಬ್ಯಾಂಕ್ ಆಫ್ ಇಂಗ್ಲೆಂಡ್ ಸೇರಿದಂತೆ ಹಲವು ಬ್ಯಾಂಕ್‌ಗಳು ನಲವತ್ತು ಐವತ್ತು ಕಂಪನಿಗಳು, ಕೆಲ ವೈಯಕ್ತಿಕ ಲಾಭಕೋರರು ಈ ವ್ಯಾಪಾರದಲ್ಲಿ ತೊಡಗಿದ್ದವು.

ಈ ಅಪಾರ ಲಾಭ ಬ್ರಿಟನ್ನಿನ ಕೈಗಾರಿಕಾ ಕ್ರಾಂತಿ, ಬಂಡವಾಳದ ಶೇಖರಣೆಯ ಒಂದು ಪ್ರಮುಖ ಆಧಾರವಾಯಿತು.

ಭಾರತೀಯ ಕೂಲಿಗಳ ವ್ಯಾಪಾರ:

ಮುಂದೆ 18ನೆಯ ಶತಮಾನದ ಕೊನೆಗೆ ಈ ಪೈಶಾಚಿಕ ಗುಲಾಮ ವ್ಯಾಪಾರವನ್ನು (ಗುಲಾಮಗಿರಿಯನ್ನಲ್ಲ. ಅದಕ್ಕೆ ಮತ್ತೊಂದು ಶತಮಾನ ಬೇಕಾಯಿತು) ರದ್ದುಗೊಳಿಸಿದಾಗ ಶ್ರಮದ ಕ್ಷಾಮ ಸೃಷ್ಟಿಯಾಯಿತು. ಅದನ್ನು ತುಂಬಲು ಭಾರತದಿಂದ ಬಡ ಕೂಲಿಕಾರರನ್ನು ಹಲವು ರೀತಿಯ ಆಸೆ ತೋರಿಸಿ ಹಲವು ರೀತಿಯಲ್ಲಿ ವಂಚಿಸಿ ವೆಸ್ಟ್ ಇಂಡೀಸ್, ಗಯಾನ, ಮಾರಿಷಸ್ ದ್ವೀಪಗಳಿಗೆ ಕೊಂಡೊಯ್ದರು. ಅರೆ ಬೆತ್ತಲೆ, ಅರೆ ಹೊಟ್ಟೆಯ ಕೂಲಿಕಾರರಿಂದ ಮುಚ್ಚಳಿಕೆ ಬರೆಸಿಕೊಂಡು ಇಲ್ಲೇ ಕೆಲವು ಕಿಲೋಮೀಟರ್ ದೂರ ಎಂದು ಹೇಳುತ್ತಾ ಹಡಗು ಹತ್ತಿಸಿ ಸಾವಿರಾರು ಕಿಲೋಮೀಟರ್ ಒಯ್ಯುತ್ತಿದ್ದರು. ಹೀಗೆ ಐದಾರು ಲಕ್ಷ ಜನರನ್ನು ಸ್ಲೇವ್ ಟ್ರೇಡ್‌ಗೆ ಬದಲಾಗಿ ಕೂಲಿ ಟ್ರೇಡ್ ಮೂಲಕ ಮಾರಲಾಗಿದೆ.

ಈ ಕೂಲಿಗಳ ಸಂತತಿಯವರೇ ವೆಸ್ಟ್ ಇಂಡೀಸ್ ಕ್ರಿಕೆಟ್ ಆಟಗಾರರಾಗಿ ಪರಿಚಿತರಾದ ಬುಧಿ ಕುಂದರನ್, ಕಾಳಿ ಚರಣ್, ಶಿವೂ ಪ್ರಸಾದ್ ಮೊದಲಾದವರು. ಹಾಗೆಯೇ ಗಯಾನದ ಸ್ವಾತಂತ್ರ್ಯ ಹೋರಾಟಗಾರ, ನಂತರ ಅಧ್ಯಕ್ಷನಾದ ಚೆಡ್ಡಿ ಜಗನ್, ಮಾರಿಷಸ್‌ನ ಅಧ್ಯಕ್ಷರಾಗಿದ್ದ ಸಿವೂ ಸಾಗರ್ ರಾಮ ಗುಲಾಮ್ ಮೊದಲಾದವರು.

ಯೋಗೇಂದ್ರ ಯಾದವ್ ಮತ್ತು 'ಜಾಗೃತ ಕರ್ನಾಟಕ'

ಇತ್ತೀಚೆಗೆ ನಡೆದ 'ಜಾಗೃತ ಕರ್ನಾಟಕ' ಡಾ.ಮನಮೋಹನ ಸಿಂಗ್ ನೀತಿಗಳು–ಭಾರತದ ವರ್ತಮಾನ ಮತ್ತು ಭವಿಷ್ಯತ್ತು' ಎಂಬ ಸಂವಾದದಲ್ಲಿ ಮಾತನಾಡಿದ ಎಲ್.ಕೆ.ಅತೀಕ್ ಅವರು ಪ್ರಮುಖವಾಗಿ ಮನಮೋಹನ್ ಸಿಂಗ್ ಅವರ ಜತೆ ತಮ್ಮ ಕೆಲಸದ ಅನುಭವವನ್ನು ಹಂಚಿಕೊಂಡರು. ಅವರು ಪ್ರಧಾನಿಗಳ ಕಚೇರಿಯಲ್ಲಿ ಸಾಮಾಜಿಕ ಕ್ಷೇತ್ರವನ್ನು ನೋಡಿಕೊಳ್ಳುತ್ತಿದ್ದು ಅವುಗಳ ಬಗ್ಗೆ ಮಾತನಾಡಿ ಕೆಲವು ಪ್ರಶ್ನೆಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರೊ.ಯೋಗೇಂದ್ರ ಯಾದವ್ ಅವರು ಡಾ.ಮನಮೋಹನ ಸಿಂಗ್ ಅವರ ವ್ಯಕ್ತಿತ್ವ, ರಾಜಕೀಯ ಮತ್ತು ನೀತಿಗಳ ಬಗ್ಗೆ ಸಮಗ್ರವಾಗಿ ಮಾತನಾಡಿ, ನಂತರ ಬಂದ ಪ್ರಶ್ನೆಗಳಿಗೆ ಉತ್ತರ ನೀಡಿದರು. ನೆಹರೂ ನಂತರದ ದೇಶ ಕಂಡ ಏಕಮಾತ್ರ ಮುತ್ಸದ್ದಿ ಪ್ರಧಾನಿಯೆಂದು ಅವರು ಮನಮೋಹನ ನೀತಿಗಳ ಬಗ್ಗೆ ಮಾತನಾಡಿದ್ದು ಇಲ್ಲಿನ ಮುಖ್ಯ ಕಾಳಜಿ. ಅವರು 'ಮನಮೋಹನಾಮಿಕ್ಸ್' ಅನ್ನು ಇಡಿಯಾಗಿ ಎತ್ತಿ ಹಿಡಿದರು. ಅವರ ಪ್ರಧಾನಿಯಾದ ಅವಧಿ ಮಾತ್ರವಲ್ಲದೆ 1991–96ರ ಅವರ ಅರ್ಥಮಂತ್ರಿ ಅವಧಿಯಲ್ಲಿ ಆರಂಭಿಸಿದ ನೀತಿಗಳಿಂದ ನಿರೀಕ್ಷಿಸಿದ 'ಅನಾಹುತ'ಗಳೇನೂ ಆಗಿಲ್ಲ ಎಂದು ಪ್ರತಿಪಾದಿಸಿದರು. ಕೃಷಿ ಬಿಕ್ಕಟ್ಟಾಗಲಿ, ಅದರ ಪರಿಣಾಮಗಳಾದ 3 ಲಕ್ಷ ರೈತರ ಆತ್ಮಹತ್ಯೆಗಳಾಗಲಿ ಎಲ್‌ಪಿಜಿ (ಅಥವಾ ನವ–ಉದಾರವಾದಿ) ನೀತಿಗಳ ಪರಿಣಾಮಗಳಲ್ಲ, ಅದಕ್ಕೆ 'ಬೇರೆಯೇ' ಕಾರಣಗಳಿವೆ ಎಂದರು.

ಯುಪಿಎ ಅವಧಿಯಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಅತ್ಯಂತ ಹೆಚ್ಚು ಹೆಚ್ಚಳವಾಯ್ತು ಎಂದರು. ಅವರ ಪ್ರಕಾರ ಎಲ್‌ಪಿಜಿಗೂ ಕನಿಷ್ಠ ಬೆಂಬಲ ಬೆಲೆ ಕೊಡದಿರುವುದಕ್ಕೂ ಸಂಬಂಧವಿಲ್ಲ. ಅದು 1980ರ ದಶಕದಿಂದ ಬಂದ ಸಮಸ್ಯೆಯ ಮುಂದುವರಿಕೆಯಷ್ಟೇ. ಸಿಂಗ್ ಸರಕಾರವೇ ನೇಮಿಸಿದ್ದ ಸ್ವಾಮಿನಾಥನ್ ಕಮಿಶನ್ ಫಾರ್ಮುಲಾದ ಪ್ರಕಾರ ಕನಿಷ್ಠ ಬೆಂಬಲ ಬೆಲೆ ಜಾರಿ ಮಾಡಲಿಲ್ಲ ಎಂಬುದನ್ನು ಮರೆಮಾಚಿದರು. ಸಿಂಗ್ ಅವರ ಖಾಸಗೀಕರಣದ ನೀತಿಗಳು ಶಿಕ್ಷಣ ಮತ್ತು, ಆರೋಗ್ಯಕ್ಕೆ ಅನ್ವಯವಾಗಲಿಲ್ಲ ಎಂದ ಅವರು, ಪ್ರಧಾನಿಯಾಗಿದ್ದಾಗ ಸಾರ್ವಜನಿಕ ಉನ್ನತ ಶಿಕ್ಷಣಕ್ಕೆ ಆದ್ಯತೆ ಕೊಟ್ಟರು ಎಂದರು. ಸಿಂಗ್ ಅವರ ಆಡಳಿತ ಅವಧಿಯನ್ನೇ ತೆಗೆದುಕೊಂಡರೂ ನವ–ಉದಾರವಾದಿ ನೀತಿಗಳಿಂದಾಗಿ ಶಿಕ್ಷಣ ಮತ್ತು ಆರೋಗ್ಯದಲ್ಲಿ ಖಾಸಗೀಕರಣ ವಿಪರೀತವಾಗಿ ಬೆಳೆಯಲಿಲ್ಲ ಮತ್ತು ಸಾರ್ವಜನಿಕ ಹೂಡಿಕೆಯ ಕೊರತೆಯಿಂದ ಪರಿಸ್ಥಿತಿ ಇನ್ನಷ್ಟು ದುರ್ಭರವಾಯಿತು ಎನ್ನುವುದು, ಹಾಗೆನೇ ಅವರ ಇತರ ಹೇಳಿಕೆಗಳು ವಸ್ತುನಿಷ್ಠವೇ? ವಿಮರ್ಶಾತ್ಮಕವೇ?

ಮನಮೋಹನ್ ಅವರ 'ಬಳುವಳಿ'ಯೇ?

ಯುಪಿಎ ಸರಕಾರದ ಮೈಲಿಗಲ್ಲು ಕಾರ್ಯಕ್ರಮಗಳಾದ ರೇಗಾ, ರೈತರ ಸಾಲಮನ್ನಾ, ಆಹಾರದ ಹಕ್ಕು, ಶಿಕ್ಷಣದ ಹಕ್ಕು, ಇತ್ಯಾದಿ ಎಲ್ಲದರ ಕ್ರೆಡಿಟ್ ಅನ್ನು ಯಾದವ್ ಅವರು ಮನಮೋಹನ್ ಸಿಂಗ್ ಅವರಿಗೆ ಕೊಡುತ್ತಾರೆ. ಈ ಎಲ್ಲ ಕಾರ್ಯಕ್ರಮಗಳ ಹಿಂದಿನ ನಿರ್ದೇಶಕ ತತ್ವಗಳು ಯುಪಿಎ ಯ ಕನಿಷ್ಠ ಕಾರ್ಯಕ್ರಮದಲ್ಲಿ ಎಡಪಕ್ಷಗಳ ಒತ್ತಡದಿಂದ ಸೇರ್ಪಡೆಯಾದವು ಮತ್ತು ಇವು ಸೋನಿಯಾ ಗಾಂಧಿ ಅಧ್ಯಕ್ಷತೆಯ, ಎಡ ಪ್ರಗತಿಪರ ಪರಿಣತರಿದ್ದ National Advisory Council (NAC) ರೂಪಿಸಿದ ಯೋಜನೆಗಳು. NAC ಯ ರಚನೆ ಸಹ ಮನಮೋಹನ್ ಅವರ ಐಡಿಯಾವೇನಲ್ಲ. ವಾಸ್ತವವಾಗಿ, ಮನಮೋಹನ ಅವರ ಉದಾರೀಕರಣದ ನೀತಿಗಳಿಗೆ ಅದು ಕಡಿವಾಣ ಹಾಕುತ್ತಿದೆ. ಅದು 'ಅಸಂವಿಧಾನಿಕ', 'ಸೂಪರ್ ಕ್ಯಾಬಿನೆಟ್' 'ಪ್ರಧಾನಿಯನ್ನು ಡಮ್ಮಿ ಮಾಡಲಾಗಿದೆ' ಎಂಬೆಲ್ಲ ಟೀಕೆಗಳು ಬಿಜೆಪಿ ಮತ್ತು ಅದರ ಸಹಚರ ಪಕ್ಷಗಳಿಂದ ಹಾಗೂ 'ಶುದ್ಧ ಎಲ್‌ಪಿಜಿ' ಪ್ರತಿಪಾದಕರಿಂದ ಬಂದವು. ಇದರರ್ಥ ಮನಮೋಹನ ಅವರು ಇವೆಲ್ಲದರಿಂದ ಮುಕ್ತರಾಗಿದ್ದರೆ ಈ 'ಕಲ್ಯಾಣ ಯೋಜನೆ'ಗಳನ್ನು ಅನುಸರಿಸುತ್ತಿರಲಿಲ್ಲ ಎಂದಲ್ಲವೇ? ಹಾಗಾಗಿ ಜನತೆಗೆ ಕಲ್ಯಾಣ ಯೋಜನೆಗಳ ಸುರಕ್ಷತಾ ಜಾಲ ಕೊಡುವ ಜತೆಗೆ, ಎಲ್‌ಪಿಜಿ ನೀತಿಗಳ ರೂಪಿಸುವಿಕೆ ಮನಮೋಹನ್ ಸಿಂಗ್ ಅವರ 'ಬಳುವಳಿ'ಯೆಂದು ಯಾದವ್ ವಾದಿಸಿದ್ದು ಸಹ ವಸ್ತುನಿಷ್ಠವೂ ಅಲ್ಲ. ವಿಮರ್ಶಾತ್ಮಕವೂ ಅಲ್ಲ.

1991ರಲ್ಲಿ ಆರಂಭವಾದ ನವ–ಉದಾರವಾದಿ ನೀತಿಗಳಿಂದಾಗಿ



ಇತ್ತೀಚೆಗೆ (ಜನವರಿ 3 ರಂದು) 'ಜಾಗೃತ ಕರ್ನಾಟಕ' ಡಾ.ಮನಮೋಹನ ಸಿಂಗ್ ನೀತಿಗಳು–ಭಾರತದ ವರ್ತಮಾನ ಮತ್ತು ಭವಿಷ್ಯತ್ತು' ಎಂಬ ದೀರ್ಘ ಸಂವಾದವನ್ನು ಹಮ್ಮಿಕೊಂಡಿತ್ತು. ಮನಮೋಹನ ಸಿಂಗ್ ನಿಧನದ ನಂತರ ಕಾಂಗ್ರೆಸ್ ಮಾತ್ರವಲ್ಲದೆ ಪ್ರಧಾನಿ ಮೋದಿ, ಬಿಜೆಪಿ ವಕ್ತಾರರಿಂದ ಹಿಡಿದು ಗೋದಿ ಮೀಡಿಯಾದವರೆಗೆ 'ಭಾರೀ ಹೊಗಳಿಕೆ'ಗೆ ಭಾಜನರಾಗಿದ್ದರು. ಅವರು ಜೀವಂತವಾಗಿದ್ದಾಗ 'ಮೌನಿ', 'ಆಕಸ್ಮಿಕ' 'ರಿಮೋಟ್ ಕಂಟ್ರೋಲ್ಡ್' ಪ್ರಧಾನಿ ಎಂದೆಲ್ಲ ವೈಯಕ್ತಿಕವಾಗಿ ಹಳಿದಿದ್ದವರೂ ಸೇರಿದಂತೆ ಹಲವರು ಅವರ 'ಲೆಗೆಸಿ(ಬಳುವಳಿ)ಗೆ ಗುದ್ದಾಡುತ್ತಿದ್ದ ಮತ್ತು 'ಸಿಂಗ್ ಅವರಿಗೆ ನೀವು ಅವಮಾನ ಮಾಡಿದ್ದೀರಿ' ಎಂದು ಬಿಜೆಪಿ–ಕಾಂಗ್ರೆಸ್ ಬೈದಾಡುತ್ತಿದ್ದ ಸನ್ನಿವೇಶದಲ್ಲಿ ಈ ಸಂವಾದ ಬಹಳ ನಿರೀಕ್ಷೆ ಹುಟ್ಟಿಸಿತ್ತು. ಇದಲ್ಲದೆ 'ಜಾಗೃತ ಕರ್ನಾಟಕ' ಈ ಜನವರಿ 26ರಂದು ಒಂದು ರಾಜಕೀಯ ಸಂಘಟನೆಯಾಗಿ (ಪಕ್ಷವಾಗಿ ಅಲ್ಲ) ಹೊಮ್ಮುವುದಕ್ಕೆ ಇದೊಂದು 'ಮುನ್ನುಡಿ' ಎಂದಿದ್ದು ಇನ್ನಷ್ಟು ಗಮನ ಸೆಳೆದಿತ್ತು. ಈ ಹಿನ್ನೆಲೆಯಲ್ಲಿ ಈ ಸಂವಾದದ ಒಂದು ವಿಶ್ಲೇಷಣೆ.

ಅಸಮಾನತೆಯು ಅಗಾಧವಾಗಿ ಹೆಚ್ಚಿದೆ, ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ ಎಂಬುದು ನಿಜ. ಆದರೆ ಬಡವರು ಹೆಚ್ಚು ಬಡವರಾಗುತ್ತಿಲ್ಲ, ಅವರ ಆದಾಯ ಸಹ ಹೆಚ್ಚಿದೆ ಎಂದು ಪ್ರತಿಪಾದಿಸಿದ ಯಾದವ್, ಬಡವರ ಆದಾಯ ಹೆಚ್ಚಿದೆ ಎಂದು ಇಟ್ಟುಕೊಂಡರೂ ಜೀವನಾವಶ್ಯಕ ವಸ್ತುಗಳ ಬೆಲೆಗಳ ಸತತ ಹೆಚ್ಚಳದ ಸಂದರ್ಭದಲ್ಲಿ ಈ ಹೆಚ್ಚಿದ ಆದಾಯದಿಂದ ಬಡವರ ಕೊಳ್ಳುವ ಶಕ್ತಿ, ಜೀವನ ಮಟ್ಟ ಏರಿದೆಯೇ ಎಂಬದರ ಬಗ್ಗೆ ಮೌನವಾಗಿದ್ದರು. ಅದೇ ರೀತಿ ಯುಪಿಎ ಅವಧಿಯಲ್ಲಿ ಕಂಡುಬಂದ ಬಡತನ ರೇಖೆ ದಾಟಿದ ಸಾಧನೆ ಸಹ ಎಲ್‌ಪಿಜಿ ನೀತಿಗಳದ್ದಲ್ಲ. ಅದರಿಂದ ಉಂಟಾದ ಬೆಳವಣಿಗೆ ಸೃಷ್ಟಿಸಿದ ಉದ್ಯೋಗಗಳಿಂದಲ್ಲ. ವಾಸ್ತವವಾಗಿ ಮೇಲೆ ಹೇಳಿದ ಕಲ್ಯಾಣ ಯೋಜನೆಗಳ ಮತ್ತು ಬಡತನ ರೇಖೆಯನ್ನು ನಿರ್ವಹಿಸುವಾಗ ಯಾವಾಗಲೂ ಇದ್ದ ಗೋಲ್‌ಮಾಲ್‌ಗಳ ಒಟ್ಟು ಪರಿಣಾಮ. ಯಾದವ್ ಪ್ರಕಾರ ಎಲ್‌ಪಿಜಿಯ ಮೊದಲ 20 ವರ್ಷಗಳಲ್ಲಿ ಬಡತನ ಕಡಿಮೆಯಾಯಿತಂತೆ. ಇದು ನಿಜವೇ ಎಂದು ಬಡವರನ್ನೇ ಕೇಳಬೇಕು.

ದಲಿತರು ಹೆಚ್ಚು ಸಂತ್ರಸ್ತರಾದರು ಎಂದು ಒಪ್ಪಿಕೊಳ್ಳುತ್ತಾರೆ!

ದಲಿತರು ಎಲ್‌ಪಿಜಿ ನೀತಿಗಳಿಂದ ಹೆಚ್ಚು ಸಂತ್ರಸ್ತರಾದರು ಎಂದು ಯಾದವ್ ಒಪ್ಪಿಕೊಳ್ಳುತ್ತಾರೆ. ಯಾಕೆಂದರೆ ಖಾಸಗೀಕರಣದಿಂದ ಸಾರ್ವಜನಿಕ ಕ್ಷೇತ್ರದ ನಾಶ ದಲಿತರ ಉದ್ಯೋಗದ ಅವಕಾಶಗಳಿಗೆ ನೇರ ಹೊಡೆತ ಕೊಟ್ಟಿದೆ. ಖಾಸಗಿ ಕ್ಷೇತ್ರದಲ್ಲಿ ದಲಿತರನ್ನು, ಅಗತ್ಯ ಶಿಕ್ಷಣ ಮತ್ತು 'ಮೆರಿಟ್' ಇದ್ದ ದಲಿತರಿಗೂ ಬಲಶಾಲಿ ಜಾತಿಗಳ ಪ್ರಾಬಲ್ಯದಿಂದಾಗಿ ದಕ್ಕಿಲ್ಲವೆಂದು ಸಹ ಅವರು ಒಪ್ಪಿಕೊಳ್ಳುತ್ತಾರೆ. ಇದು ಒಟ್ಟು ಉದ್ಯೋಗಾವಕಾಶಗಳು ಮತ್ತು ಅದರಲ್ಲೂ ತಳ ಸಮುದಾಯದ ಎಲ್ಲರ ಉದ್ಯೋಗಾವಕಾಶಗಳ ಬಗೆಗೂ ನಿಜ ಎಂಬುದರ ಬಗ್ಗೆ ಯಾದವ್ ಮೌನವಾಗಿರುತ್ತಾರೆ. ಮುಸ್ಲಿಮರಿಗೆ ಶಿಕ್ಷಣದಲ್ಲಾಗಲಿ ಉದ್ಯೋಗದಲ್ಲಾಗಲಿ ಪರಿಣಾಮಕಾರಿ ಮೀಸಲಾತಿ ಇಲ್ಲದ್ದರಿಂದ ಅವರನ್ನು ಎಲ್‌ಪಿಜಿ ನೀತಿಗಳು ಬಾಧಿಸಿಲ್ಲವೆಂದು ಯಾದವ್ ಹೇಳುತ್ತಿಲ್ಲ. ಬಹುಪಾಲು ಮುಸ್ಲಿಮರು ಕರಕುಶಲ ಉತ್ಪನ್ನಗಳಲ್ಲಿ ತೊಡಗಿದ್ದು ಎಲ್‌ಪಿಜಿ ನೀತಿಗಳ (ಯಾದವ್ ಅವರ ಪ್ರಕಾರ) 'ಉದ್ದೇಶಪೂರ್ವಕವಲ್ಲದ' ಪರಿಣಾಮವಾಗಿ ಅವುಗಳ ನಾಶವಾಗಿದ್ದರಿಂದ ಮುಸ್ಲಿಮರನ್ನು 'ಪರೋಕ್ಷವಾಗಿ' ಬಾಧಿಸಿತು ಎನ್ನುತ್ತಾರೆ. ಹಾಗಾದರೆ ಎಲ್‌ಪಿಜಿ ಹರಿಯಬಿಟ್ಟ ಈ ಆರ್ಥಿಕ ಬೆಳವಣಿಗೆ ಯಾರಿಗೆ ಪ್ರಯೋಜನವಾಯಿತು ಎಂಬುದನ್ನು ಯಾದವ್ ಹೇಳುವುದಿಲ್ಲ. ಕೊನೆಗೂ ಯಾದವ್ ಪ್ರಕಾರ ಸಿಂಗ್‌ರ ಎಲ್‌ಪಿಜಿ ನೀತಿಗಳ ಸಾಧನೆ ಜಿಡಿಪಿಯ ಹೆಚ್ಚಳದ ಸರಾಸರಿ ದರ ಮಾತ್ರ.

ನಾನೂ ಎಲ್‌ಪಿಜಿ ವಿರೋಧಿಸಿದ್ದೆ!!

ಯಾದವ್ ಎಲ್‌ಪಿಜಿ ಮತ್ತು 'ಮನಮೋಹನಾಮಿಕ್ಸ್' ಅನ್ನು ಇಡಿಯಾಗಿ ಎತ್ತಿ ಹಿಡಿಯುವುದಲ್ಲದೆ, ಆ ಮೂಲಕ ಎಲ್‌ಪಿಜಿ ನೀತಿಗಳಿಗೂ ವೈಟ್ ವಾಶ್ ಮಾಡುತ್ತಾರೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ನಾನೂ ಎಲ್‌ಪಿಜಿ ಮತ್ತು 'ಮನಮೋಹನಾಮಿಕ್ಸ್' ಅನ್ನು 'ಸಾಂಪ್ರದಾಯಿಕ ಎಡಪಂಥೀಯ'ರಂತೆ ಕಟುವಾಗಿ ವಾದದಲ್ಲಿ ಮಾತ್ರವಲ್ಲ ಬೀದಿಯಲ್ಲೂ ವಿರೋಧಿಸಿದ್ದೆ. ಆದರೆ ಈಗ ಮರುಪರಿಶೀಲನೆ ಮಾಡುವಾಗ ಈ ಅಭಿಪ್ರಾಯಗಳಿಗೆ ಬಂದಿದ್ದೇನೆ ಎಂದರು. ಆದರೆ 'ಸಾಂಪ್ರದಾಯಿಕ ಎಡಪಂಥೀಯ' ಈ ಮರುಚಿಂತನೆ ಮಾಡುತ್ತಿಲ್ಲ, ಅವರು ಇನ್ನೂ ತಮ್ಮ ವಾದಕ್ಕೆ ಅಂಟಿಕೊಂಡಿದ್ದಾರೆ ಎಂದು ಹೆಜ್ಜೆ ಹೆಜ್ಜೆಗೂ ಟೀಕಿಸಿದರು. ಬರಿಯ 'ಖರ್ಚಿನ ಖಾತೆ' ಬಗ್ಗೆ ಮಾತ್ರ ಅವರ ಸೀಮಿತ ಚಿಂತನೆ. ಉತ್ಪಾದನೆ, ಬೆಳವಣಿಗೆ ಬಗ್ಗೆ ಅವರ ಚಿಂತನೆಯಿಲ್ಲ. ಬಂಡವಾಳಶಾಹಿ, ಸಮಾಜವಾದದ ಬೈನರಿಯಲ್ಲಿ ಮುಳುಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯ ಒಳಗಿನ ರಾಜಕೀಯ ಸಾಧ್ಯತೆಗಳನ್ನು ಅನ್ವೇಷಿಸುತ್ತಿಲ್ಲ. ಎಲ್‌ಪಿಜಿ ಗೆ ಬದಲಿ ನೀತಿಗಳನ್ನು ಗಂಭೀರವಾಗಿ ಪ್ರತಿಪಾದಿಸುತ್ತಿಲ್ಲ. 'ಸಾಂಪ್ರದಾಯಿಕ ಎಡಪಂಥೀಯ'ರ ಧೋರಣೆಗಳನ್ನು 'ಮೈಗಳ್ಳ' ಎಂದು ಪದೇ ಪದೇ ಅಣಕವಾಡಿದರು.

ಯಾದವ್ ಅವರ ರಾಜಕೀಯ ಚಿಂತನೆಗಳ ಪಲ್ಲಟ

ಯಾದವ್ ಅವರ ಈ ಬೇಜವಾಬ್ದಾರಿ ಬೀಸು ಹೇಳಿಕೆಗಳಿಗೆ ಎಡಪಕ್ಷಗಳ ಪರವಾಗಿ ಉತ್ತರಿಸಬೇಕಾಗಿದೆ. ಎಲ್‌ಪಿಜಿ ಮತ್ತು 'ಮನಮೋಹನಾಮಿಕ್ಸ್'ನ ಮೇಲೆ ಹೇಳಿದ ಎಲ್ಲಾ ಗೊಂದಲಗಳು, ವೈರುಧ್ಯಗಳು, ಕಳೆದ ಕೆಲವು ವರ್ಷಗಳ ಯಾದವ್ ಅವರ ರಾಜಕೀಯ ಚಿಂತನೆಗಳ ಪಲ್ಲಟದ ಕಾರಣದಿಂದ ಉಂಟಾದವು. ಲೋಹಿಯಾ ಸಮಾಜವಾದದಿಂದ ಆರಂಭಿಸಿ, ಒನ್–ಪಾಯಿಂಟ್ ಭ್ರಷ್ಟಾಚಾರ ವಿರೋಧ ಚಳುವಳಿ, ಎಎಪಿ, ಸ್ವರಾಜ್ ಚಳುವಳಿ ಮತ್ತು ಪಕ್ಷದ ಮೂಲಕ ಹಾದು 'ಭಾರತ ಜೋಡೋ ಯಾತ್ರೆ'ಯಲ್ಲಿ 'ಜ್ಞಾನೋದಯ'ವಾಗಿ ಕಾಂಗ್ರೆಸ್ ಪರ ಬುದ್ಧಿಜೀವಿ ವರೆಗಿನ ಅವರ ರಾಜಕೀಯ ಪಲ್ಲಟಗಳ ಪಯಣ, ಇವೆಲ್ಲವೂ ಅವರ ವೈಯಕ್ತಿಕ ಆಯ್ಕೆ. ಆದರೆ ಈ ಪಲ್ಲಟಗಳಲ್ಲಿ ಅವರ ರಾಜಕೀಯ ದೃಷ್ಟಿಕೋಣ ಇವೆಲ್ಲದರ ಕಲಸು ಮೇಲೊಗರವಾಗಿದೆ ಎಂಬುದು ಸ್ಪಷ್ಟ.

ಈ ಸಂವಾದದಲ್ಲಿ ಮೇಲೆ ತೋರಿಸಿದಂತೆ ಅವರು ತಮ್ಮ ಹಿಂದಿನ ಕನಿಷ್ಠ ವಸ್ತುನಿಷ್ಠತೆ ಮತ್ತು ವಿಮರ್ಶಾತ್ಮಕತೆಯನ್ನು ಕಳೆದುಕೊಂಡಂತಿದೆ. ಹಾಗಾಗಿಯೇ ಯುಪಿಎ ಅವಧಿಯ ಸಾಮಾಜಿಕ ಕಲ್ಯಾಣ ಯೋಜನೆ ಮತ್ತು ಅವರು ಮನಮೋಹನ ಸಿಂಗ್ ಅವರಿಗೆ 'ಕ್ರೆಡಿಟ್' ಕೊಡುವ ಎಲ್ಲಾ ಸಕಾರಾತ್ಮಕ ಬೆಳವಣಿಗೆಗಳು 'ಸಾಂಪ್ರದಾಯಿಕ ಎಡಪಂಥೀಯ' ಒತ್ತಡದಿಂದಾಗಿ ಎಂಬ ಸರಳ ಸತ್ಯದ ಬಗ್ಗೆ ಜಾಣ ಕುರುಡು ಪ್ರದರ್ಶಿಸುತ್ತಾರೆ.

ಬೂರ್ಜ್ವಾ, ಭೂಮಾಲಕ ವರ್ಗಗಳ ಕೈಯಲ್ಲಿ ಪ್ರಭುತ್ವ

ಸ್ವತಂತ್ರ ಬಾರತದ ಪ್ರಭುತ್ವ ಬೂರ್ಜ್ವಾ, ಭೂಮಾಲಕ ವರ್ಗಗಳ ಕೈಯಲ್ಲಿದೆ. ಸರಕಾರದ ಎಲ್ಲ ನೀತಿಗಳು ಈ ವರ್ಗಗಳ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲಿಕ್ಕಾಗಿ. ದುಡಿಯುವ ಜನರು ಸಿಡಿದೆದ್ದು ತಮ್ಮ ಆಳ್ವಿಕೆಗೆ ಅಪಾಯವೊಡ್ಡದಷ್ಟು ಮಾತ್ರ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಾರೆ. ದುಡಿಯುವ ಜನರನ್ನು ಸಂಘಟಿಸಿ ಹೋರಾಟ ಮಾಡದೆ ಅವರ ಹಿತಾಸಕ್ತಿಗಳನ್ನು ರಕ್ಷಿಸುವುದು ಸಾಧ್ಯವಿಲ್ಲವೆಂಬುದು ಎಡಪಂಥೀಯ ಪಕ್ಷಗಳಿಗೆ ಮತ್ತು ಬುದ್ಧಿಜೀವಿಗಳಿಗೆ ಚೆನ್ನಾಗಿ ತಿಳಿದಿದೆ. ಇದು 'ವಾಸ್ತವ ಪರಿಸ್ಥಿತಿಯ ನಿರ್ದಿಷ್ಟ ಅಧ್ಯಯನ ಮತ್ತು ಅಂಕಿ–ಅಂಶ ಆಧಾರಿತ ವಿಶ್ಲೇಷಣೆ'ಯ ಫಲ. 'ಮೈಗಳ್ಳ' ಧೋರಣೆಯಲ್ಲ. ಸಂರಚನಾತ್ಮಕ ಬದಲಾವಣೆಗಳನ್ನು ಮಾಡದೆ ಮತ್ತು ದುಡಿಯುವ ಜನರ ಜೀವನಮಟ್ಟ ಏರಿಸದೆ ಆಳುವ ವರ್ಗಗಳ ನೀತಿಗಳು ಬಿಕ್ಕಟ್ಟುಗ್ರಸ್ತವಾಗಿವೆ. ಈ ನೀತಿಗಳನ್ನು ಬದಲಾಯಿಸಲು ದುಡಿಯುವ ಜನರನ್ನು ಅಣಿನೆರೆಸುವುದು ಅಗತ್ಯ ಎಂಬುದು ಅವರಿಗೆ ಗೊತ್ತಿದೆ. ಇದಕ್ಕಾಗಿ ಆಯಾ ಘಟ್ಟದಲ್ಲಿ ಬದಲಿ ನೀತಿಗಳನ್ನು ನಿರ್ದಿಷ್ಟ ಅಧ್ಯಯನ–ವಿಶ್ಲೇಷಣೆಗಳ ಆಧಾರದ ಮೇಲೆ (ಮೈಗಳ್ಳ ಫಾರ್ಮುಲಾಗಳಲ್ಲ) ಪ್ರತಿಪಾದಿಸುತ್ತಾ ಬಂದಿವೆ.

ಆಳುವ ವರ್ಗಗಳ ಅಭಿವೃದ್ಧಿ ನೀತಿಗಳಲ್ಲಿನ ವಿವಿಧ ಹಂತಗಳು (50–60–70ರ ದಶಕಗಳ ಲೈಸೆನ್ಸ್–ಪರ್ಮಿಟ್ ರಾಜ್, 1980ರ ದಶಕದ ಉದಾರೀಕರಣ, 1991ರ ಎಲ್‌ಪಿಜಿ, ಆ ಮೇಲಿನ

ಪುಟ 7 ಕ್ಕೆ

ಜವಳಿ ಗಿರಣಿಗಳಲ್ಲಿನ ಕಾರ್ಮಿಕರ ಶೋಷಣೆಯ ವಿರುದ್ಧ ಹೋರಾಡಿ ಹುತಾತ್ಮರಾದ
ಚಿನ್ನಿಯಂಪಾಳ್ಯಂನ ನಾಲ್ವರು ಯುವ ಹೋರಾಟಗಾರರು

ಅದು ಎರಡನೇ ಮಹಾಯುದ್ಧದ ಸಮಯ. ಬೇಡಿಕೆ ಹೆಚ್ಚಾದಂತೆ ತಮಿಳುನಾಡಿನ ಕೊಯಮತ್ತೂರು ಹತ್ತಿ ಗಿರಣಿಗಳು ಉತ್ಪಾದನೆಯನ್ನು ತ್ವರಿತಗತಿಯಲ್ಲಿ ಹೆಚ್ಚಿಸಿ ಭಾರಿ ಲಾಭ ಗಳಿಸುತ್ತಿದ್ದ ಸಮಯ. ಲಾಭ ಹೆಚ್ಚುತ್ತಾ ಹೋದಂತೆ ಜವಳಿ ಗಿರಣಿಗಳಲ್ಲಿನ ಕಾರ್ಮಿಕರ ಶೋಷಣೆಯೂ ವಿಪರೀತವಾಯಿತು. ಅಲ್ಲಿ ಕೆಲಸ ಮಾಡುವ ಸಾವಿರಾರು ಪುರುಷರು ಮತ್ತು ಮಹಿಳೆಯರು ಕ್ರೂರ ಶೋಷಣೆಗೆ ಒಳಗಾಗಿದ್ದರು. ಕಾರ್ಮಿಕರು ದಿನಕ್ಕೆ 14 ರಿಂದ 15 ಗಂಟೆಗಳ ಕಾಲ ಕೆಲಸ ಮಾಡಬೇಕಾಯಿತು. ಇದರ ವಿರುದ್ಧ ಕಾರ್ಮಿಕರ ಪ್ರತಿಭಟನೆಗಳೂ ತೀವ್ರಗೊಂಡವು. ಪ್ರತಿ ಗಿರಣಿಗಳಲ್ಲಿ ಗಣನೀಯ ಸಂಖ್ಯೆಯ ಮಹಿಳೆಯರು ಕೆಲಸ ಮಾಡುತ್ತಿದ್ದರು. ಅದರಲ್ಲೂ 'ರೀಲಿಂಗ್' ವಿಭಾಗದಲ್ಲಿ ಹೆಚ್ಚು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದರು.

ಜವಳಿ ಗಿರಣಿಗಳ ಆಡಳಿತ ಮಂಡಳಿಗಳು ಸ್ಥಳೀಯ ರೌಡಿಗಳನ್ನು ಮೇಸ್ತ್ರಿಗಳಾಗಿ (ಮೇಲ್ವಿಚಾರಕರು) ನೇಮಿಸಿಕೊಂಡರು. ಮಾಲೀಕರು ಕಾರ್ಮಿಕರಿಗೆ ಬರಬೇಕಾದ ವೇತನ ಬಾಕಿಗಳನ್ನು ಕೊಡಲು ನಿರಾಕರಿಸುವ ಮೂಲಕ ಮತ್ತಷ್ಟು ಲಾಭ ಗಳಿಸಲು ಮುಂದಾದರು. ಇದರ ವಿರುದ್ಧ ಕಾರ್ಮಿಕರ ಪ್ರತಿಭಟನೆಗಳೂ



ತೀವ್ರಗೊಂಡವು. ರಾಮಯ್ಯನ್, ರಂಗಣ್ಣನ್, ವೆಂಕಟಾಚಲಂ ಮತ್ತು ಚಿನ್ನಯ್ಯನ್ ಎಂಬ ನಾಲ್ವರು ಯುವ ಕಾರ್ಮಿಕರು ಕಾರ್ಮಿಕರ ಪರವಾಗಿ ಧ್ವನಿ ಎತ್ತುವಲ್ಲಿ ಮತ್ತು ಅವರ ಹಕ್ಕುಗಳಿಗಾಗಿ ಹೋರಾಡುವಲ್ಲಿ ಮುಂಚೂಣಿಯಲ್ಲಿದ್ದರು. ಇದು ದಮನಕಾರಿ ಆಡಳಿತ ಮಂಡಳಿಗೆ ಇಷ್ಟವಾಗಲಿಲ್ಲ. ಜವಳಿ ಗಿರಣಿಗಳ ಕಾರ್ಮಿಕರ ನಿರಂತರ ಪ್ರತಿಭಟನೆಗಳಿಂದಾಗಿ ಕೊಯಮತ್ತೂರು ಅಸ್ತವ್ಯಸ್ತವಾಗಿತ್ತು.

ರಂಗಾ ವಿಲಾಸ್ ಗಿರಣಿಯಲ್ಲಿ ಅಂತಹ ಮೇಸ್ತ್ರಿಗಳಲ್ಲಿ ಪೊನ್ನನ್ ಒಬ್ಬರು. ಅವನು ಮಹಿಳಾ ಕಾರ್ಮಿಕರನ್ನು ಲೈಂಗಿಕವಾಗಿ ಕಿರುಕುಳ ಮತ್ತು ಶೋಷಣೆ ಮಾಡುತ್ತಿದ್ದನು. ರಾಜಿ ಎಂಬ ಮಹಿಳಾ ಕಾರ್ಮಿಕಳು ಲೈಂಗಿಕ ಕಿರುಕುಳವನ್ನು ವಿರೋಧಿಸುವಷ್ಟು ಧೈರ್ಯಶಾಲಿಯಾಗಿದ್ದಳು ಮಾತ್ರವಲ್ಲದೆ, ಆರ್ಥಿಕ ಮತ್ತು ಲಿಂಗ ದಬ್ಬಾಳಿಕೆಯ ವಿರುದ್ಧದ ಮಹಿಳಾ ಕಾರ್ಮಿಕರ ಹೋರಾಟದಲ್ಲಿಯೂ ಮುಂದಾಳತ್ವ ವಹಿಸಿದ್ದಳು.

ಕೊಯಮತ್ತೂರು ಹತ್ತಿ ಗಿರಣಿಗಳ ಮೂಲ

ಇಂಗ್ಲಿಷ್ ಉದ್ಯಮಿ ಸ್ಟೇನ್ಸ್ 1888ರಲ್ಲಿ, ಕೊಯಮತ್ತೂರಿನ ಮೊದಲ ಜವಳಿ ಗಿರಣಿಯನ್ನು ಪ್ರಾರಂಭಿಸಿದರು. ಕೊಯಮತ್ತೂರಿನಲ್ಲಿ ಜವಳಿ ಉದ್ಯಮಕ್ಕೆ ಅನುಕೂಲಕರ ವಾತಾವರಣ ಮತ್ತು ಕೈಗಾರಿಕಾ ಬಂಡವಾಳಶಾಹಿಗಳಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಸರ್ಕಾರದ ನಿಕಟತೆಯು ನಂತರದ ವರ್ಷಗಳಲ್ಲಿ ಹಲವು ಜವಳಿ ಗಿರಣಿಗಳ ಪ್ರಸರಣಕ್ಕೆ ಕಾರಣವಾಯಿತು. 1911 ರಲ್ಲಿ, ರಂಗ ವಿಲಾಸ್ ಒಂದು ಜಿನ್ನಿಂಗ್ ಕಾರ್ಖಾನೆಯಾಗಿತ್ತು. ನಂತರ ಇದನ್ನು 1922ರ ಹೊತ್ತಿಗೆ ಜವಳಿ ಗಿರಣಿಯಾಗಿ ಅಭಿವೃದ್ಧಿಪಡಿಸಲಾಯಿತು. ಈ ಪ್ರಕ್ರಿಯೆಯಲ್ಲಿ, ಕೊಯಮತ್ತೂರು ನೂಲುವ ಮತ್ತು ಜವಳಿ ಗಿರಣಿಗಳ ಕೇಂದ್ರವಾಯಿತು ಮತ್ತು 'ದಕ್ಷಿಣ ಭಾರತದ ಮ್ಯಾಂಚೆಸ್ಟರ್' ಎಂದು ಹೊರಹೊಮ್ಮಿ ಪ್ರಸಿದ್ಧವಾಯಿತು.

ಕಮ್ಯುನಿಸ್ಟರ ನೇತೃತ್ವದಲ್ಲಿ ಗಿರಣಿ ಕಾರ್ಮಿಕರ ಸಂಘ

1936ರಲ್ಲಿ ಕೊಯಮತ್ತೂರಿನಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ಮಿಲ್ ವರ್ಕರ್ಸ್ ಯೂನಿಯನ್ ಪ್ರಾರಂಭವಾಯಿತು. ಗಿರಣಿ ಕಾರ್ಮಿಕರು ತಮ್ಮ ಮೂಲಭೂತ ಹಕ್ಕುಗಳಿಗಾಗಿ ಪ್ರತಿಭಟನೆಗಳನ್ನು ಮುಂದುವರೆಸಿದರು. ಕೆಲಸದ ಅವಧಿ, ಕಾನೂನಾತ್ಮಕ ವೇತನ, ಮಹಿಳಾ ಕಾರ್ಮಿಕರಿಗೆ ಸಮಾನ ವೇತನ, ಹೆರಿಗೆ ರಜೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮುಂತಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸಲಾಯಿತು.

ನ್ಯಾಯಮೂರ್ತಿ ನೇತೃತ್ವದ ಆಯೋಗ ರಚನೆ

ಬ್ರಿಟಿಷ್ ಸರ್ಕಾರದ ತೀವ್ರ ದಬ್ಬಾಳಿಕೆಯನ್ನು ಎದುರಿಸಿ ತೀವ್ರ ಪ್ರತಿಭಟನೆಗಳು ನಡೆದ ಪರಿಣಾಮವಾಗಿ, ಕಾರ್ಮಿಕರ ಸ್ಥಿತಿಯನ್ನು ತನಿಖೆ ಮಾಡಿ ಸರ್ಕಾರಕ್ಕೆ ವರದಿ ಮಾಡಲು ನ್ಯಾಯಮೂರ್ತಿ ವೆಂಕಟರಾಮಯ್ಯ ನೇತೃತ್ವದ ಏಕವ್ಯಕ್ತಿ ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಮುಂದೆ ಕಾರ್ಮಿಕರ ಪರವಾಗಿ ಸಂಘದ ಮುಖಂಡ ಬಿ. ರಾಮಮೂರ್ತಿ ಹಾಜರಾಗಿ ಸಮರ್ಥವಾಗಿ ವಾದ ಮಂಡಿಸಿದರು. ವೇತನ ಹೆಚ್ಚಳ ಮತ್ತು ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಲು ಆಯೋಗವು ಶಿಫಾರಸು ಮಾಡಿತು. ಈ ವಿಜಯವು ಟ್ರೇಡ್ ಯೂನಿಯನ್ ಚಳವಳಿಯ ಬಗ್ಗೆ ಕಾರ್ಮಿಕರಲ್ಲಿ ಹೆಚ್ಚಿನ ವಿಶ್ವಾಸವನ್ನು ಮೂಡಿಸಿತು.

ಎಲ್ಲ ಜವಳಿ ಗಿರಣಿಗಳಿಗೂ ವ್ಯಾಪಿಸಿತು

ಇದರ ಬೆನ್ನಲ್ಲೇ ಟ್ರೇಡ್ ಯೂನಿಯನ್ ಚಳವಳಿ ಕೊಯಮತ್ತೂರಿನ ಎಲ್ಲ ಜವಳಿ ಗಿರಣಿಗಳಿಗೂ ವ್ಯಾಪಿಸಿತು. ಮಹಿಳಾ ಕಾರ್ಮಿಕರನ್ನೂ ಸಂಘಟಿಸಲಾಯಿತು. ಕೆಂಪು ಧ್ವಜದ ಸಂಘಟನೆಯು 'ಸಮಾನ ಕೆಲಸಕ್ಕೆ ಸಮಾನ ವೇತನ'ಕ್ಕೆ ಒತ್ತಾಯಿಸಿತು. ಹೆರಿಗೆಗೆ ಮುನ್ನ ಆರು ವಾರ ಹಾಗೂ ನಂತರ ಆರು ವಾರ ರಜೆ ನೀಡಬೇಕೆಂಬ ಬೇಡಿಕೆಯೂ ಇತ್ತು. 1935ರಲ್ಲಿ, ಮದ್ರಾಸ್ ಪ್ರಾಂತೀಯ ಸರ್ಕಾರವು ಹೆರಿಗೆ ಸೌಲಭ್ಯವನ್ನು ಒದಗಿಸಲು ಕಾನೂನು ತಂದಿತಾದರೂ, ಅದನ್ನು ಜಾರಿಗೆ ತರಲು ಗಿರಣಿ ಆಡಳಿತಗಾರರು ನಿರಾಕರಿಸಿದರು. ರಾಜಲಕ್ಷ್ಮಿ ಮಿಲ್ ಆಡಳಿತವು, ಐದು ವರ್ಷಗಳವರೆಗೆ ಮಕ್ಕಳಾಗುವುದಿಲ್ಲ ಎಂದು ಪ್ರತಿಜ್ಞೆ ಮಾಡುವಂತೆ ವಿವಾಹಿತ ಮಹಿಳಾ ಕಾರ್ಮಿಕರನ್ನು ಒತ್ತಾಯಿಸಿತು. ಇದಕ್ಕೆ ಕಾರ್ಮಿಕ ಸಂಘಟನೆ ತೀವ್ರ ವಿರೋಧ ವ್ಯಕ್ತಪಡಿಸಿತು.

ಮಹಿಳಾ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ

ಗಿರಣಿಗಳಲ್ಲಿ ಮೇಸ್ತ್ರಿಗಳಿಂದ ಮಹಿಳಾ ಕಾರ್ಮಿಕರಿಗೆ ಲೈಂಗಿಕ ಕಿರುಕುಳ ನೀಡಲಾಯಿತು. ಇವುಗಳ ವಿರುದ್ಧ ಕೆಂಪು ಬಾವುಟ ಸಂಘಗಳು ತೀವ್ರ ಹೋರಾಟ ನಡೆಸಿದವು. ಮಹಿಳೆಯರು ಹೆಚ್ಚು ಕೆಲಸ ಮಾಡುವ ಕಡೆಗಳಲ್ಲಿ ಮಹಿಳಾ ಮೇಸ್ತ್ರಿಗಳನ್ನು ನೇಮಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಇದರಿಂದ ಕೆಲವು ಗಿರಣಿಗಳಲ್ಲಿ ಮಹಿಳಾ ಮೇಸ್ತ್ರಿಗಳನ್ನು ನೇಮಿಸಿದರು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಅಗಾಧವಾದ ಲಾಭವು ಕಾರ್ಮಿಕರನ್ನು ಮತ್ತಷ್ಟು ಶೋಷಿಸಲು ಬಂಡವಾಳಶಾಹಿಗಳನ್ನು ಉತ್ತೇಜಿಸಿತು. ಇದರಿಂದಾಗಿ ಸರಣಿ ಪ್ರತಿಭಟನೆಗಳು ಭುಗಿಲೆದ್ದವು.

ಸಂಘಟನೆಯ ನಾಯಕಿ ಮೇಲೆ ಸಾಮೂಹಿಕ ಅತ್ಯಾಚಾರ

ಲಕ್ಷ್ಮೀ ಮಿಲ್ ನಲ್ಲಿ ನಡೆದ ಪ್ರತಿಭಟನೆಗೆ ಕಮ್ಯುನಿಸ್ಟ್ ಮುಖಂಡರಾದ ರಾಮಮೂರ್ತಿ ಮತ್ತು ಜೀವಾ ನೇರವಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು. ಇದರಿಂದ ಕುಪಿತಗೊಂಡ ಗಿರಣಿಗಳ ಆಡಳಿತಗಳು, ಪ್ರತಿ ಗಿರಣಿಯಲ್ಲಿ ಟ್ರೇಡ್ ಯೂನಿಯನ್ ಚಳವಳಿಯ ಮುಂಚೂಣಿಯಲ್ಲಿದ್ದವರ ಮೇಲೆ ಸೇಡು ತೀರಿಸಿಕೊಳ್ಳಲು ಆರಂಭಿಸಿದವು. ಕೆಲಸ ನಿರಾಕರಣೆ, ತಾತ್ಕಾಲಿಕ ವಜಾ ಹೀಗೆ ನಾನಾ ರೂಪಗಳಲ್ಲಿ ಕಿರುಕುಳ ನೀಡಲಾಗುತ್ತಿತ್ತು. ಮಹಿಳಾ ಸಂಘಟನೆಯ ನಾಯಕರೂ ಈ ಪ್ರತೀಕಾರದಿಂದ ಪಾರಾಗಲಿಲ್ಲ. ಈ ಪ್ರತೀಕಾರದ ಪರಾಕಾಷ್ಠೆ ಎಂದರೆ 1944 ರ ಕೊಯಮತ್ತೂರಿನ ರಂಗ ವಿಲಾಸ್ ಮಿಲ್ ಘಟನೆ. ಆ ದುರದೃಷ್ಟಕರ ದಿನದ ಮುಂಜಾನೆ, ಕಾರ್ಮಿಕರ ಸಂಘಟನೆಯನ್ನು ಮುನ್ನಡೆಸುವ ಮಹಿಳಾ ಸಂಘಟನೆಯ ನಾಯಕಿ ರಾಜಿ ತನ್ನ ಸಹೋದ್ಯೋಗಿಗಳಿಂದ ಬೇರ್ಪಟ್ಟ ನಂತರ ಒಂಟಿಯಾಗಿ ನಡೆದುಕೊಂಡು ಹೋಗುತ್ತಿದ್ದಾಗ, ಕುದುರೆ ಬಂಡಿಯಲ್ಲಿ ಬಂದ ಮ್ಯಾನೇಜ್ಮೆಂಟ್ ಬೆಂಬಲಿತ ನಾಲ್ವರ ಗುಂಪೊಂದು ಅವಳನ್ನು ಅಡ್ಡಗಟ್ಟಿತು. ಅವರು ರಾಜಿಯ ಕೈಗಳನ್ನು ಬಲವಂತವಾಗಿ ಕಟ್ಟಿ ಬಂಡಿಗೆ ತಳ್ಳಿದರು. ಚೀರಾಡದಂತೆ ಅವಳ ಬಾಯಿಯನ್ನು ಬಟ್ಟೆಗಳಿಂದ ಮುಚ್ಚಿದರು. ನಂತರ, ನಿರ್ಜನ ಸ್ಥಳಕ್ಕೆ ಕರೆದೊಯ್ದು, ಆಕೆಯ ಮೇಲೆ ಮೇಸ್ತ್ರಿ ಪೊನ್ನನ್ ಸೇರಿದಂತೆ ಸಾಮೂಹಿಕ ಅತ್ಯಾಚಾರ ಮಾಡಿದರು.

ಈ ಭಯಾನಕ ಸುದ್ದಿ ತಿಳಿದ ಸಂಘದ ಮುಖಂಡರು ಹಾಗೂ ಚಿನ್ನಿಯಂಪಾಳಯಂನ ರಾಮಯ್ಯನ್, ರಂಗಣ್ಣನ್, ವೆಂಕಟಾಚಲಂ ಮತ್ತು ಚಿನ್ನೈಯನ್ ಎಂಬ ನಾಲ್ವರು ಯುವ ಕಾರ್ಮಿಕರು ಸ್ಥಳಕ್ಕೆ ಧಾವಿಸಿ ಅಪರಾಧಿ ಪೊನ್ನನ್ ಅನ್ನು ಥಳಿಸಿದರು. ಆಗ ನಡೆದ ಗಲಾಟೆಯಲ್ಲಿ ಜನರ, ವಿಶೇಷವಾಗಿ ಮಹಿಳಾ ಕಾರ್ಮಿಕರ ಕೋಪದ ಪರಿಣಾಮವಾಗಿ ಗಾಯಗೊಂಡಿದ್ದ ಪೊನ್ನನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು, ಕೆಲ ದಿನಗಳ ನಂತರ ಅವರು ಸಾವನ್ನಪ್ಪಿದ್ದರು.

ಕೊಲೆ ಆರೋಪ ಹೊರಿಸಿ ನಾಲ್ವರ ಬಂಧನ

ಜವಳಿ ಟ್ರೇಡ್ ಯೂನಿಯನ್ ಕೆಲಸದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ನಾಲ್ವರು ಯುವ ಹೋರಾಟಗಾರರ ವಿರುದ್ಧ ಸೇಡು ತೀರಿಸಿಕೊಳ್ಳಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ ಗಿರಣಿ ಆಡಳಿತ ಮಂಡಳಿ, ಬ್ರಿಟೀಷ್ ಸರ್ಕಾರದ ನೆರವಿನಿಂದ, ಭ್ರಷ್ಟ ಪೊಲೀಸರೊಂದಿಗೆ ಶಾಮೀಲಾಗಿ, ಕೊಲೆ ಸೇರಿದಂತೆ ಸುಳ್ಳು ಆರೋಪಗಳನ್ನು ಹೊರಿಸಿತು. ಚಿನ್ನಿಯಂಪಾಳಯಂ ಗ್ರಾಮವು ಸೇರುವ ಸಿಂಗಾನಲ್ಲೂರು ಪೊಲೀಸರು, ನಾಲ್ವರು ಉದಯೋನ್ಮುಖ ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೆ ಕೊಲೆ ಆರೋಪದಡಿಯಲ್ಲಿ ಪ್ರಕರಣ ದಾಖಲಿಸಿ, ಅವರನ್ನು ಬಂಧಿಸಿ ಜೈಲಿನಲ್ಲಿಟ್ಟರು.

ಮರಣದಂಡನೆ ವಿಧಿಸಲು ಆದೇಶ

ಕಾರ್ಮಿಕರ ಸಾಮೂಹಿಕ ಒಗ್ಗಟ್ಟು ಮತ್ತು ಬೆಂಬಲ ಐತಿಹಾಸಿಕ ಮತ್ತು ಅಭೂತಪೂರ್ವ. ನಾಲ್ವರ ಪ್ರಕರಣ ವಿಚಾರಣೆಗೆ ಬಂದಾಗಲೆಲ್ಲಾ, ಜೈಲಿನಲ್ಲಿರುವ ತಮ್ಮ ಒಡನಾಡಿಗಳ ಜೊತೆ ತಮ್ಮ ಒಗ್ಗಟ್ಟನ್ನು ವ್ಯಕ್ತಪಡಿಸಲು ಸಾವಿರಾರು ಕಾರ್ಮಿಕರು ನ್ಯಾಯಾಲಯದ ಆವರಣದಲ್ಲಿ ಸೇರುತ್ತಿದ್ದರು. ಅವಿಭಜಿತ ಕಮ್ಯುನಿಸ್ಟ್ ಪಕ್ಷ ಮತ್ತು ಅವರ ಟ್ರೇಡ್ ಯೂನಿಯನ್ ಕೂಡ ಅವರನ್ನು ಉಳಿಸಲು ಪ್ರಯತ್ನಿಸಿತು. ಜೈಲಿನಲ್ಲಿರುವ ಕಾರ್ಮಿಕರನ್ನು ಪ್ರತಿನಿಧಿಸಲು ಜನಪ್ರಿಯ ಪ್ರಮುಖ ವಕೀಲರು ತೊಡಗಿಸಿಕೊಂಡಿದ್ದರು. ಆದರೂ, ಕೆಳ ನ್ಯಾಯಾಲಯವು ಅವರನ್ನು ಗಲ್ಲಿಗೇರಿಸಲು ಆದೇಶಿಸಿತು. ಅವರ ಮನವಿಯನ್ನು ಲಂಡನ್ ನಲ್ಲಿರುವ ಖಾಸಗಿ ಮಂಡಳಿಗೆ ಕೊಂಡೊಯ್ಯಲಾಯಿತು. ಇಂಗ್ಲೆಂಡಿನ ಪ್ರಸಿದ್ಧ ವಕೀಲರಾದ ಟಿ.ಎನ್.ಪ್ರಿಟ್ ಅವರು ಕಾರ್ಮಿಕರ ಪರವಾಗಿ ವಾದಿಸಿದರು. ಆದರೆ, ಎಲ್ಲಾ ಪ್ರಯತ್ನಗಳು ವ್ಯರ್ಥವಾಯಿತು. ಮತ್ತೊಂದೆಡೆ, ಖಾಸಗಿ ಮಂಡಳಿಯು ನಾಲ್ವರು ಕಾರ್ಮಿಕರಿಗೂ ಮರಣದಂಡನೆ ವಿಧಿಸಲು ಆದೇಶಿಸಿತು.

ಅವರಲ್ಲಿ ಒಬ್ಬರು ಅಪರಾಧ ಒಪ್ಪಿಕೊಂಡರೆ ಮೂವರನ್ನು ಬಿಡುಗಡೆ ಮಾಡಬಹುದು ಎಂದು ಪ್ರಿವಿ ಕೌನ್ಸಿಲ್ ಅವರಿಗೆ ರಿಯಾಯಿತಿ ನೀಡಿತು. ಆದರೆ, ನಾಲ್ವರು ಹೋರಾಟಗಾರರೂ ಒಗ್ಗಟ್ಟಿನಿಂದ ಆ ಪ್ರಸ್ತಾಪವನ್ನು ತಿರಸ್ಕರಿಸಿದರು. ಅವರು ಪ್ರಿವಿ ಕೌನ್ಸಿಲ್ ಗೆ 'ತಾವು ಒಟ್ಟಿಗೆ ವಾಸಿಸುತ್ತೇವೆ ಅಥವಾ ಒಟ್ಟಿಗೆ ಸಾಯುತ್ತೇವೆ ಮತ್ತು ಎಂದಿಗೂ ಅಪರಾಧವನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ತಿಳಿಸಿದರು. ಕಪೋಲಕಲ್ಪಿತ ಸುಳ್ಳು ಪ್ರಕರಣ ಎಂಬುದು ಅವರಿಗೆ ಖಚಿತವಾಗಿತ್ತು. ನ್ಯಾಯಾಲಯವು ಮರಣದಂಡನೆಯನ್ನು ಎತ್ತಿಹಿಡಿಯಿತು. ಮರಣ ದಂಡನೆಯ ಈ ತೀರ್ಪು ಕೊಯಮತ್ತೂರು ಕಾರ್ಮಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಯಿತು.

'ನಮ್ಮನ್ನು ಒಂದೇ ಗುಂಡಿಯಲ್ಲಿ ಹೂತುಹಾಕಿ'

ಅಂತಿಮ ತೀರ್ಪಿನ ನಂತರ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕರಾದ ಪಿ.ರಾಮಮೂರ್ತಿ,

ಪುಟ 10 ಕ್ಕೆ

ಬಿಗಡಾಯಿಸುತ್ತಿರುವ ಆರ್ಥಿಕ ಸಂಕಷ್ಟ

ಪ್ರಕಾಶ್ ಕಾರತ್

ಸದ್ಯಕ್ಕೆ ಅಧಿಕೃತವಾಗಿ ಪ್ರಕಟಿಸಲಾಗುತ್ತಿರುವ ಜಿಡಿಪಿ ಬೆಳವಣಿಗೆ ಅಂಕಿಅಂಶಗಳು ಅನುಮಾನಾಸ್ಪದವಾಗಿವೆ. ಗ್ರಾಹಕ ಬೆಲೆ ಸೂಚ್ಯಂಕದಿಂದ (ಸಿಪಿಐ) ಹೊರಹೊಮ್ಮುತ್ತಿರುವ ಕಾಲು ಭಾಗದಷ್ಟೂ ಇಲ್ಲದ ಸೂಚ್ಯವಾದ ಹಣದುಬ್ಬರ ದರದ ಮೇಲೆ ಅದನ್ನು ಲೆಕ್ಕ ಹಾಕಿರುವುದರಿಂದ ಈ ಅನುಮಾನ ಮೂಡುತ್ತದೆ. ಬಹಳ ನಯವಂಚನೆಯಿಂದ ಈ ಅಂಕಿಸಂಖ್ಯೆಗಳನ್ನು ಜನರ ಮುಂದೆ ಇಡುತ್ತಿದ್ದರೂ ಆರ್ಥಿಕತೆ ನಿಧಾನಗತಿಯಲ್ಲಿ ಸಾಗುತ್ತಿದೆ ಎಂಬ ವಾಸ್ತವತೆಯನ್ನು ಯಾರಿಂದಲೂ ಮುಚ್ಚಿಡಲು ಸಾಧ್ಯವಿಲ್ಲ. 2024–25ಕ್ಕೆ ಸಂಬಂಧಿಸಿದ ಜಿಡಿಪಿ ಅಂದಾಜು ಕೂಡ ಇದನ್ನೇ ಬಹಿರಂಗಪಡಿಸಿದೆ. 2025ನೇ ಹಣಕಾಸು ವರ್ಷದ ಮುಂಗಡ ಅಂದಾಜು ಭಾರತದ ನೈಜ ಜಿಡಿಪಿ ಬೆಳವಣಿಗೆಯು ಹಿಂದಿನ ವರ್ಷದ ಶೇ. 8.2ರ ಬದಲಿಗೆ ಶೇ. 6.4 ಆಗಲಿದೆ ಎಂದು ಹೇಳಿದೆ. ಇದಕ್ಕೂ ಮುನ್ನ ಜುಲೈ–ಸೆಪ್ಟೆಂಬರ್ ಅವಧಿಯ ಮೂರನೇ ತ್ರೈಮಾಸಿಕದ ಬೆಳವಣಿಗೆ ಶೇ. 5.4 ಆಗಿತ್ತು.

ಭಾರತ, ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ ಹಾಗೂ 2027ರ ಹೊತ್ತಿಗೆ ಭಾರತ 5 ಟ್ರಿಲಿಯನ್ ಆರ್ಥಿಕತೆಯಾಗಲಿದೆ ಎಂಬ ಬಡಬಡಿಕೆಗಳು ಏನೇ ಇದ್ದರೂ ವಾಸ್ತವಾಂಶ ತೀರಾ ಭಿನ್ನವಾಗಿದೆ. ನಿರುದ್ಯೋಗ, ಅಧಿಕ ಆಹಾರ ಹಣದುಬ್ಬರ, ಗ್ರಾಹಕರ ವೆಚ್ಚದಲ್ಲಿ ಸ್ಥಗಿತತೆ, ಸಣ್ಣ ಚಿಲ್ಲರೆ ಸಾಲ ಮರುಪಾವತಿ ವೈಫಲ್ಯ ಹೆಚ್ಚುತ್ತಿರುವುದು ಮತ್ತು ಕುಸಿಯುತ್ತಿರುವ ಉತ್ಪಾದನೆ –ಇವೆಲ್ಲವೂ ಸರಕಾರದ ಆರ್ಥಿಕ ನೀತಿಗಳು ದಿವಾಳಿಯಾಗಿರುವುದರ ಸಂಕೇತಗಳಾಗಿವೆ.

ಮಾರುಕಟ್ಟೆಯಲ್ಲಿ ಬೇಡಿಕೆಯ ಕೊರತೆಯೇ ಆರ್ಥಿಕತೆಯ ನಿಧಾನಗತಿ ಮುಂದುವರಿಯಲು ಮುಖ್ಯ ಕಾರಣವಾಗಿದೆ. ಕಡಿಮೆ ಆದಾಯದ ಕಾರಣ ಜನರಲ್ಲಿ ಸಾಕಷ್ಟು ಕೊಳ್ಳುವ ಶಕ್ತಿ ಇಲ್ಲದಿರುವುದರ ಪರಿಣಾಮ ಇದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿನ ನಾಲ್ಕು ಸದಸ್ಯರ ಕುಟುಂಬದ ಸರಾಸರಿ ಮಾಸಿಕ ಖರ್ಚು 8,079 ರೂಪಾಯಿ ಹಾಗೂ ನಗರ ಪ್ರದೇಶಗಳಲ್ಲಿ 14,528 ರೂಪಾಯಿ ಎನ್ನುವುದನ್ನು 2023–24ನೇ ಸಾಲಿನ ಕೌಟುಂಬಿಕ ಗ್ರಾಹಕ ವೆಚ್ಚಗಳ ಕುರಿತು ಇತ್ತೀಚೆಗೆ ಬಿಡುಗಡೆಯಾಗಿರುವ ದತ್ತಾಂಶ ತೋರಿಸುತ್ತದೆ. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಹಣದುಬ್ಬರದಿಂದಾಗಿ ಇದು ಇನ್ನಷ್ಟು ಬಿಗಡಾಯಿಸಿದೆ. ಇವೆರಡೂ ಕೂಡ ಗಳಿಕೆಯನ್ನು ಇನ್ನಷ್ಟು ಕುಸಿಯುವಂತೆ ಮಾಡುತ್ತವೆ.



ಬೇಡಿಕೆಯಲ್ಲಿನ ಕೊರತೆಯು ಉತ್ಪಾದನೆ ಮೇಲೆ ಪರಿಣಾಮ ಬೀರುತ್ತದೆ ಮತ್ತು ಹೊಸ ಹೂಡಿಕೆಗಳ ಮೂಲಕ ಉತ್ಪಾದನಾ ಸಾಮರ್ಥ್ಯಗಳನ್ನು ವಿಸ್ತರಿಸುವಲ್ಲಿ ಆಸಕ್ತಿ ಕುಗ್ಗುತ್ತದೆ.

ಇನ್ನೊಂದೆಡೆ, ದೇಶಕ್ಕೆ ಹರಿದು ಬರುವ ನಿವ್ವಳ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಈ ಹಣಕಾಸು ವರ್ಷದ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ 12 ವರ್ಷದಲ್ಲೇ ಕಡಿಮೆ ಪ್ರಮಾಣಕ್ಕೆ ಕುಸಿದಿದೆ. ದೇಶದಿಂದ ವಿದೇಶಿ ಬಂಡವಾಳ ವಾಪಸ್ ಹೊರಹೋಗುವ ಪ್ರಮಾಣ ತುಂಬಾ ಜಾಸ್ತಿಯಾಗಿದೆ. ಭಾರತೀಯ ಕಂಪನಿಗಳು ವಿದೇಶಗಳಲ್ಲಿ ಹೂಡುವುದಕ್ಕೆ ಆದ್ಯತೆ ಕೊಡುವ ಪ್ರಮಾಣ ಜಾಸ್ತಿಯಾಗಿರುವುದು ಕೂಡ ಈ ಸಮಸ್ಯೆಯನ್ನು ಬಿಗಡಾಯಿಸುವಂತೆ ಮಾಡಿದೆ.

ಎಷ್ಟೇ ಪುಸಲಾಯಿಸಿದರೂ ಭಾರತದ ಕಾರ್ಪೊರೇಟ್ ವಲಯಕ್ಕೆ ದೇಶೀಯವಾಗಿ ಹೂಡುವುದಕ್ಕಿಂತ ವಿದೇಶಗಳಲ್ಲಿ ಬಂಡವಾಳ ಹೂಡುವುದೇ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತಿದೆ. ಭಾರತದ ರೂಪಾಯಿ ಮೌಲ್ಯವು ಡಾಲರ್ ಎದುರು 86 ರೂಪಾಯಿಗೆ ಕುಸಿದು ಹೊಸ ಪಾತಾಳಕ್ಕೆ ಇಳಿದಿರುವುದರಿಂದ ಆಮದು ಬಹಳ ದುಬಾರಿಯಾಗಿದೆ ಹಾಗೂ ಹಣದುಬ್ಬರದ ಒತ್ತಡಗಳಿಗೆ ಇನ್ನಷ್ಟು ಅಂಶಗಳ ಸೇರ್ಪಡೆಯಾಗಿದೆ.

ದೊಡ್ಡ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿಕೊಡುವ ಸರಕಾರದ ನೀತಿಗಳಿಂದಾಗಿ ಅಸಮಾನತೆ ಭಾರಿ ಹೆಚ್ಚಾಗಿದೆ. ಇದು ಖಾಸಗಿ ವಲಯದ ಹೂಡಿಕೆ ಮತ್ತು ಬೆಳವಣಿಗೆ ಮೇಲೆ ಪರಿಣಾಮ ಉಂಟು ಮಾಡಲಿದೆ. 2023ರಲ್ಲಿದ್ದ 157 ಬಿಲಿಯಾಧಿಪತಿಗಳ ಸಂಖ್ಯೆ 2024ರ ಅಂತ್ಯದ ಹೊತ್ತಿಗೆ ದಾಖಲೆಯ 201ಕ್ಕೆ ಹೆಚ್ಚಿದೆ. ಅವರ ಒಟ್ಟು ಸಂಪತ್ತು ಇದೇ ಮೊದಲ ಬಾರಿಗೆ ಒಂದು ಟ್ರಿಲಿಯನ್ ಡಾಲರ್ ದಾಟಿದೆ.

ಕಡಿಮೆ ಆದಾಯ, ಹೆಚ್ಚುತ್ತಿರುವ ವೆಚ್ಚಗಳು ಮತ್ತು ಅತಿಯಾದ ಉದ್ಯೋಗರಾಹಿತ್ಯತೆ ಜನರ ಮೇಲೆ ಭಾರಿ ಹೊರೆಯಾಗುತ್ತಿರುವುದರೊಂದಿಗೆ ಆಳವಾಗುತ್ತಲೇ ಇರುವ ಬಿಕ್ಕಟ್ಟನ್ನು ಹೇಗೆ ಪರಿಹರಿಸುವುದೆನ್ನುವ ಬಗ್ಗೆ ಸರಕಾರಕ್ಕೆ ದಿಕ್ಕೇ ತೋಚುತ್ತಿಲ್ಲ. ಮೋದಿ ಸರಕಾರದ ಹಿಂದಿನ ಹಾದಿಯನ್ನು ಗಮನಿಸಿದರೆ, 2025–26ರ ಬಜೆಟ್ ಕೂಡ ಒಂದಾದ ಮೇಲೆ ಇನ್ನೊಂದು ವರ್ಷ ಹೇಳುವ ಅದೇ ಪರಿಹಾರವನ್ನು ಈಗಲೂ ಸೂಚಿಸುವಲ್ಲಿ ಅಂತ್ಯವಾಗಲಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಕಾರ್ಪೊರೇಟ್ ಕಂಪನಿಗಳು ಮತ್ತು ಅತಿ–ಧನಿಕರ (ಸೂಪರ್ ರಿಚ್) ಮೇಲಿನ ತೆರಿಗೆ ಹೆಚ್ಚಿಸಲು, ಮೂಲಸೌಕರ್ಯ ಮತ್ತು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಿಸಲು, ಎಂಎಸ್ಎಂಇ ಉತ್ತೇಜಿಸಲು ಹಾಗೂ ಪ್ರಸ್ತುತ ಈಗಿನ ಜಿಡಿಪಿಯ ಶೇ. 7ಕ್ಕಿಂತ ಕಡಿಮೆಯಿರುವ ಸಾಮಾಜಿಕ ವಲಯದ ಸರಕಾರಿ ವೆಚ್ಚವನ್ನು ಹೆಚ್ಚಿಸಲು ಸರಕಾರ ಸಿದ್ಧವಾಗದಿದ್ದರೆ ಆರ್ಥಿಕತೆಯ ಪುನಶ್ಚೇತನ ಮತ್ತು ಜನರಿಗೆ ಪರಿಹಾರದ ಸಾಧ್ಯತೆ ಮಂದವಾಗಲಿದೆ.

ಅನು: ವಿಶ್ವ

ಜಾಗೃತ ಕರ್ನಾಟಕ..........

ಪುಟ 5 ರಿಂದ

ವಿವಿಧ ಸರಕಾರಗಳಲ್ಲಿ ಎಲ್‌ಪಿಜಿ ನೀತಿಗಳ ವಿಕಾಸ) ಆಳುವ ವರ್ಗಗಳ ಅಭಿವೃದ್ಧಿ ನೀತಿಗಳು ಸೃಷ್ಟಿಸಿದ ಬಿಕ್ಕಟ್ಟುಗಳನ್ನು ದುಡಿಯುವ ಜನರಿಗೆ ಪ್ರತಿಕೂಲವಾಗಿ ಪರಿಹರಿಸುವ ಪ್ರಯತ್ನಗಳು. ಈ ನೀತಿಗಳಲ್ಲಿ ಜಾಗತಿಕ ರಾಜಕೀಯ–ಆರ್ಥಿಕ ಪರಿಸ್ಥಿತಿಗಳೂ ಪ್ರಮುಖ ಪಾತ್ರ ವಹಿಸುತ್ತವೆ. 1991ರ ವಿದೇಶಿ ವಿನಿಮಯ ಬಿಕ್ಕಟ್ಟು 1980ರ ಉದಾರೀಕರಣ ದೇಶೀಯ ಬೇಡಿಕೆ ಹೆಚ್ಚಿಸುವುದರ ಬದಲು, ವಿದೇಶೀ ತಂತ್ರಜ್ಞಾನ ಬಂಡವಾಳ ಇವುಗಳ ಆಮದು ಮತ್ತು ತಯಾರಾದ ಉತ್ಪನ್ನಗಳ ರಫ್ತು ಆಧಾರಿತ ಬೆಳವಣಿಗೆಯ ವಿಫಲ ನೀತಿಯ ಫಲ. ಇಂತಹ ಪ್ರತಿಯೊಂದು ಬಿಕ್ಕಟ್ಟಿನ ಪರಿಹಾರಕ್ಕೆ ಇತರ ದಾರಿಗಳಿದ್ದವು ಎಂಬುದನ್ನು ಎಡಪಂಥೀಯ ಪಕ್ಷಗಳು ಮತ್ತು ಬುದ್ಧಿಜೀವಿಗಳು ಪ್ರತಿಪಾದಿಸುತ್ತಾ ಬಂದಿದ್ದಾರೆ.

ಬಂಡವಾಳಶಾಹಿ ಸಮಾಜವಾದಿ ಬೈನರಿಗಳಲ್ಲೂ ಅವರು ಮುಳುಗಿಲ್ಲ. ಬಂಡವಾಳಶಾಹಿಯಿಂದ ಸಮಾಜವಾದದತ್ತ ವಿಕಾಸದ ಪ್ರಕ್ರಿಯೆ ದೀರ್ಘ ಮತ್ತು ಸಂಕೀರ್ಣವಾದದ್ದು ಮತ್ತು ಅದರಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ದುಡಿಯುವ ಜನರ ಸಂಘಟನೆ ಮತ್ತು ರಾಜಕೀಯ ಪ್ರಜ್ಞೆಯ ಮಟ್ಟ ಎಂಬ ಅರಿವು ಅವರಿಗಿದೆ. ಕೇರಳ, ಪ.ಬಂಗಾಳ, ತ್ರಿಪುರಾಗಳಲ್ಲಿ ಸರಕಾರ ರಚಿಸಿದಾಗ ಕೆಲಸಕ್ಕಾಗಿ ಕೂಲಿ, ಕೃಷಿ ಉತ್ಪಾದಕತೆ ಹೆಚ್ಚಳ, ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ, ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ, ಶಿಕ್ಷಣ ಮತ್ತು ಆರೋಗ್ಯದಲ್ಲಿ ಹೆಚ್ಚಿನ ಹೂಡಿಕೆ ಮುಂತಾದ ಬದಲಿ ನೀತಿಗಳನ್ನು ಜಾರಿ ಮಾಡಿದ್ದವು. 1991ರಲ್ಲಿ ಮತ್ತು ಈಗಲೂ ಎಲ್‌ಪಿಜಿ ಬಿಟ್ಟು ಬೇರೆ ದಾರಿಯಿಲ್ಲ, ಎಲ್‌ಪಿಜಿಗಳನ್ನು ಒಟ್ಟು ಸೇರಿಸಿ ವಿರೋಧಿಸುವುದು ತಪ್ಪು ಎಂಬ ಯಾದವ್ ಅವರ 'ಮೈಗಳ್' ಚಿಂತನೆಯನ್ನು 'ಸಾಂಪ್ರದಾಯಿಕ ಎಡಪಂಥೀಯ' ಪಕ್ಷಗಳು ಮತ್ತು ಬುದ್ಧಿಜೀವಿಗಳು ತಿರಸ್ಕರಿಸುತ್ತಾರೆ.

ಸಾಲಕ್ಕೆ ಬದಲಾಗಿ ಹೊರಿಸಿದ ಪ್ಯಾಕೇಜ್

1991ರ ಎಲ್‌ಪಿಜಿ ನೀತಿಗಳು ಐಎಂಎಫ್ ಸಾಲಕ್ಕೆ ಬದಲಾಗಿ ಹೊರಿಸಿದ ಪ್ಯಾಕೇಜ್. ಇದರಲ್ಲಿ ಯಾವುದೇ ಆಯ್ಕೆ ಇರಲಿಲ್ಲ. ಆರ್.ಕೆ.ಲಕ್ಷ್ಮಣ್ (ಸಿಂಗ್ ಮತ್ತು ರಾವ್ ದ್ವಯರು 'ಐಎಂಎಫ್ ನಮ್ಮ ಕೈ ತಿರುಚಲಿಲ್ಲ, ನಾವೇ ತಿರಿಚಿಕೊಂಡೆವು') ಕಾರ್ಟೂನ್ ನಲ್ಲಿ ಬಂದು ಇದು ಜನಜನಿತವಾಗಿತ್ತು. ಭಾರತದ ಗುತ್ತೇದಾರಿ ಗುಂಪುಗಳಿಗೂ ಇದು ಆಪ್ಯಾಯಮಾನವಾಗಿತ್ತು. ಆದರೆ ದೇಶಕ್ಕೆ (ಅಂದರೆ ಸಣ್ಣ–ಮಧ್ಯಮ ಉದ್ಯಮಗಳು ಸೇರಿದಂತೆ ಜನಕ್ಕೆ) ಅಲ್ಲ.

ಹಿಂದುತ್ವ–ಫ್ಯಾಸಿಸಂ ತಲೆಯೆತ್ತಿ ಬೇರೂರಲು

1991–96ರ ಅವಧಿಯಲ್ಲಿ ಆರಂಭಿಸಿದ ಎಲ್‌ಪಿಜಿ ನೀತಿಗಳು ಮತ್ತು ಅದರ ಸಾಮಾಜಿಕ–ಆರ್ಥಿಕ ಪರಿಣಾಮಗಳೇ ಇಂದು ದೇಶ ಎದುರಿಸುತ್ತಿರುವ ಕೋಮುವಾದ ಮತ್ತು ಹಿಂದುತ್ವ–ಫ್ಯಾಸಿಸಂ ತಲೆಯೆತ್ತಿ ಬೇರೂರಲು ಮತ್ತು ಇನ್ನಷ್ಟು ಕಠಿಣ ಮೋದಾನಿನಾಮಿಕ್ಸ್ ನೀತಿಗಳ ಬೇರು. 1991ರ ಎಲ್‌ಪಿಜಿ ನೀತಿಗಳ ಅನಾವರಣ, ನಂತರ ರಾವ್ ಸರಕಾರದ ಮೂಗಿನ ಕೆಳಗೆ 1992ರಲ್ಲಿ ಬಾಬರಿ ಮಸೀದಿ ಬೀಳಿಸಿದ್ದು, 1980ರ ದಶಕದವರೆಗೆ ಮಿತಿಯಲ್ಲಿದ್ದ ಹಿಂದುತ್ವ–ಫ್ಯಾಸಿಸ್ಟ್ ಚಳುವಳಿ ತೀವ್ರಗತಿಯಲ್ಲಿ ವಿಸ್ತಾರವಾದದ್ದು, ಮುಂದಿನ 2–3 ದಶಕಗಳಲ್ಲಿ ವಿಸ್ತಾರವಾದ ನೆಲೆ ಪಡೆದುಕೊಂಡದ್ದು ಕಾಕತಾಳೀಯವೇನಲ್ಲ. ಈಗಲೂ ನವ–ಉದಾರವಾದಿ ನೀತಿಗಳ ವಿರುದ್ಧ ತೀವ್ರ ಅಣಿ ನೆರೆಸುವಿಕೆಯಿಲ್ಲದೆ ಕೋಮುವಾದ ಮತ್ತು ಹಿಂದುತ್ವ–ಫ್ಯಾಸಿಸಂ ವಿರುದ್ಧ ಹೋರಾಟ ಸಾಧ್ಯವಿಲ್ಲ ಎಂಬುದು 'ಸಾಂಪ್ರದಾಯಿಕ ಎಡಪಂಥೀಯ' ಪಕ್ಷಗಳ ಮತ್ತು ಬುದ್ಧಿಜೀವಿಗಳ ವಿಶ್ಲೇಷಣೆ ಮತ್ತು ಆಚರಣೆ ಆಧಾರಿತ ತಿಳುವಳಿಕೆ. ಇದಕ್ಕೆ ಕಾಲಕಾಲಕ್ಕೆ ಬದಲಿ ನೀತಿಗಳನ್ನು ರೂಪಿಸುತ್ತಲೇ ಇವೆ. ಇದು ಬರಿಯ 'ಮೈಗಳ್' ಧೋರಣೆಯಲ್ಲ. ಗಂಭೀರ ವಿಶ್ಲೇಷಣೆ ಆಧಾರಿತ ಎಂಬುದಕ್ಕೆ ಕೆಳಗಿನ ಎರಡು ಲಿಂಕ್ ಗಳಲ್ಲಿರುವ ಪ್ರೊ.ಪ್ರಭಾತ್ ಪಟ್ನಾಯಕ್ ಅವರ ಲೇಖನಗಳೇ ಸಾಕ್ಷಿ.

https://lokayat.org.in/2019/a-modest-tax-on-billionaires-can-ensure-basic-economic-rights-to-all/

https://cpim.org/wp-content/uploads/old/marxist/prabhat.pdf

ಕಾರ್ಯಕ್ರಮ ಆತಂಕಕಾರಿಯಾಗಿತ್ತು

'ಜಾಗೃತ ಕರ್ನಾಟಕ' ಈ ವಿಷಯವನ್ನು ಆರಿಸಿಕೊಂಡು ಪ್ರೊ.ಯೋಗೇಂದ್ರ ಯಾದವ್ ಅವರ ಮೂಲಕ ಮನಮೋಹನ ನೆನಪು ಹೆಸರಲ್ಲಿ ಎಲ್‌ಪಿಜಿ ನೀತಿಗಳನ್ನು 'ವೈಟ್ ವಾಶ್' ಮಾಡುವ, 'ಸಾಂಪ್ರದಾಯಿಕ ಎಡಪಂಥೀಯ'ರನ್ನು ದೂಷಿಸುವ ಕಾರ್ಯಕ್ರಮ ಏಕೆ ಸಂಘಟಿಸಿತು ಎಂಬುದು ಅಚ್ಚರಿಯ ಮತ್ತು ಆತಂಕದ ವಿಷಯವಾಗಿದೆ. ಜನಪರ ಕಾಳಜಿಗಳ ವಿಷಯದ ಕುರಿತು ಚರ್ಚೆ ಸಂವಾದಗಳನ್ನು ಸಂಘಟಿಸುತ್ತಿದ್ದು, ಜನಪರ ಕಾಳಜಿ ಇರುವ ಯುವಜನರು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರನ್ನು ಅಣಿ ನೆರೆಸುತ್ತಿದ್ದ ಮತ್ತು ಒಂದು ಹೊಸ ರಾಜಕೀಯ ಸಂಘಟನೆ ರಚಿಸಲು 'ಜಾಗೃತ ಕರ್ನಾಟಕ' ಕಾರ್ಯಕ್ರಮ ಮುನ್ನುಡಿ ಎಂದು ಹೇಳಲಾಗಿತ್ತು. ಇದು ಅತ್ಯಂತ ನಿರಾಶಾದಾಯಕ ಮುನ್ನುಡಿ ಎಂದು ಹೇಳದೆ ವಿಧಿಯಿಲ್ಲ. ಎಲ್ಲವನ್ನು ರಿ–ವಿಸಿಟ್ ಮಾಡಬಹುದು ಎಂಬ ಸಂವಾದದಲ್ಲಿ ಎಲ್‌ಪಿಜಿ ನೀತಿಗಳನ್ನು ವಿರೋಧಿಸುವ ಯಾರನ್ನೂ ಕರೆಯದಿರುವುದು ಸಹ ಅಚ್ಚರಿಯ ವಿಷಯವೇ. ಸಂವಾದದಲ್ಲಿ ಭಾಗವಹಿಸಿದ ಯುವ ಬುದ್ಧಿಜೀವಿಗಳಿಂದ ಪ್ರಾಮಾಣಿಕ ಜನಪರ ಕಾಳಜಿಯ ಉತ್ತಮ ಪ್ರಶ್ನೆಗಳು ಬಂದರೂ, ಅವುಗಳಿಗೆ ಉತ್ತರ ಎಲ್‌ಪಿಜಿ 'ವೈಟ್ ವಾಶ್' ಮಾಡುವ, 'ಸಾಂಪ್ರದಾಯಿಕ ಎಡ ಪಂಥೀಯ'ರನ್ನು ದೂಷಿಸುವತ್ತಲೇ ಹೋಗುತ್ತಿತ್ತು. ಫೋನ್ ಮಾಡಿ ಒತ್ತಡ ಹಾಕಿದ ಮೇಲೆ ಅವಕಾಶ ಕೊಟ್ಟ ನಂತರ ಬಂದ ಸಭಿಕರಿಂದ ಬಂದ ಪ್ರಶ್ನೆ '3.5 ಲಕ್ಷ ರೈತರ ಆತ್ಮಹತ್ಯೆಗಿಂತ ಹೆಚ್ಚಿನ ಅನಾಹುತ ಏನು ನಿರೀಕ್ಷಿಸುತ್ತಿದ್ದೀರಿ' ಎಂಬ ಪ್ರಶ್ನೆಯನ್ನು ಸಹ ತಿಪ್ಪೆ ಸಾರಿಸಲಾಯಿತು. ಪ್ರೊ. ಎ.ನಾರಾಯಣ ಅವರ ಅಧ್ಯಕ್ಷೀಯ ಭಾಷಣದ ಧೋರಣೆ ಸ್ವಲ್ಪ ಭಿನ್ನವಾಗಿತ್ತು. ಆದರೆ ಈ ಕಾರ್ಯಕ್ರಮ ಒಟ್ಟಾರೆಯಾಗಿ ಅತ್ಯಂತ ಆತಂಕಕಾರಿಯಾಗಿತ್ತು.

ಇವೆಲ್ಲ ಗಮನಿಸಿದರೆ ರಾಡಿಕಲೈಸ್ ಆಗುತ್ತಿರುವ ಯುವಜನರು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರಲ್ಲಿ ಕಾಂಗ್ರೆಸ್‌ನ "ಮೃದು ಹಿಂದುತ್ವ ಮತ್ತು ಮಾನವೀಯ ಮುಖದ ನವ–ಉದಾರವಾದಿ ಬಂಡವಾಳಶಾಹಿ" ಧೋರಣೆ ಕುರಿತು ಜಾಗೃತಿ ಮೂಡಿಸಲು "ಜಾಗೃತ ಕರ್ನಾಟಕ" ಹೊರಟಂತಿದೆ. ಇಂತಹ "ಜಾಗೃತ ಕರ್ನಾಟಕ ಕಾಂಗ್ರೆಸ್" ಆಗುವ ಅಪಾಯದಿಂದ ಪಾರಾಗಿ, ಕಾರ್ಪೊರೇಟ್ ಹಿಂದುತ್ವದ ಕರಾಳತೆಯ ಕುರಿತು ವ್ಯಾಪಕ ಜಾಗೃತಿ ಮತ್ತು ಬದಲಿ ನೀತಿಗಳನ್ನು ಪ್ರತಿಪಾದಿಸುವ ಮತ್ತು ಎಡ ಪ್ರಗತಿಪರ ಜನಪರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಕ್ರೋಢೀಕರಿಸುವತ್ತ ಸಾಗಲಿ ಎಂಬುದು ನಮ್ಮ ಆಶಯ.

ರಾಷ್ಟ್ರ ರಾಜಧಾನಿ ಮಾತ್ರವಲ್ಲದೆ ಬಿಜೆಪಿಯ ಭವಿಷ್ಯದ ಮೇಲೂ ತೀವ್ರ ಪ್ರಭಾವ ಬೀರುವ ದೆಹಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಫೆಬ್ರವರಿ 5 ರಂದು ನಡೆಯುವ ಚುನಾವಣೆ ಮತ್ತು 8 ರ ಫಲಿತಾಂಶವನ್ನು ಇಡೀ ದೇಶವು ಕುತೂಹಲದಿಂದ ಎದುರು ನೋಡುತ್ತಿದೆ. ಒಂದು ಹಂತದಲ್ಲಿ ರಾಷ್ಟ್ರೀಯ ಪರ್ಯಾಯ ಎಂಬಂತೆ ಪ್ರಚಾರವಾಗಿ, ಅಲ್ಪಾವಧಿಯಲ್ಲಿಯೇ ಆಡಳಿತ ಪಕ್ಷವಾಗಿ ಪಂಜಾಬ್‌ಗೆ ವಿಸ್ತರಿಸಿದ ಮೊದಲ ಪ್ರಾದೇಶಿಕ ಪಕ್ಷ ಎಎಪಿ, ಈಗ ದೆಹಲಿಯಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುತ್ತದೆಯೋ ಅಥವಾ ಪಂಜಾಬ್‌ಗೆ ಸೀಮಿತಗೊಳ್ಳುತ್ತದೆಯೋ? 'ಬಿಜೆಪಿ ಹಟಾವೋ, ದೆಹಲಿ ಬಚಾವೋ' ಎಂಬ ವಿರೋಧ ಪಕ್ಷಗಳ ಘೋಷಣೆ ಹಿನ್ನೆಲೆಯಲ್ಲಿ ತೀರ್ಪು ಏನಾಗುತ್ತದೆ ಎಂಬ ಕುತೂಹಲ ಉಂಟಾಗಿದೆ.

ದೆಹಲಿ ವಿಧಾನಸಭಾ ಚುನಾವಣೆ: ಎಎಪಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುತ್ತದೆಯೇ?

ಸಿ.ಸಿದ್ದಯ್ಯ



ದೆಹಲಿಯು ರಾಜಧಾನಿಯಷ್ಟೇ ಅಲ್ಲದೆ, ವಿವಿಧ ರಾಜಕೀಯ ಶಕ್ತಿಗಳ ನಡುವಿನ ಹೋರಾಟದಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ದೀರ್ಘಕಾಲದವರೆಗೆ ಬಿಜೆಪಿಯ ನಿಯಂತ್ರಣದಲ್ಲಿದ್ದು, ನಂತರ ಕಾಂಗ್ರೆಸ್‌ನಿಂದ ಹ್ಯಾಟ್ರಿಕ್ ಸಾಧಿಸಿ, ಆ ನಂತರ ಆಮ್ ಆದ್ಮಿ ಪಕ್ಷ (ಎಎಪಿ)ದ ಭದ್ರಕೋಟೆಯಾಗಿ ಕಾಣಿಸಿಕೊಂಡ ದೆಹಲಿಯ ವಿಧಾನಸಭೆಯ ಪಯಣ ಈಗ ಹೇಗಿದೆ? ಸಿಬಿಐ, ಇಡಿ ಪ್ರಕರಣಗಳಲ್ಲಿ ಸತತ ಸವಾಲುಗಳನ್ನು ಎದುರಿಸಿ, ತಮ್ಮ ಹುದ್ದೆಗೂ ರಾಜೀನಾಮೆ ನೀಡಿದ ಅರವಿಂದ್ ಕೇಜ್ರಿವಾಲ್ ಮತ್ತು ಇತರ ನಾಯಕರ ಪ್ರಭಾವ ಈಗ ಹೇಗಿದೆ? ಒಂದು ಹಂತದಲ್ಲಿ ರಾಷ್ಟ್ರೀಯ ಪರ್ಯಾಯ ಎಂಬಂತೆ ಪ್ರಚಾರವಾಗಿ, ಸ್ಥಳೀಯವಾಗಿ ಮಾತ್ರವಲ್ಲದೆ ದೇಶದ ರಾಜಕೀಯದಲ್ಲಿ ಹೊಸ ತಿರುವು ಪಡೆದು, ಅಲ್ಪಾವಧಿಯಲ್ಲಿಯೇ ಆಡಳಿತ ಪಕ್ಷವಾಗಿ ಪಂಜಾಬ್‌ಗೆ ವಿಸ್ತರಿಸಿದ ಮೊದಲ ಪ್ರಾದೇಶಿಕ ಪಕ್ಷ ಎಎಪಿ, ಈಗ ದೆಹಲಿಯಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುತ್ತದೆಯೋ ಅಥವಾ ಪಂಜಾಬ್‌ಗೆ ಸೀಮಿತಗೊಳ್ಳುತ್ತದೆಯೋ? ಕೇಂದ್ರಾಡಳಿತ ಪ್ರದೇಶವಾಗಿ ಉಳಿದುಕೊಂಡೇ ರಾಜ್ಯದ ಸ್ಥಾನಮಾನದ ವಿಶೇಷ ಸಾಂವಿಧಾನಿಕ ನಿಬಂಧನೆಗಳ ಅಡಿಯಲ್ಲಿ ಮೋದಿ ಸರ್ಕಾರದ ದಾಳಿಗಳಿಗೆ ಗುರಿಯಾಗುವ NCRD (ರಾಷ್ಟ್ರೀಯ ರಾಜಧಾನಿ ಪ್ರದೇಶ–ದೆಹಲಿ) ಖ್ಯಾತಿ ಉಳಿಯುತ್ತದೆಯೇ?

ಮುನಿಸಿಪಲ್ ಕಾರ್ಪೊರೇಷನ್ ನಿಂದ ವಿಧಾನಸಭೆಯವರೆಗೆ ದೆಹಲಿ

1952ರಲ್ಲಿ ರಚನೆಯಾದ ದೆಹಲಿ ವಿಧಾನಸಭೆಯು ಹಲವು ತಿರುವುಗಳನ್ನು ಕಂಡಿದೆ. 1956ರಲ್ಲಿ ಇದನ್ನು ಕೇಂದ್ರಾಡಳಿತ ಪ್ರದೇಶವಾಗಿ ನೇರವಾಗಿ ರಾಷ್ಟ್ರಪತಿಗಳ ಆಳ್ವಿಕೆಯ ಅಡಿಯಲ್ಲಿ ಪರಿವರ್ತಿಸಲಾಯಿತು. ಸಚಿವ ಸಂಪುಟ ಮತ್ತು ಶಾಸಕಾಂಗವನ್ನು ರದ್ದುಪಡಿಸಿ ಅದನ್ನು ಮುನಿಸಿಪಲ್ ಕಾರ್ಪೊರೇಷನ್ ಆಗಿ ಮಾಡಲಾಯಿತು. ಹತ್ತು ವರ್ಷಗಳ ನಂತರ 1966ರಲ್ಲಿ, ದೆಹಲಿಯನ್ನು ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರವಿಲ್ಲದ ಮೆಟ್ರೋ ಪಾಲಿಟನ್ ಕೌನ್ಸಿಲ್ ಆಗಿ ಪರಿವರ್ತಿಸಲಾಯಿತು. ಆ ಕೌನ್ಸಿಲ್ ಇರುವಷ್ಟು ಕಾಲವೂ ಆಗಿನ ಜನಸಂಘ, ಬಿಜೆಪಿ/ಆರ್‌ಎಸ್‌ಎಸ್ ಪ್ರಾಬಲ್ಯವೇ ನಡೆಯುತ್ತಿತ್ತು. ವಾಜಪೇಯಿ, ರಾಜೇಶ್ ಖನ್ನಾ ಮತ್ತು ಸಿ.ಎಂ. ಸ್ಟೀಫನ್ ರಂತಹ ಮಹಾಮಹಿಮರು ಸ್ಪರ್ಧಿಸುತ್ತಿದ್ದರು. 1991ರಲ್ಲಿ 69ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಮತ್ತೆ ವಿಧಾನಸಭೆಯನ್ನು ತರಲಾಯಿತು ಮಾತ್ರವಲ್ಲದೆ, ಅದನ್ನು NCRD ಎಂದು ಘೋಷಿಸಲಾಯಿತು. 1993ರ ಚುನಾವಣೆಯಲ್ಲಿ ಬಿಜೆಪಿ ಗೆದ್ದಾಗ ಮದನ್ ಲಾಲ್ ಖುರಾನಾ, ನಂತರ ಸಾಹೇಬ್ ಸಿಂಗ್ ವರ್ಮಾ ಬಿಜೆಪಿ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದರು. ಖುರಾನಾ ಭ್ರಷ್ಟಾಚಾರ ಆರೋಪಗಳಲ್ಲಿ ಸಿಲುಕಿದ ನಂತರ ಬಂದ ವರ್ಮಾ ಅವರ ಮೇಲೂ ಟೀಕೆಗಳು ಬಂದಿದ್ದರಿಂದ, ಕೊನೆಯ ಉಪಾಯವಾಗಿ ಸುಷ್ಮಾ ಸ್ವರಾಜ್ ಅವರನ್ನು ಕೆಲವು ವಾರಗಳ ಕಾಲ ಮುಖ್ಯಮಂತ್ರಿಯನ್ನಾಗಿ ಮಾಡಲಾಯಿತು. ಆದರೆ ಕಾಂಗ್ರೆಸ್ ವರಿಷ್ಠೆ ಶೀಲಾ ದೀಕ್ಷಿತ್ ಅವರ ಎದುರು ಸ್ವರಾಜ್ ಅವರು ನಿಲ್ಲಲು ಸಾಧ್ಯವಾಗಲಿಲ್ಲ. ಶೀಲಾ ದೀಕ್ಷಿತ್ 1998ರಿಂದ 2013ರವರೆಗೆ ಆಡಳಿತ ನಡೆಸಿದರು.

ಎಎಪಿಯ ಮೊದಲ ಹೆಜ್ಜೆಗಳು

ಆದರೆ, ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರ್ಕಾರವು ಸರಣಿ ಹಗರಣ ಪ್ರಕರಣಗಳಲ್ಲಿ ಸಿಲುಕಿಕೊಂಡಾಗ ಎಲ್ಲವೂ ತಲೆಕೆಳಗಾಯಿತು. ಆ ಸಮಯದಲ್ಲಿ ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ಅಣ್ಣಾ ಹಜಾರೆ ಅವರೊಂದಿಗೆ ಕೆಲಸ ಮಾಡಿದ ಅರವಿಂದ್ ಕೇಜ್ರಿವಾಲ್, ಇತರ ಕೆಲವು ಉನ್ನತ ಶಿಕ್ಷಣ ಪಡೆದ ನಾಯಕರು ಮತ್ತು ಮಾಜಿ ಅಧಿಕಾರಿಗಳೊಂದಿಗೆ ಎಎಪಿಯನ್ನು ಸ್ಥಾಪಿಸಿದರು. ಜನರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಭರವಸೆಗಳೊಂದಿಗೆ ಜನರ ಗಮನ ಸೆಳೆದರು. 2013ರಲ್ಲಿ 28 ಸ್ಥಾನಗಳನ್ನು ಪಡೆಯುವ ಮೂಲಕ ಎಎಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕಾಂಗ್ರೆಸ್ 13 ಸ್ಥಾನಗಳಲ್ಲಿ ಗೆದ್ದಿತು. ಕಾಂಗ್ರೆಸ್ ತಡವಾಗಿ ಎಎಪಿಗೆ ಬೆಂಬಲ ಘೋಷಿಸಿದರೂ ಕೇಜ್ರಿವಾಲ್ 49 ದಿನಗಳಲ್ಲಿಯೇ ರಾಜೀನಾಮೆ ನೀಡಿದರು. 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸಿದರೂ, 2015ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಎಪಿ 70 ಸ್ಥಾನಗಳಲ್ಲಿ 67 ಸ್ಥಾನಗಳನ್ನು ಗೆದ್ದು ಭರ್ಜರಿ ಜಯ ಸಾಧಿಸಿತು. ಕಾಂಗ್ರೆಸ್‌ಗೆ ಒಂದೇ ಒಂದು ಸ್ಥಾನ ಬರದಿದ್ದರೂ ಬಿಜೆಪಿ ಮೂರು ಸ್ಥಾನಗಳಿಗೆ ಸೀಮಿತವಾಯಿತು.

ಎಎಪಿ ಆಡಳಿತದಲ್ಲಿ ಕೆಲವು ನ್ಯೂನತೆಗಳು, ಅಸ್ಪಷ್ಟತೆಗಳಿದ್ದರೂ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನರ ಬೆಂಬಲದೊಂದಿಗೆ 2020ರಲ್ಲಿ ಮತ್ತೆ ಗೆಲ್ಲಲು ಸಾಧ್ಯವಾಯಿತು. ಎಎಪಿ 62 ಸ್ಥಾನಗಳಿಗೆ ಸೀಮಿತವಾಗಿ, ಬಿಜೆಪಿ ತನ್ನ ಬಲವನ್ನು 3 ರಿಂದ 8 ಸ್ಥಾನಗಳಿಗೆ ಹೆಚ್ಚಿಸಿಕೊಂಡಿತು. ಕಾಂಗ್ರೆಸ್ ಎಷ್ಟೇ ಪ್ರಯತ್ನಿಸಿದರೂ ಜನರ ಬೆಂಬಲ ಗಳಿಸಲು ಸಾಧ್ಯವಾಗಲಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಬಿಜೆಪಿ, ಅದಕ್ಕಿಂತ ಮುಖ್ಯವಾಗಿ ದೆಹಲಿಯನ್ನು ವಶಪಡಿಸಿಕೊಳ್ಳಲು ಪ್ರಧಾನಿ ಮೋದಿ ತಮ್ಮ ಬಳಿ ಇದ್ದ ಎಲ್ಲಾ ಅಸ್ತ್ರಗಳನ್ನು ಬಳಸಿದರು. ಇದಲ್ಲದೆ, 2022ರಲ್ಲಿ ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬಂದಿರುವುದು ಬಿಜೆಪಿಯನ್ನು ಇನ್ನಷ್ಟು ಚಿಂತೆಗೀಡುಮಾಡಿದೆ.

ಸಂವಿಧಾನಾತ್ಮಕ ಪ್ರಾತಿನಿಧ್ಯಕ್ಕೆ ಹಾನಿ

ಸಂವಿಧಾನದ ಅಡಿಯಲ್ಲಿ ದೆಹಲಿಯ ವಿಶೇಷ ಸ್ಥಾನಮಾನದ ಲಾಭವನ್ನು ಪಡೆದುಕೊಂಡು, ಬಿಜೆಪಿ ಆಡಳಿತದ ಒಕ್ಕೂಟ ಸರ್ಕಾರ ಲೆಫ್ಟಿನೆಂಟ್ ಗವರ್ನರ್ ಅವರ ಮೂಲಕ ಪ್ರತಿ ಹೆಜ್ಜೆಗೂ ಕಿರುಕುಳ ನೀಡುತ್ತಾ, ದೆಹಲಿಯ ಎಎಪಿ ಆಡಳಿತಕ್ಕೆ ಅಡ್ಡಿಪಡಿಸುತ್ತಾ ಬಂದಿದೆ. ಪೊಲೀಸ್ ಗಸ್ತುಗಳಿಂದ ಹಿಡಿದು ದಾಳಿಗಳವರೆಗೆ, ಹಣಕಾಸಿನಿಂದ ಹಿಡಿದು ಪ್ರಮುಖ ನೇಮಕಾತಿಗಳವರೆಗೆ ಎಲ್ಲವನ್ನೂ ಲೆಫ್ಟಿನೆಂಟ್ ಗವರ್ನರ್ ಮಾಡುತ್ತಿದ್ದರೆ, ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ ಅಸಹಾಯಕ ಸ್ಥಿತಿಯಲ್ಲಿ ಇರುವಂತೆ ಮಾಡಿದ್ದಾರೆ. ಕೇಂದ್ರದ ಇಂತಹ ಧೋರಣೆಯ ವಿರುದ್ಧ ಎಎಪಿ ಸರ್ಕಾರ ಮೊಕದ್ದಮೆ ಹೂಡಿದಾಗ, ಸುಪ್ರೀಂ ಕೋರ್ಟ್ ಕೂಡಾ ಸಂವಿಧಾನದ ಪ್ರಕಾರ ಭದ್ರತೆ ಮತ್ತು ಪರಿಸರ ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ದೆಹಲಿ ಸರ್ಕಾರವೇ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಹೊಂದಿದೆ ಎಂದು ತೀರ್ಪು ನೀಡಿತು. ಹಾಗಾಗಿ, ಕೇಂದ್ರ ಸರ್ಕಾರವು 'ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ಸರ್ಕಾರ (ತಿದ್ದುಪಡಿ) ಕಾಯ್ದೆ, 2023' ರ ಮೂಲಕ ರಾಜಧಾನಿ ನಗರದ ಚುನಾಯಿತ ಸರ್ಕಾರದ ಮೇಲೆ ದೆಹಲಿಯ ಲೆಫ್ಟಿನೆಂಟ್ ಗವರ್ನರ್‌ಗೆ ಅಧಿಕಾರವನ್ನು ನೀಡಲಾಯಿತು.

ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ನಿಯಂತ್ರಿಸುತ್ತಿದ್ದು, ಕೇಜ್ರಿವಾಲ್ ಸೇರಿದಂತೆ ಹಲವರನ್ನು ಬಂಧಿಸಿತು. ದೇಶದ ಸಂಕೇತವಾಗಿ ಬೇರೆ ಬೇರೆ ರಾಜ್ಯಗಳಿಂದ ಬಂದಿರುವ ಪ್ರಜೆಗಳಿಂದ ಕೂಡಿದ ದೆಹಲಿಯನ್ನು, ತಮ್ಮ ಇಚ್ಛೆಯಂತೆ ಮತ್ತು ತಮ್ಮ ರಾಜಕೀಯ ಅಗತ್ಯಗಳಿಗೆ ಅನುಗುಣವಾಗಿ ಆಳಬೇಕು ಎಂದುಕೊಂಡಿರುವುದು ಮೋದಿ ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಒಂದು ನಿದರ್ಶನವಾಗಿದೆ. ಮದ್ಯದ ಹಗರಣದ ಆಧಾರದ ಮೇಲೆ ಎಎಪಿ ನಾಯಕತ್ವ ಕೂಡ ಒಂದು ಹಂತದಲ್ಲಿ ಮೋದಿಯ ಬಗ್ಗೆ ಮೃದುವಾಗಿತ್ತು. ಕಾಶ್ಮೀರದ 370ನೇ ವಿಧಿ ರದ್ದುಪಡಿಸುವುದನ್ನು ಬೆಂಬಲಿಸುವಂತಹ ಕೆಲಸಗಳನ್ನು ಎಎಪಿ ಮಾಡಿದೆ. 'ಇಂಡಿಯಾ' ವೇದಿಕೆಯಲ್ಲಿ ಎಎಪಿ ಪಾಲುದಾರರಾಗಿದ್ದರೂ ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಅಥವಾ ಯಾವುದೇ ಇತರ ಪಾಲುದಾರರ ನಡುವೆ ಯಾವುದೇ ತಿಳುವಳಿಕೆ ಅಥವಾ ಹೊಂದಾಣಿಕೆ ನಡೆಯಲಿಲ್ಲ. ಈ ಸಮಯದಲ್ಲಿ, ಬಿಜೆಪಿಯನ್ನು ಸೋಲಿಸುವುದು ಮತ್ತು ದೆಹಲಿಯ ಸಾಂವಿಧಾನಿಕ ಸ್ಥಾನಮಾನದ ರಕ್ಷಣೆಯನ್ನು ಮುಖ್ಯ ಗುರಿಯಾಗಿಟ್ಟುಕೊಂಡು, ಅದಕ್ಕೆ ಕಾರಣವಾದ ಬಿಜೆಪಿಯನ್ನು ಸೋಲಿಸುವುದು ನಿರ್ಣಾಯಕವಾಗಿದೆ. ಚುನಾವಣಾ ಪ್ರಚಾರವೂ ಅದಕ್ಕೆ ತಕ್ಕಂತೆ ನಡೆಯಬೇಕಿದೆ.

ಇಬ್ಬರ ನಡುವೆ ಮಾತ್ರ ಸ್ಪರ್ಧೆ ಇದೆಯೇ?

ಮೂರು ಪಕ್ಷಗಳ ನಡುವಿನ ಸ್ಪರ್ಧೆ ಎಂದು ಹೇಳಲಾಗುತ್ತಿದ್ದರೂ, ವಾಸ್ತವದಲ್ಲಿ ಪ್ರಮುಖ ಹೋರಾಟ ಬಿಜೆಪಿ ಮತ್ತು ಎಎಪಿ ನಡುವೆ ನಡೆಯುತ್ತದೆ ಎಂದು ರಾಜಕೀಯ ವೀಕ್ಷಕರು ಭಾವಿಸುತ್ತಿದ್ದಾರೆ. 2020ರ ಚುನಾವಣೆಯಲ್ಲಿ, ಎಎಪಿಗೆ ಶೇ. 53.57ರಷ್ಟು, ಬಿಜೆಪಿಗೆ ಶೇ. 38.5ರಷ್ಟು ಮತಗಳು ಬಂದರೆ, ಕಾಂಗ್ರೆಸ್‌ಗೆ ಕೇವಲ ಶೇ. 4.26ರಷ್ಟು ಮತಗಳು ಮಾತ್ರ ಬಂದವು. ಬಿಜೆಪಿ ಎಲ್ಲಾ ಲೋಕಸಭಾ ಸ್ಥಾನಗಳನ್ನು ಗೆದ್ದಿದ್ದರೂ, ವಿಧಾನಸಭೆಯಲ್ಲಿ ಅದು ಗೆಲ್ಲುತ್ತದೆಯೇ ಎಂಬುದು ಪ್ರಶ್ನೆಯಾಗಿದೆ. ಇಂಡಿಯಾ ವೇದಿಕೆಯಲ್ಲಿನ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿದ್ದರೂ, ಬಿಜೆಪಿಯ ಏಕಪಕ್ಷೀಯ ದಾಳಿಯಿಂದ ದೆಹಲಿಯ ಸಾಂವಿಧಾನಿಕ ಸ್ಥಾನವನ್ನು ರಕ್ಷಿಸಬೇಕು ಎಂಬುದರ ಮೇಲೆ ಏಕಾಭಿಪ್ರಾಯವಿದೆ.

ಎಎಪಿ, ಕಾಂಗ್ರೆಸ್ ಪ್ರತ್ಯೇಕ ಸ್ಪರ್ಧೆ

ಇತ್ತೀಚೆಗೆ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಎಎಪಿಗೆ ಕನಿಷ್ಠ ಸ್ಥಾನಗಳನ್ನು ಬಿಟ್ಟುಕೊಡಲು ಕಾಂಗ್ರೆಸ್ ನಿರಾಕರಿಸಿತು. ನಂತರ,

ಪುಟ 10 ಕ್ಕೆ



‘ಜನವಿರೋಧಿ ಪೊಲೀಸ್ ಕಮಿಷನರ್ ಮಂಗಳೂರಿಗೆ ಬೇಡ’ ಮುಖ್ಯಮಂತ್ರಿಗೆ ಬಹಿರಂಗ ಪತ್ರ

ಮಂಗಳೂರು ಪೊಲೀಸ್ ಕಮೀಷನರ್ ಮೇಲಿನ ಆರೋಪಗಳ ಕುರಿತಾಗಿ ಮುಖ್ಯಮಂತ್ರಿಯವರಿಗೆ, ದ.ಕ.ಜಿಲ್ಲೆಯ ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳ ಜಂಟಿ ವೇದಿಕೆಯಿಂದ ಬಹಿರಂಗ ಪತ್ರ

ಮಾನ್ಯ ಮುಖ್ಯಮಂತ್ರಿಗಳಾದ ತಾವು ಇದೇ 17ನೇ (ಜನವರಿ 2025) ತಾರೀಖಿನಂದು ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸದಲ್ಲಿ ಇರುತ್ತೀರಿ ಎಂದು ತಿಳಿಯಿತು. ಕೇವಲ ಐದು ದಿನಗಳ ಹಿಂದೆಯಷ್ಟೆ ಮಂಗಳೂರಿಗೆ ಬಂದಿದ್ದೀರಿ. ಸದ್ಯ ಬಲಾಢ್ಯರ, ಸಿರಿವಂತರ ಪ್ರತಿಷ್ಟೆ ಮೆರೆಯುವ ವೇದಿಕೆಯಾಗಿ ಮಾರ್ಪಟ್ಟಿರುವ ಖಾಸಗಿ ಕಂಬಳದ ಕಾರ್ಯಕ್ರಮದಲ್ಲಿ ಭಾಗಿಯಾದಿರಿ. ನೀವು ಮಂಗಳೂರಿಗೆ ಆಗಮಿಸುವ ಸಂದರ್ಭ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಕಾರ್ಯಕರ್ತರು ನಿಮ್ಮ ಮುಂದೆ ಭಿತ್ತಿಪತ್ರ ಪ್ರದರ್ಶಿಸಿ ಮಂಗಳೂರು ಪೊಲೀಸ್ ಕಮೀಷನರ್ ಅನುಪಮ್ ಅಗ್ರವಾಲ್‌ರ ಕುರಿತು ಗಮನ ಸೆಳೆಯುವ ಪ್ರಯತ್ನ ಮಾಡಿದ ವಿಚಾರ ನಿಮ್ಮ ಗಮನಕ್ಕೆ ಬಂದಿರಬಹುದು ಎಂದು ಭಾವಿಸುತ್ತೇವೆ.

ಈಗ, ಅಧಿಕೃತ ಜಿಲ್ಲಾ ಪ್ರವಾಸದ ಸಂದರ್ಭ ಕೆಲವು ಮುಖ್ಯ ವಿಚಾರಗಳನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇವೆ. (ಜಿಲ್ಲೆಯ ರಾಜಕಾರಣ, ಇಲ್ಲಿನ ಕಾಂಗ್ರೆಸ್ ಪಕ್ಷದ ನಾಯಕತ್ವವು ಬಿಜೆಪಿಯೊಂದಿಗೆ ನಡೆಸುತ್ತಿರುವ ಹೊಂದಾಣಿಕೆಯ ಆಟ, ಕರಾವಳಿಯಲ್ಲಿ ಸರಕಾರದ ವೈಫಲ್ಯಗಳ ಕುರಿತು ಹೇಳಲು ಬಹಳಷ್ಟು ವಿಚಾರಗಳಿವೆ. ಅವೆಲ್ಲವನ್ನು ಅವಕಾಶ ಸಿಕ್ಕಾಗ ನಿಮ್ಮ ಮುಂದೆ ತರುತ್ತೇವೆ, ಸದ್ಯ ಪೊಲೀಸ್ ಕಮೀಷನರ್ ವಿಷಯಕ್ಕೆ ಮಾತ್ರ ಈ ಪತ್ರವನ್ನು ಸೀಮಿತಗೊಳಿಸಲು ತೀರ್ಮಾನಿಸಿದ್ದೇವೆ) ಮುಖ್ಯಮಂತ್ರಿಯಾದ ತಮ್ಮನ್ನು ಉದ್ದೇಶಿಸಿ ಈ ಪತ್ರ ಬರೆಯುವ ಎಲ್ಲಾ ನೈತಿಕತೆ ನಮಗಿದೆ ಎಂದು ಭಾವಿಸುತ್ತೇವೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಬೇಕು ಎಂಬ ಉದ್ದೇಶದಿಂದ ನಿಮ್ಮ ಪರವಾಗಿ ದೃಢವಾಗಿ ನಿಂತವರು ನಾವು. ಕೋಮುವಾದಿ ಬಿಜೆಪಿಯನ್ನು ಅದರ ಭದ್ರ ನೆಲೆಯಲ್ಲಿ ಹಿಮ್ಮೆಟ್ಟಿಸಬೇಕು, ಜಾತ್ಯಾತೀತ ಪಕ್ಷಗಳಿಗೆ ಬಲ ತುಂಬಬೇಕು ಎಂಬ ಏಕೈಕ ಉದ್ದೇಶ ನಮ್ಮದಾಗಿತ್ತು. ಲೋಕಸಭಾ ಚುನಾವಣೆಯಲ್ಲೂ ನಮ್ಮ ನಿಲುವನ್ನು ಪುನರಾವರ್ತಿಸಿದೆವು. ಆ ಸಂದರ್ಭದಲ್ಲಿ ಜಾತ್ಯಾತೀತತೆಗೆ, ಪುರೋಗಾಮಿ ಚಿಂತನೆಗಳಿಗೆ ಹೆಚ್ಚು ನಿಕಟರಾದ ತಾವು (ಸಿದ್ದರಾಮಯ್ಯ) ನಾಯಕತ್ವವನ್ನು ವಹಿಸಿದ್ದು ನಮ್ಮ ನಂಬಿಕೆಗೆ ಬಲ ತುಂಬಿತ್ತು. ನಿಮ್ಮ ಮೇಲೆ ನಮ್ಮ ಬಳಗಕ್ಕೆ ಒಂದಿಷ್ಟು ಹೆಚ್ಚು ನಂಬಿಕೆ ಇತ್ತು.

ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ನಮಗೆಲ್ಲಾ ಬಹಳಷ್ಟು ನಿರಾಸೆಯಾಗಿದೆ. ಹಲವರಿಗೆ ಭ್ರಮನಿರಸನವಾಗಿದೆ. ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದೆ ಎಂಬ ಭಾವ ಮೂಡುವ ಯಾವ ಬೆಳವಣಿಗೆಗಳೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಘಟಿಸುತ್ತಿಲ್ಲ. ಬಿಜೆಪಿ ಆಡಳಿತವೇ ಮುಂದುವರಿದಿರುವ ಅನುಭವ ಇಲ್ಲಿನ ಜನಸಾಮಾನ್ಯರದ್ದು, ಅದು ನಮ್ಮದೂ ಹೌದು, ಕಾಂಗ್ರೆಸ್ ಪಕ್ಷದ ಬಹುತೇಕ ಕಾರ್ಯಕರ್ತರ ಅಭಿಪ್ರಾಯವೂ ಹೌದು. ಈ ಕುರಿತು ಬೇಕಾದಷ್ಟು ಘಟನೆಗಳನ್ನು ಉದಾಹರಣೆಯಾಗಿ ಕೊಡಬಹುದು, ನೀವು ಕೇಳಿದಲ್ಲಿ ಆಧಾರ ಸಹಿತವಾಗಿ ಖಂಡಿತಾ ವಿವರವಾಗಿ ನೀಡುತ್ತೇವೆ.

ಈಗ ವಿಷಯಕ್ಕೆ ಬರುತ್ತೇವೆ. ಮಂಗಳೂರು ಪೊಲೀಸ್ ಕಮೀಷನರ್ ಅನುಪಮ್ ಅಗ್ರವಾಲ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲೆಯ ಜನಪರ, ಜಾತ್ಯಾತೀತ ಪಕ್ಷಗಳು, ಸಂಘಟನೆಗಳು ಜಂಟಿಯಾಗಿ ತಿಂಗಳಿನಿಂದ ಹಲವು ಹಂತಗಳಲ್ಲಿ ಹೋರಾಟಗಳನ್ನು ನಡೆಸುತ್ತಿವೆ. ಗೃಹ ಸಚಿವರನ್ನು, ಉಸ್ತುವಾರಿ ಸಚಿವರನ್ನು ಖುದ್ದಾಗಿ ಕಂಡು ದೂರು ನೀಡಿದ್ದೇವೆ. ಇದು ನಿಮ್ಮ ಗಮನಕ್ಕೂ ಬಂದಿರುತ್ತದೆ. ಆದರೆ, ಇಲ್ಲಿನ ಪಟ್ಟಭದ್ರ ಶಕ್ತಿಗಳು ನಿಮಗೆ ಈ ಕುರಿತು ತಪ್ಪು ಮಾಹಿತಿ ನೀಡಿರಬಹುದು.

ಒಂದು ಸರಕಾರ ಜನರಿಗೆ ತಲುಪುವುದು ಅಧಿಕಾರಿಗಳ ಮೂಲಕ. ಅದರಲ್ಲೂ ಒಂದು ಜಿಲ್ಲೆಯ ಜಿಲ್ಲಾಧಿಕಾರಿ, ಪೊಲೀಸ್ ದಳದ ಮುಖ್ಯಸ್ಥ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದರ ಮೇಲೆ ಸಾಮಾನ್ಯವಾಗಿ ಸರಕಾರದ ಕುರಿತು ಜನ ಸಾಮಾನ್ಯರಲ್ಲಿ ಅಭಿಪ್ರಾಯ



ರೂಪುಗೊಳ್ಳುತ್ತದೆ. ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಜನತೆಗೆ ರಾಜ್ಯ ಸರಕಾರದ ಕುರಿತು ದೊಡ್ಡ ರೀತಿಯ ನಿರಾಸೆ ಉಂಟಾಗಿದೆ. ಆ ರೀತಿಯ ಭಾವನೆ ಮೂಡುವುದರಲ್ಲಿ ಪೊಲೀಸ್ ಕಮೀಷನರ್ ಅನುಪಮ್ ಅಗ್ರವಾಲ್ ಪಾತ್ರ ದೊಡ್ಡದು. ಕೆಳಹಂತದ ಅಧಿಕಾರಿಗಳು ಜನರೊಂದಿಗೆ ಕೆಟ್ಟದಾಗಿ ನಡೆದುಕೊಂಡಾಗ ಉನ್ನತ ಅಧಿಕಾರಿಯಾದ ಪೊಲೀಸ್ ಕಮೀಷನರ್ ಬಳಿಗೆ ದೂರು ನೀಡುವುದು ಕ್ರಮ, ಇಲ್ಲಿ ಮಾತ್ರ ಅದು ಸಾಧ್ಯವೇ ಇಲ್ಲ. ಕಮೀಷನರ್ ಅಗ್ರವಾಲ್ ತನ್ನನ್ನು ಭೇಟಿಯಾಗುವ ಜನಪರ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು, ಜನಸಾಮಾನ್ಯರೊಂದಿಗೆ ನಗುಮುಖದೊಂದಿಗೆ ಮಾತಾಡುವ ಅಭ್ಯಾಸವನ್ನೆ ಹೊಂದಿಲ್ಲ. ಇವರಿಗೆ ಜನಚಳವಳಿಗಳು, ಜನಸಾಮಾನ್ಯರ ಪ್ರತಿಭಟನೆ ಹೋರಾಟಗಳ ಕುರಿತು ತೀರಾ ಅನಾದಾರ ಇದೆ. ಹಲವು ಸಲ ಕೆಟ್ಟದಾಗಿ ನಡೆದುಕೊಂಡಿದ್ದಾರೆ. ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಹೊಂದಿರುವ ಡಿಸಿಪಿ ಅಭಿಷೇಕ್ ಗೋಯಲ್ ಅವರ ನಡೆಯು ಇವರಿಗಿಂತ ಭಿನ್ನ ಏನಲ್ಲ. ಅದೇ ಸಂದರ್ಭ ದಂಧೆಕೋರರು, ಅವರ ಪರವಾಗಿ ದಲ್ಲಾಳಿತನ ಮಾಡುವವರೊಂದಿಗೆ ನಗುಮುಖದ ಸಂಬಂಧ ಹೊಂದಿದ್ದಾರೆ. ಕೋಮುವಾದಿ ಸಂಘಟನೆಗಳಿಗೂ ಕಮೀಷನರ್ ಕುರಿತು ದೂರುಗಳಿಲ್ಲ ಎಂಬುದು ಗಮನಾರ್ಹ. ಪಕ್ಕದ ಉಡುಪಿ ಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳು, ದಂಧೆಕೋರರು, ಕಾನೂನು ಭಂಜಕರು ಅಲ್ಲಿನ ಪೊಲೀಸ್ ವರಿಷ್ಟಾಧಿಕಾರಿಗಳ ಕುರಿತು ತೀರಾ ಅತೃಪ್ತರಾಗಿದ್ದಾರೆ, ಜನಸಾಮಾನ್ಯರು ಮೆಚ್ಚುಗೆ ನುಡಿಗಳನ್ನು ಆಡುತ್ತಾರೆ ಎಂಬುದು ಉಲ್ಲೇಖನೀಯ. ಮಂಗಳೂರಲ್ಲಿ ಮಾತ್ರ ಇದು ತದ್ವಿರುದ್ಧ.

ಕಮೀಷನರ್ ಅಗ್ರವಾಲ್ ಜಾತ್ಯಾತೀತ ಮೂಮೆಂಟ್‌ಗಳು, ಜನಪರ ಹೋರಾಟಗಳು, ದುರ್ಬಲ ವಿಭಾಗಗಳ ಕುರಿತು ಹೊಂದಿರುವ ಅಸಹನೆಗಳಿಗೆ ಸಂಬಂಧಿಸಿ ಒಂದಿಷ್ಟು ಘಟನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇವೆ. ನಿಮ್ಮ ಸರಕಾರ ಅಧಿಕಾರ ಹಿಡಿದ ಪ್ರಥಮದಲ್ಲಿ ದಸರಾ ಹಬ್ಬದ ಸಂದರ್ಭ, ಸಾರ್ವಜನಿಕ ಜಾತ್ರೆ ವ್ಯಾಪಾರದಲ್ಲಿ ಮುಸ್ಲಿಂ ವ್ಯಾಪಾರಿಗಳು ಮಳಿಗೆ ಇಡಬಾರದು ಎಂದು ಸಂಘಪರಿವಾರ ದಾಂಧಲೆ ಎಬ್ಬಿಸಿತು. ಹಿಂದು ವ್ಯಾಪಾರಿಗಳ ಅಂಗಡಿಗಳ ಮೇಲೆ ಬಲವಂತದಿಂದ ಕೇಸರಿ ಬಾವುಟ ಹಾರಿಸಿ, ಆ ಮಳಿಗೆಗಳಲ್ಲಿ ಮಾತ್ರ ವ್ಯಾಪಾರ ಮಾಡಬೇಕು ಎಂದು ಸಂವಿಧಾನ, ಕಾನೂನು ವಿರುದ್ದವಾದ ಕಾರ್ಯಾಚರಣೆ ನಡೆಸಿದವು. ಈ ಸಂದರ್ಭ ಪೊಲೀಸ್ ಕಮೀಷನರ್ ಮತೀಯ ಸಂಘಟನೆಗಳ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ, ಬದಲಿಗೆ, ಈ ಕುರಿತು ವಿರೋಧ ದಾಖಲಿಸಲು, ದೂರು ನೀಡಲು ತೆರಳಿದ ಮುಸ್ಲಿಂ ವ್ಯಾಪಾರಸ್ಥರು ಹಾಗೂ ಅವರ ಪ್ರತಿನಿಧಿಗಳೊಂದಿಗೆ ಕೆಟ್ಟದಾಗಿ ವರ್ತಿಸಿದರು. ಅದರ ತರುವಾಯ, ಕಲ್ಲಡ್ಕ ಪ್ರಭಾಕರ ಭಟ್ ಮುಸ್ಲಿಂ ಮಹಿಳೆಯರ ಕುರಿತು ಅಶ್ಲೀಲ ಪದಗಳಿಂದ ನಿಂದಿಸಿ ಭಾಷಣ ಮಾಡಿದ ಸಂದರ್ಭ ಎಡ ಸಂಘಟನೆಗಳ ಕಾರ್ಯಕರ್ತರು ಅವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಸಾಂಕೇತಿಕ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ಸಣ್ಣ ಪ್ರಮಾಣದ, ತೀರಾ ಸಾಂಕೇತಿಕವಾದ ಈ ಪ್ರತಿಭಟನೆಗೆ ಕಮೀಷನರ್ ಅಗ್ರವಾಲ್ ಅನುಮತಿ ನಿರಾಕರಿಸಿ, ಪ್ರತಿಭಟನೆಯಲ್ಲಿ ಭಾಗಿಯಾದ ಪ್ರತಿಯೊಬ್ಬ ಕಾರ್ಯಕರ್ತರ ಮೇಲೂ ಎಫ್ಐಆರ್ ದಾಖಲಿಸಿದರು. ಕ್ರೈಸ್ತ ಸಮುದಾಯಕ್ಕೆ ಸೇರಿದ ಸಂತ ಜರೋಜಾ ಸ್ಕೂಲ್‌ನ ಮೇಲೆ ಸುಳ್ಳು ಆರೋಪ ಹೊರಿಸಿ, ಮತೀಯ ದುರುದ್ದೇಶದ ಭಾಗವಾಗಿ ಬಿಜೆಪಿ ಶಾಸಕರುಗಳ ನೇತೃತ್ವದಲ್ಲಿ ಗೇಟ್ ಮುಂಭಾಗ ಸಂಘಪರಿವಾರದ ಕಾರ್ಯಕರ್ತರು ಇಡೀ ದಿನ ಪ್ರತಿಭಟನೆ ಹೆಸರಿನಲ್ಲಿ ದಬ್ಬಾಳಿಕೆ ನಡೆಸಿದಾಗಲೂ ಪೊಲೀಸ್ ಕಮೀಷನರ್ ಕನಿಷ್ಠ ಕ್ರಮಗಳನ್ನೂ ಜರುಗಿಸದೆ ಮೌನ ಪ್ರೇಕ್ಷಕರಾಗಿದ್ದರು.

ಕಳೆದ ಆರು ತಿಂಗಳಲ್ಲಂತೂ ಎಡಪಕ್ಷಗಳು, ಜನಪರ ಸಂಘಟನೆಗಳ ವಿರುದ್ದ ತೀರಾ ಹಗೆತನವನ್ನು ಸಾಧಿಸುತ್ತಾ ಬಂದಿದ್ದಾರೆ, ವಿನಾಕಾರಣ ಧರಣಿ, ಪ್ರತಿಭಟನೆಗಳಿಗೆ ಸತತವಾಗಿ ಅನುಮತಿ ನಿರಾಕರಿಸಿದ್ದಾರೆ. ಪ್ಯಾಲೆಸ್ತೀನ್‌ನಲ್ಲಿ ಕದನವಿರಾಮ ಘೋಷಿಸಬೇಕು ಎಂಬ ಆಗ್ರಹದ ಮೇಲೆ ಎಡಪಕ್ಷಗಳು ಹಮ್ಮಿಕೊಂಡಿದ್ದ ಧರಣಿಗೆ ಕೊನೆಯ ಕ್ಷಣದಲ್ಲಿ ಕಾರಣವೇ ಇಲ್ಲದೆ ಅನುಮತಿ ನಿರಾಕರಿಸಿದ್ದಾರೆ. ಧ್ವನಿವರ್ಧಕ ಬಳಸದೆ, ಎಪ್ಪತ್ತರಷ್ಟು ಕಾರ್ಯಕರ್ತರು ಸೇರಿ ಸಾಂಕೇತಿಕವಾಗಿ ಸಭೆ ನಡೆಸಿದ್ದಕ್ಕೆ ಎಡಪಕ್ಷಗಳ 11 ಜನ ಪ್ರಮುಖ ನಾಯಕರ ಮೇಲೆ ಮೊಕದ್ದಮೆ ದಾಖಲಿಸಿದ್ದಾರೆ. ಆದರೆ, ಅದಾಗಿ ಹದಿನೈದು ದಿನಗಳಲ್ಲಿ ಅದೇ ಸ್ಥಳದಲ್ಲಿ ಸಂಘಪರಿವಾರಕ್ಕೆ ಬಾಂಗ್ಲಾ ದೇಶದ ಪ್ರಶ್ನೆಯ ಮೇಲೆ ರಸ್ತೆ ಪೂರ್ತಿ ಮುಚ್ಚಿ ಪ್ರತಿಭಟನೆ ನಡೆಸಲು ಅನುಮತಿ ನೀಡಿದ್ದಾರೆ. ಕೋಮು ಉದ್ವಿಗ್ನತೆ ಕೆರಳಿಸುವ ಭಾಷಣಕ್ಕೂ ಅವಕಾಶ ಒದಗಿಸಿದ್ದಾರೆ. ಹಾಗೆಯೆ, ಕಾಂಗ್ರೆಸ್ ಪದಾಧಿಕಾರಿಗಳು ಒಳಗೊಂಡು ಸಮಾನ ಮನಸ್ಕರು ರಚಿಸಿಕೊಂಡಿರುವ "ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ, ಸುರತ್ಕಲ್" ರಾಷ್ಟ್ರೀಯ ಹೆದ್ದಾರಿಯ ಗಂಭೀರ ಸಮಸ್ಯೆಗಳು, ಬಿಜೆಪಿ ಸಂಸದ, ಶಾಸಕರ ವೈಫಲ್ಯವನ್ನು ವಿರೋಧಿಸಿ ಹಮ್ಮಿಕೊಂಡಿದ್ದ ಸಾಮೂಹಿಕ ಧರಣಿಗೂ ಕೊನೆಯ ಕ್ಷಣದಲ್ಲಿ ವಿನಾಕಾರಣ ಅನುಮತಿ ನಿರಾಕರಿಸಿದರು. ಸಮಿತಿಯ ಸಂಚಾಲಕರ ಮನೆಗೆ ಪೊಲೀಸರನ್ನು ಕಳುಹಿಸಿ ಬೆದರಿಸಿದರು. ಕೊನೆಗೆ, ಧ್ವನಿವರ್ಧಕ ಬಳಸದೆ, ಟೆಂಟ್ ಹಾಕದೆ ಸಾಂಕೇತಿಕವಾಗಿ ನಡೆದ ಶಾಂತಿಯುತ ಧರಣಿಯ ಮೇಲೆ ಎಫ್ಐಆರ್ ಹಾಕಿದರು. ಈ ಎಫ್ಐಆರ್ ಗಳ ಮೇಲೆ ಬಹಳ ತರಾತುರಿಯಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನೂ ಸಲ್ಲಿಸಿದ್ದಾರೆ. ಈ ಆರೋಪಪಟ್ಟಿಯಲ್ಲಿ ಎಡಪಕ್ಷಗಳ ಜೊತೆಗೆ ಕಾಂಗ್ರೆಸ್ ಕಾರ್ಯಕರ್ತರ ಹೆಸರುಗಳನ್ನೂ ಸೇರಿಸಿದ್ದಾರೆ. ಹೀಗೆ ಹಲವು ಎಫ್ಐಆರ್ ಗಳನ್ನು ಹಾಕಿ ಜನಪರ, ಜಾತ್ಯಾತೀತ ಸಂಘಟನೆಗಳನ್ನು ಪೂರ್ತಿಯಾಗಿ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಒಟ್ಟಾರೆಯಾಗಿ, ಬಿಜೆಪಿ ಹಾಗೂ ಅದರ ಶಾಸಕರುಗಳಿಗೆ ಇಷ್ಟವಾಗದ್ದನ್ನು ಮಂಗಳೂರಿನಲ್ಲಿ ನಡೆಸಲು ಬಿಡುವುದಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ಆದರೆ, ಈ ಸರ್ವಾಧಿಕಾರಿ ನಡೆ, ದಬ್ಬಾಳಿಕೆ, ನಿರ್ಬಂಧಗಳು ಜಾತ್ಯಾತೀತ ಮೂಮೆಂಟ್‌ಗಳಿಗೆ ಮಾತ್ರ ಸೀಮಿತವಾಗಿದೆ. ಸಂಘಪರಿವಾರ, ಬಿಜೆಪಿ ಪರಿವಾರಕ್ಕೆ ಮುಕ್ತ ಅವಕಾಶ ಒದಗಿಸಲಾಗಿದೆ. ಮೇಲಿನ ಘಟನೆಗಳ ಆಸುಪಾಸಿನಲ್ಲಿ ಎಬಿವಿಪಿಗೆ ಮಂಗಳೂರು ವಿವಿಗೆ ಮೆರವಣಿಗೆ ನಡೆಸಲು, ಅಲ್ಲಿ ದಾಂಧಲೆ ನಡೆಸಲು ಅನುಮತಿ ನೀಡಿದ್ದಾರೆ. ಸುರತ್ಕಲ್ ಮುಖ್ಯರಸ್ತೆಯನ್ನು ಬಂದ್ ಮಾಡಿ, ಯಾವ ಅನುಮತಿಯನ್ನೂ ಪಡೆಯದೆ, ಬಿಜೆಪಿ ಶಾಸಕ ಭರತ್ ಶೆಟ್ಟಿ ಎರಡು ದಿನಗಳ ಕಾಲ ಆಹಾರಮೇಳ ನಡೆಸಲು ಪೂರ್ಣ ಪೊಲೀಸ್ ಭದ್ರತೆಯೊಂದಿಗೆ ಅವಕಾಶ ಒದಗಿಸಿದ್ದಾರೆ. ಈ ವಾರಾಂತ್ಯದಲ್ಲಿ ಮಂಗಳೂರು ನಗರದಲ್ಲಿ ನಿಯಮಗಳನ್ನು ಪೂರ್ತಿ ಉಲ್ಲಂಘಿಸಿ ನಗರದ ಮುಖ್ಯ ರಸ್ತೆಗಳನ್ನು, ಫುಟ್ ಪಾತ್ ಗಳನ್ನು ಅತಿಕ್ರಮಿಸಿ ಬಿಜೆಪಿ ಶಾಸಕ ವೇದವ್ಯಾಸ್ ಕಾಮತ್ ನೇತೃತ್ವದಲ್ಲಿ ವ್ಯಾಪಾರಿ ಉದ್ದೇಶದ ಆಹಾರ ಮೇಳ ನಡೆಯಲಿದೆ. ಈ ಖಾಸಗಿ ಮೇಳಕ್ಕೂ ನಿಯಮಗಳನ್ನು ಗಾಳಿಗೆ ತೂರಿ ಈಗಾಗಲೆ ಅನುಮತಿ ಮಂಜೂರು ಮಾಡಿದ್ದಾರೆ, ಕಳೆದ ವರ್ಷವು ಅಪಾರ ಜನ ವಿರೋಧದ ಮಧ್ಯೆ ಅನುಮತಿ ಒದಗಿಸಿದ್ದಾರೆ. ಇದಲ್ಲದೆ ಹಲವು ದ್ವೇಷ

ಪುಟ 14 ಕ್ಕೆ

ಚಿನ್ನಿಯಂಪಾಳ್ಯಂನ ನಾಲ್ವರು ಯುವ ಹೋರಾಟಗಾರರು.......

ಪುಟ 6 ರಿಂದ

ಕೆ.ರಮಣಿ, ಭೂಪತಿ ಜೈಲಿನೊಳಗೆ ಶಿಕ್ಷೆಗೊಳಗಾಗಿದ್ದ ನಾಲ್ವರು ಕಾರ್ಮಿಕರನ್ನು ಭೇಟಿಯಾದರು. ವಾಸ್ತವವಾಗಿ, ಅವರನ್ನು ಭೇಟಿ ಮಾಡಲು ಹೋದ ಹಿರಿಯ ಸಂಗಾತಿಗಳು ನ್ಯಾಯಾಲಯದ ಆದೇಶದಿಂದ ವಿಚಲಿತರಾಗಿದ್ದರು. ಇದಕ್ಕೆ ವಿರುದ್ಧವಾಗಿ, ನೇಣು ಕುಣಿಕೆಯ ಶಿಕ್ಷೆಗೆ ಗುರಿಯಾಗಿದ್ದ ನಾಲ್ವರು ಕಾರ್ಮಿಕರು ಅನುಕರಣೀಯ ಧೈರ್ಯ ಮತ್ತು ದೃಢಸಂಕಲ್ಪವನ್ನು ಪ್ರದರ್ಶಿಸಿದರು. ತಮ್ಮನ್ನು ನೋಡಲು ಬಂದವರಿಗೆ ಸಾಂತ್ವನ ಹೇಳಿ, 'ಸಮಾಜವಾದಿ ಮಹತ್ವಾಕಾಂಕ್ಷೆ ಗೆಲ್ಲುವ ಹೋರಾಟವನ್ನು ಮುಂದುವರಿಸಿ. ಕಾರ್ಮಿಕರ ಒಗ್ಗಟ್ಟಿಗೆ ಉದಾಹರಣೆಯಾಗಿ ನಮ್ಮನ್ನು ಒಂದೇ ಗುಂಡಿಯಲ್ಲಿ ಹೂತುಹಾಕಿ' ಎಂದು ಕೇಳಿಕೊಂಡರು. ಅವರು "ಇಂಕ್ವಿಲಾಬ್, ಜಿಂದಾಬಾದ್!" ಮತ್ತು "ಲಾಲ್ ಸಲಾಮ್" ಎಂಬ ಗುಡುಗಿನ ಘೋಷಣೆಗಳನ್ನು ಕೂಗಿದರು. ಅದು ಕೊಯಮತ್ತೂರು ಕೇಂದ್ರ ಕಾರಾಗೃಹದ ಪ್ರತಿಯೊಂದು ಮೂಲೆ, ಮೂಲೆಯಲ್ಲಿ ಪ್ರತಿಧ್ವನಿಯಾಗಿ, ಇಡೀ ಕೊಯಮತ್ತೂರು ನಗರದಲ್ಲಿ ಮತ್ತು ತಮಿಳುನಾಡಿನ ಇಡೀ ಜವಳಿ ಕಾರ್ಮಿಕರ ಚಳವಳಿಯಲ್ಲಿ ಪ್ರತಿಧ್ವನಿಸಿತು.

ಕ್ರಾಂತಿ ಘೋಷಣೆಯೊಂದಿಗೆ ನೇಣುಗಂಬ ಏರಿದರು

ನಾಲ್ವರು ಧೈರ್ಯಶಾಲಿ ಹೋರಾಟಗಾರರನ್ನು 1946 ರ ಜನವರಿ 8 ರ ಬೆಳಗಿನ ಜಾವ ಐದು ಗಂಟೆಗೆ "ಕ್ರಾಂತಿ ಆರಂಭವಾಗಿದೆ, ವಿಶ್ವದ ಕಾರ್ಮಿಕರೇ ಒಂದಾಗಿ" ಎಂಬ ಘೋಷಣೆಗಳೊಂದಿಗೆ ನಾಲ್ವರು ನೇಣುಗಂಬ ಏರಿದರು. ಇಡೀ ಕೊಯಮತ್ತೂರು ನಗರ ಮತ್ತು ಜವಳಿ ಕಾರ್ಮಿಕರು ಕಾರ್ಮಿಕ ವೀರರ ಸಾವಿಗೆ ಶೋಕ ವ್ಯಕ್ತಪಡಿಸಿದರು. ನಗರವು ಹಿಂದೆಂದೂ ಇಷ್ಟೊಂದು ದೊಡ್ಡ ಕಾರ್ಮಿಕರ ಸಭೆಯನ್ನು ಕಂಡಿರಲಿಲ್ಲ. ಸಹಸ್ರ ಸಹಸ್ರ ಕಾರ್ಮಿಕರು ತಮ್ಮ ವಿಮೋಚಕರು ಮತ್ತು ಹೋರಾಟಗಾರ ಒಡನಾಡಿಗಳ ಶವಗಳನ್ನು ಹೊತ್ತುಕೊಂಡು ಕೊಯಮತ್ತೂರಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಾಲ್ವರನ್ನೂ ಅವರ ಕೊನೆಯ ಆಸೆಯಂತೆ ಚಿನ್ನಿಯಂಪಳಯಂನಲ್ಲಿ ಒಂದೇ ಗುಂಡಿಯಲ್ಲಿ ಸಮಾಧಿ ಮಾಡಲಾಯಿತು. ಧೈರ್ಯಶಾಲಿ ಹೋರಾಟಗಾರರು ತಮ್ಮ ಹೋರಾಟದ ಬದ್ಧತೆ ಮತ್ತು ದೃಢಸಂಕಲ್ಪವನ್ನು ಪ್ರದರ್ಶಿಸಿ ಹುತಾತ್ಮರಾದರು. ಅವರ ತ್ಯಾಗವನ್ನು ಜವಳಿ ಕಾರ್ಮಿಕರ ಚಳವಳಿ ಎಂದಿಗೂ ಮರೆಯುವುದಿಲ್ಲ. ಈ ಯುವ ಹುತಾತ್ಮರ ತ್ಯಾಗವು ಶೋಷಣಾ ವ್ಯವಸ್ಥೆಯನ್ನುಕೊನೆಗೊಳಿಸುವವರೆಗೂ ಕಾಡುತ್ತಲೇ ಇರುತ್ತದೆ.

11 ಮಹಿಳಾ ಕಾರ್ಮಿಕ ಮುಖಂಡರು ಗುಂಡಿಗೆ ಬಲಿಯಾದರು

ಈ ತ್ಯಾಗ ಟ್ರೇಡ್ ಯೂನಿಯನ್ ಚಳವಳಿಗೆ ಹಿನ್ನಡೆಯಾಗುತ್ತದೆ ಎಂದು ಮಾಲೀಕರು ಭಾವಿಸಿದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಹುತಾತ್ಮರ ತ್ಯಾಗದಿಂದ ಪ್ರೇರಿತರಾದ ಕಾರ್ಮಿಕ ವರ್ಗ ಹೋರಾಟವನ್ನು ತೀವ್ರಗೊಳಿಸಿತು. ನವೆಂಬರ್ 11, 1946 ರಂದು, ಕೊಯಮತ್ತೂರಿನ ಸ್ಟೇನಸ್ ಮಿಲ್ ನಲ್ಲಿ ನಡೆದ ಪ್ರತಿಭಟನೆಯಲ್ಲಿ ಅಮ್ಮು ಮತ್ತು ಪಪ್ಪಮ್ಮಾಳ್ ಸೇರಿದಂತೆ 11 ಮಹಿಳಾ ಕಾರ್ಮಿಕ ಸಂಘದ ಮುಖಂಡರು ಬ್ರಿಟಿಷ್ ಪೋಲೀಸರ ಗುಂಡಿಗೆ ಬಲಿಯಾದರು. ಪ್ರತಿಭಟನೆಯ ಅಲೆಗಳ ಫಲವಾಗಿ ಕಾರ್ಮಿಕರಿಗೆ ಎಲ್ಲಾ ಹಕ್ಕುಗಳೂ ಸಿಕ್ಕಿವೆ. ಇದು ಜವಳಿ ಗಿರಣಿ ಕೆಲಸಗಾರರಿಗೆ ಗೌರವಯುತವಾದ ಜೀವನವನ್ನು ಒದಗಿಸಿತು. ಸ್ವಾತಂತ್ರ್ಯಕ್ಕೆ ಮುಂಚೆಯೇ, ಕೆಂಪು ಧ್ವಜ ಚಳವಳಿಯು ತಮಿಳುನಾಡಿನ ಕಾರ್ಖಾನೆಗಳಲ್ಲಿನ ಟ್ರೇಡ್ ಯೂನಿಯನ್ ಹಕ್ಕುಗಳಿಗಾಗಿ ಮಾತ್ರವಲ್ಲದೆ, ಲಿಂಗ ದಬ್ಬಾಳಿಕೆ ಮತ್ತು ಅಸಮಾನತೆಯ ವಿರುದ್ಧವೂ ಪ್ರಬಲ ಹೋರಾಟಗಳನ್ನು ನಡೆಸಿತು.

ಹೊಸ ಸವಾಲುಗಳು ಮತ್ತು ಹೋರಾಟದ ಹಾದಿ

ಆದರೆ, 1990ರ ದಶಕದ ನಂತರ, ಜವಳಿ ಗಿರಣಿಗಳಲ್ಲಿ ಬಂಡವಾಳಶಾಹಿಗಳು ಹೊಸ ತಂತ್ರಗಳನ್ನು ಅಳವಡಿಸಿಕೊಂಡರು. ತಮ್ಮ ಲೂಟಿಯ ಕನಸಿಗೆ ಕಾರ್ಮಿಕರ ಸಂಘಟಿತ ದುಡಿಮೆಯೇ ದೊಡ್ಡ ಅಡ್ಡಿಯಾಗಲಿದೆ ಎಂದುಕೊಂಡರು. ಅವರು ನವ ಉದಾರವಾದಿ ನೀತಿಗಳನ್ನು ಬಳಸಿಕೊಂಡು ಜವಳಿ ಗಿರಣಿಗಳನ್ನು ಸುಧಾರಿಸಿದರು. ಗಿರಣಿಗಳನ್ನು ಸಣ್ಣ ಘಟಕಗಳಾಗಿ ವಿಂಗಡಿಸಿ ಹಳ್ಳಿಗಳಿಗೆ ಸ್ಥಳಾಂತರಿಸಿದರು. ಈ ಗ್ರಾಮೀಣ ಕಾರ್ಖಾನೆಗಳಲ್ಲಿ, ಮಹಿಳಾ ಕಾರ್ಮಿಕರನ್ನು ತಮಿಳುನಾಡಿನ ದಕ್ಷಿಣ ಜಿಲ್ಲೆಗಳಿಂದ ಅತ್ಯಂತ ಕಡಿಮೆ ವೇತನದಲ್ಲಿ ಕರೆತಂದು ಆವರಣದಲ್ಲಿ ಬಂಧಿಸಿ ಗುತ್ತಿಗೆ ಕಾರ್ಮಿಕರಾಗಿ ನೇಮಿಸಿಕೊಳ್ಳಲಾಗುತ್ತದೆ. ಈಗ ವಿದೇಶಿ ವಲಸೆ ಕಾರ್ಮಿಕರನ್ನೂ ಗುತ್ತಿಗೆ ನೌಕರರನ್ನಾಗಿ ಮಾಡಲಾಗಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಗಿರಣಿ ನಿಗಮ (ನ್ಯಾಷನಲ್ ಟೆಕ್ಸ್ ಟೈಲ್ ಕಾರ್ಪೊರೇಷನ್)ಕ್ಕೆ ಸೇರಿದ ಕೊಯಮತ್ತೂರಿನ 5 ಗಿರಣಿಗಳು ನಾಲ್ಕು ವರ್ಷಗಳಿಂದ ಮುಚ್ಚಲ್ಪಟ್ಟಿವೆ. ಅವುಗಳನ್ನು ನಡೆಸಲು ಬೇಕಾದ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ನಿರಾಕರಿಸುತ್ತದೆ. ಕಾರ್ಮಿಕ ಶೋಷಣೆಯ ನಡುವೆಯೂ ಜವಳಿ ಗಿರಣಿಗಳು ಇಂದು ಬಿಕ್ಕಟ್ಟನ್ನು ಎದುರಿಸುತ್ತಿವೆ. ಕಚ್ಚಾವಸ್ತು ಹತ್ತಿಯ ಬೆಲೆಯಲ್ಲಿನ ಏರಿಳಿತ, ಕೇಂದ್ರ ಸರ್ಕಾರದಿಂದ ಭಾರಿ ತೆರಿಗೆ, ಹಣದುಬ್ಬರ ಏರಿಕೆ ಮತ್ತು ಕೇಂದ್ರ ಸರ್ಕಾರದ ದೊಡ್ಡ ಬಂಡವಾಳಶಾಹಿ ಕಂಪನಿಗಳ ಪರವಾಗಿರುವ ನಿಲುವುಗಳಿಂದ ಜವಳಿ ಉದ್ಯಮವು ತೀವ್ರ ಸಂಕಷ್ಟದಲ್ಲಿದೆ. ರಿಲಯನ್ಸ್, ಬಿರ್ಲಾ, ಟಾಟಾದಂತಹ ದೊಡ್ಡ ಬಂಡವಾಳಶಾಹಿ ಕಂಪನಿಗಳು ಇಂದು ಜವಳಿ ಉದ್ಯಮದಲ್ಲಿ ಪ್ರಾಬಲ್ಯ ಹೊಂದಿವೆ. ಸಣ್ಣ ಪಟ್ಟಣಗಳಲ್ಲಿಯೂ ಅವರು ದೇಶದಾದ್ಯಂತ ಮಳಿಗೆಗಳನ್ನು ತೆರೆಯುತ್ತಿದ್ದಾರೆ. ಇಂದು ಸರ್ಕಾರದ ನೀತಿಗಳಿಂದಾಗಿ ಕೈಗಾರಿಕಾ ಬಿಕ್ಕಟ್ಟು ಎದುರಾದಾಗ ಹತ್ತಾರು ಸಾವಿರ ಸಂಖ್ಯೆಯಲ್ಲಿ ಸೇರಿ ಸರ್ಕಾರದ ವಿರುದ್ಧ ಹೋರಾಟ ನಡೆಸಿ ದಬ್ಬಾಳಿಕೆ ಎದುರಿಸುವ ಸಂಘಟಿತ ಕಾರ್ಮಿಕರು ಇಲ್ಲದಂತಾಗಿದೆ.

ಬಂಡವಾಳಶಾಹಿ ಆರ್ಥಿಕ ನೀತಿಯ ಭಾಗವಾದ ಆಧುನಿಕ ಉದಾರವಾದವು ತನ್ನ ಅಂತರ್ಗತ ಗುಣಗಳೊಂದಿಗೆ ಸಣ್ಣ ಮತ್ತು ಅತಿ ಸಣ್ಣ ಉತ್ಪಾದಕರನ್ನು ನುಂಗಿಹಾಕಲು ಕಾಯುತ್ತಿದೆ. ಈ ನೀತಿಗಳ ವಿರುದ್ಧ ಕಾರ್ಮಿಕರು ಮತ್ತು ಸಣ್ಣ ಪ್ರಮಾಣದ ಉತ್ಪಾದಕರ ಸಮಸ್ಯೆಗಳನ್ನು ಪರಿಹರಿಸಲು ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ರಾಜಿಯಿಲ್ಲದ ಹೋರಾಟ ನಡೆಸುವ ಅಗತ್ಯವಿದೆ. ಇಂತಹ ಹೋರಾಟದಲ್ಲಿ ಹುತಾತ್ಮರಾದ ಚಿನ್ನಿಯಂಪಾಳ್ಯದ ಹುತಾತ್ಮರ ಬಲಿದಾನ ನಮಗೆ ಸದಾ ಸ್ಫೂರ್ತಿ ನೀಡುತ್ತದೆ.

–ಸಿಚಿ

ದೆಹಲಿ ವಿಧಾನಸಭಾ ಚುನಾವಣೆ: ಎಎಪಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುತ್ತದೆಯೇ........

ಪುಟ 8 ರಿಂದ

ಮಹಾರಾಷ್ಟ್ರದಲ್ಲೂ ಇದೇ ರೀತಿ ನಡೆದುಕೊಂಡಿತು. ತಾನು ಬಲವಾಗಿರುವ ರಾಜ್ಯಗಳಲ್ಲಿ ಇತರ ಪಕ್ಷಗಳೊಂದಿಗೆ ಸ್ಥಾನಗಳನ್ನು ಹೊಂದಾಣಿಕೆ ಮಾಡಿಕೊಳ್ಳದೆ, ತಾನು ಬಲವಾಗಿಲ್ಲದ ರಾಜ್ಯಗಳಲ್ಲಿ ಮಾತ್ರ ಇತರರು ಬೆಂಬಲ ನೀಡಬೇಕೆಂದು ಬಯಸುವುದನ್ನು ಇಂಡಿಯಾ ಕೂಟದಲ್ಲಿ ಇರುವ ಇತರೆ ಪಕ್ಷಗಳು ಒಪ್ಪಿಕೊಳ್ಳುವುದಿಲ್ಲ. ದೆಹಲಿಯಲ್ಲಿ ಎಎಪಿ, ಕಾಂಗ್ರೆಸ್ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸುವುದಾಗಿ ಈ ಹಿಂದೆ ಘೋಷಿಸಿದ್ದವು. ಎಎಪಿ ಕೂಡ ಅದನ್ನೇ ಬಯಸುತ್ತಿರುವಂತೆ ತೋರುತ್ತದೆ. ಏಕೆಂದರೆ ದೆಹಲಿಯಲ್ಲಿ ಸಿಖ್ಖರ ಮೇಲೆ ನಡೆದ ಹತ್ಯಾಕಾಂಡವು ಬಿಜೆಪಿಯ ಬತ್ತಳಿಕೆಯಲ್ಲಿ ನಿರಂತರ ಅಸ್ತ್ರವಾಗಿದೆ. ಈಗಲೂ ಸಹ, ಆ ಪಕ್ಷದ ನಾಯಕರು ಕಾಂಗ್ರೆಸ್ ಮೇಲಿನ ಟೀಕೆಗಳೊಂದಿಗೆ ಚರ್ಚೆಯ ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಇತ್ತೀಚೆಗೆ ಬಿಜೆಪಿ ಮಾಜಿ ಸಂಸದ ರಮೇಶ್ ಬಿಧುರಿ ದೆಹಲಿ ರಸ್ತೆ ದುರಸ್ತಿ ನೆಪದಲ್ಲಿ ಪ್ರಿಯಾಂಕಾ ವಿರುದ್ಧ ಮಾಡಿದ ಆಕ್ಷೇಪಾರ್ಹ ಹೇಳಿಕೆಗಳು ಮತ್ತು ಹಾಲಿ ಮುಖ್ಯಮಂತ್ರಿ ಅತಿಶಿ ವಿರುದ್ಧದ ಅವಹೇಳನಕಾರಿ ಹೇಳಿಕೆಗಳು ಇದರ ಭಾಗವಾಗಿವೆ. ಅತಿಶಿ ಅವರ ಅಧಿಕೃತ ನಿವಾಸ ಶೇಷ್ ಮಹಲ್ ಒಳಗೆ ಪ್ರವೇಶಿಸದಂತೆ ತಡೆದ ಬಿಜೆಪಿ ನಾಯಕರು ಈ ವಿಷಯದ ಮೇಲೆಯೇ ದೊಡ್ಡ ಚುನಾವಣಾ ಚರ್ಚೆಯನ್ನು ಹುಟ್ಟುಹಾಕಿ ದಾರಿ ತಪ್ಪಿಸಬೇಕೆಂದು ದಾಳಗಳನ್ನು ಉರುಳಿಸುತ್ತಿದ್ದಾರೆ.

ಕಾಂಗ್ರೆಸ್, ಬಿಜೆಪಿ ತಮ್ಮ ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಘೋಷಿಸಿಲ್ಲ, ಆದರೆ ಎಎಪಿ ಮಾತ್ರ ಕೇಜ್ರಿವಾಲ್ ಅವರನ್ನು ಮರಳಿ ಕರೆತರುವುದಾಗಿ ಘೋಷಿಸಿಕೊಂಡಿದೆ. ಇದಕ್ಕಾಗಿ ಪಂಜಾಬ್ ಮುಖ್ಯಮಂತ್ರಿ ಮಾನ್ ಸೇರಿದಂತೆ 70 ಎಎಪಿ ಶಾಸಕರು ದೆಹಲಿಗೆ ಬಂದು ಪ್ರಚಾರ ನಡೆಸುತ್ತಿದ್ದಾರೆ. ರಾಜಕೀಯ ಸ್ಟಾರ್ಟ್‌ಅಪ್ ನಂತೆ ಎಎಪಿ ಹತ್ತು ವರ್ಷಗಳ ನಂತರ ಹೇಗೆ ತನ್ನ ಸ್ಥಾನವನ್ನು ಕಾಪಾಡಿಕೊಳ್ಳುತ್ತದೆ ಎಂದು ಎಲ್ಲರೂ ಕುತೂಹಲದಿಂದ ನೋಡುತ್ತಿದ್ದಾರೆ. 2027ರಲ್ಲಿ ಪಂಜಾಬ್ ಚುನಾವಣೆ ನಡೆಯುವುದರಿಂದ, ದೆಹಲಿಯನ್ನು ಕಳೆದುಕೊಳ್ಳುವುದು ಅಲ್ಲಿಯೂ ನಷ್ಟವಾಗುತ್ತದೆ ಎಂಬ ಅಂದಾಜಿನಲ್ಲಿ ಎಎಪಿ ಇದೆ. ಸರಣಿ ಆರೋಪಗಳ ನಂತರ ಆ ಪಕ್ಷವು ಕೂಡಾ ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳುತ್ತದೆಯೇ ಇಲ್ಲವೋ ಎಂಬುದು ಮುಖ್ಯವಾದ ವಿಷಯ. ಆಂದೋಲನಗಳು, ಅಸ್ಪಷ್ಟತೆಗಳು, ಆತುರದ ಘೋಷಣೆಗಳು ಒಳಿತನ್ನು ಮಾಡುವುದಿಲ್ಲ ಎಂದು ಸಹ ಈ ಅವಧಿಯಲ್ಲಿ ತಿಳಿದುಹೋಗಿದೆ.

ಎಡ ಪಕ್ಷಗಳು 6ರಲ್ಲಿ ಸ್ಪರ್ಧೆ

ಬಿಜೆಪಿಯ ಏಕಪಕ್ಷೀಯ ದಾಳಿಯಿಂದ ದೆಹಲಿಯ ಸಾಂವಿಧಾನಿಕ ಸ್ಥಾನವನ್ನು ರಕ್ಷಿಸಬೇಕೆಂಬ ದೃಢವಾದ ನಿಲುವನ್ನು ಹೊಂದಿರುವ ಎಡಪಕ್ಷಗಳು, ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ಘೋಷಿಸಿವೆ. ಸಿಪಿಐ(ಎಂ), ಸಿಪಿಐ ಮತ್ತು ಸಿಪಿಐ(ಎಂಎಲ್) ಪಕ್ಷಗಳು ತಲಾ ಎರಡು ಸ್ಥಾನಗಳಲ್ಲಿ ಸ್ಪರ್ಧಿಸುವುದಾಗಿ ಮತ್ತು ಉಳಿದ ಸ್ಥಾನಗಳಲ್ಲಿ ಬಿಜೆಪಿಯನ್ನು ಸೋಲಿಸುವವರಿಗೆ ಬೆಂಬಲಿಸುವುದಾಗಿ ಘೋಷಿಸಿವೆ. ಸಮಾಜವಾದಿ ಪಕ್ಷ ಮತ್ತು ಟಿಎಂಸಿ ಎಎಪಿಯನ್ನು ಬೆಂಬಲಿಸುತ್ತಿವೆ.

ಯೋಜನೆಗಳು ಮತ್ತು ಹೊಸ ಭರವಸೆಗಳು

ಕೇಂದ್ರದ ನಿರಂಕುಶ ದೋರಣೆ, ಅಕ್ರಮ ಪ್ರಕರಣಗಳ ಮೂಲಕ ಅದರ ನಾಯಕರಿಗೆ ಕಿರುಕುಳ ಮತ್ತು ತನ್ನ ಕಲ್ಯಾಣ ಯೋಜನೆಗಳನ್ನು ಪ್ರಚಾರ ನಡೆಸುವುದರ ಜೊತೆಗೆ, ಎಎಪಿ ಹೊಸ ಯೋಜನೆಗಳನ್ನು ಸಹ ಘೋಷಿಸುತ್ತಿದೆ. ಉಚಿತ ವಿದ್ಯುತ್, ನೀರು ಸರಬರಾಜು, ಆರೋಗ್ಯ, ಶಿಕ್ಷಣ, ಮಹಿಳೆಯರ ಬಸ್ ಪ್ರಯಾಣ ಉಚಿತ ಎಂಬುದು ಅವರ ಭರವಸೆಯಾಗಿದೆ. ಇದರ ಜೊತೆಗೆ, ಮುಖ್ಯಮಂತ್ರಿ ಮಹಿಳಾ ಸಮ್ಮಾನ್ ಯೋಜನೆಯಡಿ ಮಹಿಳೆಯರಿಗೆ 2100 ರೂ.ಗಳ ಸಹಾಯಧನ ನೀಡಲಾಗುವುದು ಎಂದು ಹೇಳಿದೆ. ಬಿಜೆಪಿ ಕೂಡ ಉಚಿತ ವಿದ್ಯುತ್ ನಂತಹ ಭರವಸೆಗಳನ್ನು ನೀಡುವ ಮೂಲಕ ತಾವು ಅಧಿಕಾರಕ್ಕೆ ಬಂದರೆ ಈಗಿರುವ ಯೋಜನೆಗಳನ್ನು ರದ್ದುಗೊಳಿಸುತ್ತಾರೆ ಎಂಬ ಎಎಪಿಯ ಹೇಳಿಕೆ ಕೇವಲ ಪ್ರಚಾರ ಎಂದು ನಿರಾಕರಿಸುತ್ತಿದೆ. ದೆಹಲಿ ಪ್ರಚಾರದ ಹೊರೆಯನ್ನು ಹೆಗಲಿಗೆ ಹಾಕಿಕೊಂಡಿರುವ ಪ್ರಧಾನಿ ಮೋದಿ 'ಎಲ್ಲವೂ ಮುಂದುವರಿಯುತ್ತದೆ' ಎಂಬ ಭರವಸೆಯೊಂದಿಗೆ ಪ್ರಚಾರ ನಡೆಸುತ್ತಿದ್ದಾರೆ.

ಕಾಂಗ್ರೆಸ್ 'ಪ್ಯಾರಿ ದೀದಿ ಯೋಜನೆ' ಹೆಸರಿನಲ್ಲಿ ಮಹಿಳೆಯರಿಗೆ 2,500 ರೂ.ಗಳನ್ನು ನೀಡುತ್ತೇವೆ, 'ಜೀವನ ರಕ್ಷಾ ಯೋಜನೆ'ಯಡಿಯಲ್ಲಿ ಪ್ರತಿ ಕುಟುಂಬಕ್ಕೆ 25 ಲಕ್ಷ ರೂ. ಆರೋಗ್ಯ ವಿಮಾ ರಕ್ಷಣೆ ಒದಗಿಸುತ್ತೇವೆ ಎಂದು ಭರವಸೆ ನೀಡಿದೆ. ಈ ರೀತಿಯ ಭರವಸೆಗಳ, ಯೋಜನೆಗಳ ಪೈಪೋಟಿಯಿಂದ ಚುನಾವಣೆ ನಡೆಯುತ್ತಿದೆ. ಬಿಜೆಪಿ ಇವುಗಳೊಂದಿಗೆ, ಬಾಂಗ್ಲಾದೇಶಿ ನಿರಾಶ್ರಿತರು, ರೋಹಿಂಗ್ಯಾಗಳ ಆಗಮನದಂತಹ ವಿಷಯಗಳನ್ನು ಪ್ರಧಾನ ಸಮಸ್ಯೆ ಎಂಬಂತೆ ಧಾರ್ಮಿಕ ಅಂಶಗಳನ್ನು ಮುಂದಕ್ಕೆ ತರುತ್ತಿದೆ. ಬೆಲೆ ಏರಿಕೆ, ನಿರುದ್ಯೋಗದಂತಹ ವಿಷಯಗಳ ಬಗ್ಗೆ, ಹಾಗೆಯೇ ದೇಶದ ರಾಜಧಾನಿಯ ಮೂಲಸೌಕರ್ಯ ಸಮಸ್ಯೆಗಳ ಬಗ್ಗೆ, ದೆಹಲಿಯಲ್ಲಿನ ತೀವ್ರ ಮಾಲಿನ್ಯದ ಬಗ್ಗೆ ಕಡಿಮೆ ಚರ್ಚೆ ನಡೆಯುತ್ತಿರುವುದು ಒಂದು ವಿಚಿತ್ರವಾಗಿದೆ.

ಪ್ರತಿಭಟನೆ ನಡೆಸುವ ಹಕ್ಕನ್ನು ರಕ್ಷಿಸಲು

ಈ ನಡುವೆ ರೈತರ ಹೋರಾಟಗಳನ್ನು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ನೋಡಿದ್ದೇವೆ. ದೆಹಲಿ ರಾಜಧಾನಿಯಾಗಿರುವುದರಿಂದ ಅಲ್ಲಿ ಪ್ರತಿಭಟನೆ ನಡೆಸುವ ಹಕ್ಕನ್ನು ರಕ್ಷಿಸಲು ಕೂಡ ಬಿಜೆಪಿಯನ್ನು ಸೋಲಿಸಲೇಬೇಕು ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ಸ್ವತಃ ಮೋದಿ ಪ್ರಚಾರದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದರ ಜೊತೆಗೆ, ಎಂಟು ತಿಂಗಳಿನಿಂದ ದೆಹಲಿ ಚುನಾವಣೆಗೆ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. "ಎಎಪಿಯನ್ನು ಇನ್ನು ಸಹಿಸುವುದಿಲ್ಲ, ಬದಲಾವಣೆ ತರುತ್ತೇವೆ" ಎಂಬ ಚುನಾವಣಾ ಘೋಷಣೆಯನ್ನು ಅವರು ಎತ್ತಿಕೊಂಡಿದ್ದಾರೆ. ಮತದಾರರ ಪಟ್ಟಿಯಿಂದ ಅಲ್ಪಸಂಖ್ಯಾತರನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಹಾಕಲಾಗಿದೆ ಎಂಬ ಆರೋಪಗಳಿವೆ. ಅದಕ್ಕಾಗಿಯೇ ಚುನಾವಣಾ ಆಯೋಗವು ಅಂತಹ ಆರೋಪಗಳನ್ನು ತಿರಸ್ಕರಿಸಲು ತುಂಬಾ ಹೆಣಗಾಡಿತು. ಇದೆಲ್ಲದರ ನಡುವೆ ದೆಹಲಿ ಮತದಾರರ ತೀರ್ಪು ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

2013ರಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 60 ಇದ್ದಾಗ, ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರು "ನಮ್ಮ ಕರೆನ್ಸಿ ಮರಣಶಯ್ಯೆಯಲ್ಲಿದೆ, ದೆಹಲಿಯ ಆಡಳಿತಗಾರಿಗೆ ರೂಪಾಯಿ ಮೌಲ್ಯ ಕುಸಿತದ ಬಗ್ಗೆ ಕಾಳಜಿ ಇಲ್ಲದಿರುವುದು ದುರದೃಷ್ಟಕರ" ಎಂದು ಯುಪಿಎ ಸರ್ಕಾರವನ್ನು ಟೀಕಿಸಿದ್ದರು. ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅವರು ಟ್ವಿಟರ್‌ನಲ್ಲಿ "ರೂಪಾಯಿ ತನ್ನ ಮೌಲ್ಯ ಕಳೆದುಕೊಂಡಿದೆ, ಪ್ರಧಾನಿ ಕೃಪೆ ಕಳೆದುಕೊಂಡಿದ್ದಾರೆ" ಎಂದು ಬರೆದಿದ್ದರು. "ಮೋದಿ ಅಧಿಕಾರಕ್ಕೆ ಬಂದರೆ ರೂಪಾಯಿ ಮೌಲ್ಯ 40ಕ್ಕೆ ಹೆಚ್ಚಾಗುತ್ತದೆ" ಎಂದು ಶ್ರೀ ರವಿ ಶಂಕರ್ ಗುರೂಜಿ ಅವರು 2014ರಲ್ಲಿ ಟ್ವಿಟ್ ಮಾಡಿದ್ದರು. ಇಂದು ರೂಪಾಯಿ ಮೌಲ್ಯ 86ಕ್ಕೆ ಕುಸಿದು, ದೇಶದ ಆರ್ಥಿಕತೆಯನ್ನು ಮತ್ತು ಜನರ ಬದುಕನ್ನು ಮತ್ತಷ್ಟು ಹಿಂಡುತ್ತಿದೆ.

86 ಕ್ಕೆ ಕುಸಿದ ರೂಪಾಯಿ ಮೌಲ್ಯ
"ನಮ್ಮ ಕರೆನ್ಸಿ ಮರಣಶಯ್ಯೆಯಲ್ಲಿದೆ, ದೇಶ ವಿನಾಶದತ್ತ ಸಾಗುತ್ತಿದೆ" ಎಂದಿದ್ದ ನರೇಂದ್ರ ಮೋದಿ

"ಭಾರತೀಯ ರೂಪಾಯಿ ಬಹಳಷ್ಟು ಸದ್ದು ಮಾಡುತ್ತಿದ್ದ ಸಮಯವಿತ್ತು. ಆದರೆ ಇಂದು ಅದು ತನ್ನ ಧ್ವನಿಯನ್ನು ಕಳೆದುಕೊಂಡಿದೆ. ಅದೇ ರೀತಿ ನಮ್ಮ ಪ್ರಧಾನಿಯ ಧ್ವನಿಯನ್ನು ನಾವು ಕೇಳಲು ಸಾಧ್ಯವಾಗುತ್ತಿಲ್ಲ. ಇಬ್ಬರೂ ಮೂಕರಾಗಿದ್ದಾರೆ. ಇಂದು ನಮ್ಮ ಕರೆನ್ಸಿ ಮರಣಶಯ್ಯೆಯಲ್ಲಿದೆ. ಇದು ಟರ್ಮಿನಲ್ ಹಂತದಲ್ಲಿದೆ ಮತ್ತು ತುರ್ತಾಗಿ ವೈದ್ಯರ ಗಮನ ಬೇಕಿದೆ. ಪ್ರಸ್ತುತ ರೂಪಾಯಿ ಮತ್ತು ಯುಪಿಎ ಸರ್ಕಾರಗಳೆರಡೂ ಮೌಲ್ಯ ಕಳೆದುಕೊಂಡಿವೆ. ನಮ್ಮ ದೇಶವನ್ನು ವಿನಾಶದಿಂದ ತಡೆಯುವ ಸಮಯ ಬಂದಿದೆ. ಕೇಂದ್ರ ಸರ್ಕಾರವು ದೇಶವನ್ನು ದಾರಿ ತಪ್ಪಿಸುತ್ತಿದೆ. ನಮ್ಮ ದೇಶ ಏಕೆ ವಿನಾಶದತ್ತ ಸಾಗುತ್ತಿದೆ ಎಂಬುದನ್ನು ಜನರು ತಿಳಿದುಕೊಳ್ಳಬೇಕು." 2013ರ ಆಗಸ್ಟ್ 23ರಂದು ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರು ಸೌರಾಷ್ಟ್ರದಲ್ಲಿ ನಡೆದ ಸಮಾರಂಭವೊಂದರಲ್ಲಿ ಆಡಿದ ಮಾತುಗಳಿವು. ಇಂದು ರೂಪಾಯಿ ಮೌಲ್ಯ 86.55ಕ್ಕೆ ಕುಸಿದು (ಜನವರಿ, 13, 2024) ಮತ್ತಷ್ಟು ಪಾತಾಳದತ್ತ ಮುಖಮಾಡಿದೆ.

ಇಂದು ರೂಪಾಯಿ ಮೌಲ್ಯ ಕುಸಿತದಿಂದಾಗಿ ದೇಶದ ಆರ್ಥಿಕ ಬಿಕ್ಕಟ್ಟು ಗಂಭೀರವಾಗಿದೆ. 11 ವರ್ಷಗಳ ಹಿಂದಿನ ಮೌಲ್ಯಕ್ಕೆ ಹೋಲಿಸಿದರೆ ಅಮೆರಿಕದ ಡಾಲರ್ ಎದುರು 26 ಪೈಸೆ ಇಳಿಕೆಯಾಗಿದೆ. ಅಂದರೆ ಒಂದು ಡಾಲರ್ ಬದಲು 60 ರೂಪಾಯಿ ಕೊಡುತ್ತಿದ್ದ ನಾವು ಇಂದು 86 ರೂಪಾಯಿ ಕೊಡಬೇಕು! ಇದರಿಂದಾಗಿ ಸರಕುಗಳ ಬೆಲೆ ಏರಿಕೆಯಿಂದ, ಜನರು ತಮ್ಮ ದುಡಿಮೆಯಿಂದ ಗಳಿಸುವ ಗಳಿಕೆಯ ಮೌಲ್ಯದಲ್ಲಿ ಕುಸಿತವಾಗಿದೆ. ಜನರು ಹೈರಾಣಾಗಿದ್ದಾರೆ. ಇವೆಲ್ಲವೂ ಮೋದಿಯವರ ಅಂದಿನ ಮಾತುಗಳನ್ನು ಈಗ ಮತ್ತಷ್ಟು ನಿಜ ಮಾಡಿದೆ.

ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆಯಷ್ಟೆ!

"ಇತರೆ ದೇಶಗಳ ಕರೆನ್ಸಿ ಎದುರು ಭಾರತದ ಕರೆನ್ಸಿ ರೂಪಾಯಿ ತನ್ನ ಮೌಲ್ಯವನ್ನು ಹೆಚ್ಚು ಕಡಿಮೆ ಕಾಪಾಡಿಕೊಂಡಿದೆ, ಅಮೆರಿಕದ ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆಯಷ್ಟೆ. ಇದಕ್ಕೆ ಭಾರತ ಸರ್ಕಾರ ಕಾರಣವಲ್ಲ." ಎಂದು ರೂಪಾಯಿ ಕುಸಿತವನ್ನು ಸಮರ್ಥಿಸಿಕೊಳ್ಳುವವರಿಗೆ 11 ವರ್ಷಗಳ ಹಿಂದೆ ಮೋದಿಯವರೇ ಹೇಳಿದ ಪರಿಹಾರ ಮಾರ್ಗ ಹೀಗಿದೆ ನೋಡಿ:

2014ರ ಫೆಬ್ರವರಿ 28ರಂದು ಕರ್ನಾಟಕದ ಹುಬ್ಬಳ್ಳಿಯಲ್ಲಿ ನಡೆದ ರ್ಯಾಲಿಯೊಂದರಲ್ಲಿ ನರೇಂದ್ರ ಮೋದಿ ಅವರು, "ನಮ್ಮ ದೇಶದ ರೂಪಾಯಿ ಕುಸಿದಿದೆ. ರೂಪಾಯಿ ಮೌಲ್ಯ ನಿರಂತರವಾಗಿ ಕುಸಿಯುತ್ತಿದೆ... ಆಮದುಗಳು ಹೆಚ್ಚುತ್ತಲೇ ಇವೆ, ರಫ್ತು ಕಡಿಮೆಯಾಗುತ್ತಲೇ ಇದೆ. ರಫ್ತುಗಳನ್ನು ಹೆಚ್ಚಿಸುವುದು ಮತ್ತು ಆಮದುಗಳನ್ನು ಕಡಿಮೆ ಮಾಡುವುದು ಒಂದು ಬುದ್ಧಿವಂತ ಸರ್ಕಾರದ ಕೆಲಸ. ಬಿಕ್ಕಟ್ಟು ಬರುತ್ತವೆ, ಆದರೆ ಬಿಕ್ಕಟ್ಟಿನ ಸಮಯದಲ್ಲಿ ನಾಯಕತ್ವವು ದಿಕ್ಕಿಲ್ಲದ, ಅಸಹಾಯಕವಾಗಿದ್ದರೆ, ಬಿಕ್ಕಟ್ಟು ತುಂಬಾ ಗಂಭೀರವಾಗಿ ಮಾರ್ಪಡುತ್ತದೆ. ಅದು ನಮ್ಮ ದೇಶಕ್ಕೆ ಸಂಬಂಧಿಸಿದೆ. ದೆಹಲಿಯ ಆಡಳಿತಗಾರಿಗೆ ದೇಶದ ರಕ್ಷಣೆ ಬಗ್ಗೆಯಾಗಲೀ, ರೂಪಾಯಿ ಮೌಲ್ಯ ಕುಸಿತದ ಬಗ್ಗೆಯಾಗಲೀ ಕಾಳಜಿ ಇಲ್ಲದಿರುವುದು ದುರದೃಷ್ಟಕರ. ರೂಪಾಯಿ ಡಾಲರ್ ಮೌಲ್ಯದ ಎದುರು ಕುಸಿಯುತ್ತಿದ್ದರೂ ಕಳೆದ ಮೂರು ತಿಂಗಳಿಂದ ರೂಪಾಯಿ ಬಲಗೊಳ್ಳಲು ಸರ್ಕಾರ ಏನೂ ಮಾಡುತ್ತಿಲ್ಲ. ಒಮ್ಮೆ ರೂಪಾಯಿ ಕುಸಿಯುತ್ತಲೇ ಹೋದಂತೆ, ವಿಶ್ವ ಶಕ್ತಿಗಳು ಅದರ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತವೆ. ಇದನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ" ಎಂದು ಅಂದಿನ ಮನಮೋಹನ್ ಸಿಂಗ್ ಸರ್ಕಾರವನ್ನು ಕಟುವಾಗಿ ಟೀಕಿಸಿದ್ದರು.

ಮೌಲ್ಯ ಕುಸಿತ ತಡೆಯಲು ಉಪಾಯಗಳಿವೆ. ಆದರೆ,

ನರೇಂದ್ರ ಮೋದಿಯವರ 11 ವರ್ಷಗಳ ಹಿಂದಿನ ಮಾತುಗಳನ್ನು ಗಮನಿಸಿದರೆ, ರೂಪಾಯಿ ಮೌಲ್ಯ ಕುಸಿತ ತಡೆಯಲು ಸರ್ಕಾರದ ಬಳಿ ಹಲವು ಮಾರ್ಗಗಳಿವೆ ಎಂದಾಯಿತು. ಆದರೆ, ಅಂತಹ ಮಾರ್ಗಗಳನ್ನು ಅನುಸರಿಸಲು ಸರ್ಕಾರ ಮುಂದಾಗುತ್ತಿಲ್ಲವೇಕೆ ಎಂಬ ಪ್ರಶ್ನೆ ಮೂಡುತ್ತದೆ. ಅಂತಹ ಮಾರ್ಗಗಳಲ್ಲಿ "ರಫ್ತುಗಳನ್ನು ಹೆಚ್ಚಿಸುವುದು ಮತ್ತು ಆಮದುಗಳನ್ನು ಕಡಿಮೆ ಮಾಡುವುದು ಒಂದು ಬುದ್ಧಿವಂತ ಸರ್ಕಾರದ ಕೆಲಸ" ಎಂಬ ಮೋದಿಯವರ ಅಂದಿನ ಮಾತುಗಳನ್ನು ಇಂದು ಅವರದೇ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲವೇಕೆ? ಯಾವ ಸರಕು ಮತ್ತು ಸೇವೆಗಳು ಅತ್ಯಗತ್ಯವಾಗಿದೆಯೋ ಅಂಥವುಗಳನ್ನು ಹೊರತುಪಡಿಸಿ, ಅನಗತ್ಯ ಸರಕು ಮತ್ತು ಸೇವೆಗಳ ಆಮದಿಗೆ ಕಡಿವಾಣ ಹಾಕಬಹುದಲ್ಲವೇ? ಉದಾಹರಣೆಗೆ, ಶ್ರೀಮಂತರು ಬಳಕೆ ಮಾಡುವ ದುಬಾರಿ ಬೆಲೆಯ ಐಶಾರಾಮಿ ಕಾರುಗಳು ಮತ್ತು ಇತರೆ ಅತಿ ಹೆಚ್ಚು ಇಂಧನ ಬಳಕೆ ಮಾಡುವ ಐಶಾರಾಮಿ ವಾಹನಗಳು, ಐಶಾರಾಮಿ ವಸ್ತುಗಳ ಆಮದುಗಳಿಗೆ ಕಡಿವಾಣ ಹಾಕಿ ಡಾಲರ್ ಬಳಕೆಯನ್ನು ಒಂದಷ್ಟು ಕಡಿಮೆ ಮಾಡಬಹುದಲ್ಲವೇ? ನಮ್ಮ ದೇಶದ ಸರಕು ಮತ್ತು ಸೇವೆಗಳ ರಫ್ತುಗಳನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಬಹುದಲ್ಲವೇ? ಮೋದಿ ಅಂದು ಹೇಳಿದ ಉಪಾಯಗಳಲ್ಲಿ ಇದಲ್ಲದೆ ಬೇರೆ ಏನಿತ್ತೋ ಅದನ್ನು ಇಂದು ಇವರದೇ ಸರ್ಕಾರ ಮಾಡಲು ಮುಂದಾಗುತ್ತಿಲ್ಲವೇಕೆ? ರೂಪಾಯಿ ಡಾಲರ್ ಮೌಲ್ಯದ ಎದುರು ಕುಸಿಯುತ್ತಿದ್ದರೂ ಕಳೆದ 10 ವರ್ಷಗಳಿಂದ ರೂಪಾಯಿ ಬಲಗೊಳ್ಳಲು ಸರ್ಕಾರ ಏನೂ ಮಾಡುತ್ತಿಲ್ಲ ಎಂಬ ಮಾತನ್ನು ನಾವೀಗ ಹೇಳುವಂತಾಗಿದೆ.

ವಿಶ್ವ ಶಕ್ತಿಗಳು ಅದರ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತವೆ

"ಒಮ್ಮೆ ರೂಪಾಯಿ ಕುಸಿಯುತ್ತಲೇ ಹೋದಂತೆ, ವಿಶ್ವ ಶಕ್ತಿಗಳು ಅದರ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುತ್ತವೆ. ಇದನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ" ಎಂಬ ಮೋದಿಯವರ ಅಂದಿನ ಮಾತುಗಳು, ರೂಪಾಯಿ ಮೌಲ್ಯ ಕುಸಿತದಿಂದ ಏನೆಲ್ಲಾ ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ಮೋದಿಯವರಿಗೆ ಅರಿವಿದೆ ಎಂಬುದನ್ನು ಹೇಳುತ್ತವೆ. ಆದರೆ, ಇಷ್ಟೆಲ್ಲಾ ಗೊತ್ತಿದ್ದೂ ಮೋದಿಯವರು ಅಧಿಕಾರಕ್ಕೆ ಬಂದು ರೂಪಾಯಿ ಮೌಲ್ಯ ಬಲಗೊಳಿಸಲು, ಮನಮೋಹನ್ ಸಿಂಗ್ ಸರ್ಕಾರದ ನೀತಿಗಳಿಗೆ ಪರ್ಯಾಯವಾಗಿ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆಗೆ "ಮೋದಿ ಅಥವಾ ಬಿಜೆಪಿ ಬಳಿ ಇದಕ್ಕೆ ಯಾವುದೇ ಪರ್ಯಾಯ ನೀತಿಗಳಿಲ್ಲ" ಎಂಬುದೊಂದೇ ಉತ್ತರವಾಗಿದೆ. ಮೋದಿ ಪ್ರಧಾನಿಯಾದರೆ ರೂಪಾಯಿ ಮೌಲ್ಯದಲ್ಲಿ ಹೆಚ್ಚಳವಾಗುತ್ತದೆ ಎಂದೇ 2014ರ ಚುನಾವಣೆಗೂ ಮುನ್ನ ಬಿಜೆಪಿಯ ಹಲವು ನಾಯಕರು ತಮ್ಮ ಮಾತಿನ ಮೋಡಿಯಿಂದ ಜನರನ್ನು ನಂಬಿಸಿದ್ದರು. ಬಿಜೆಪಿಯ ನಿಜವಾದ ಆರ್ಥಿಕ ನೀತಿಗಳನ್ನು ಅರಿಯದ ಬಹಳಷ್ಟು ಜನರು ಬಿಜೆಪಿ ನಾಯಕರು ಮತ್ತು ಅದರ ಬೆಂಬಲಿಗರ ಮಾತುಗಳನ್ನು ನಿಜವೆಂದೇ ನಂಬಿದ್ದರು.

"ರೂಪಾಯಿ ಮೌಲ್ಯ ಕಳೆದುಕೊಂಡಿದೆ. ಪ್ರಧಾನಿ ಕೃಪೆ ಕಳೆದುಕೊಂಡಿದ್ದಾರೆ" ಸುಷ್ಮಾ ಸ್ವರಾಜ್

2014ರ ಲೋಕಸಭಾ ಚುನಾವಣೆಯಲ್ಲಿ ಗೆದ್ದು, ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಗುರಿ ಮುಟ್ಟುವ ಪ್ರಯತ್ನದಲ್ಲಿ ಬಿಜೆಪಿ, ಅದರ ಮಾತೃ ಸಂಸ್ಥೆ ಆರೆಸ್ಸೆಸ್ ಮತ್ತದರ ಪರಿವಾರ (ಸಂಘಪರಿವಾರ) ಏನೆಲ್ಲಾ ತಂತ್ರಗಾರಿಕೆ ನಡೆಸಿದವು ಎಂಬುದನ್ನು ಮತ್ತೊಮ್ಮೆ ನೆನಪಿಸಿಕೊಳ್ಳೋಣ. ದೇಶದ ಮತದಾರರ ಬೆಂಬಲ ಪಡೆಯಲು ಮನಮೋಹನ್ ಸಿಂಗ್ ನೇತೃತ್ವದ ಯುಪಿಎ-2 ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ದಾಳಿ ಮಾಡುತ್ತಿದ್ದ ಇವರಿಗೆ ಸಿಕ್ಕ ಅಸ್ತ್ರಗಳಲ್ಲಿ ರೂಪಾಯಿ ಮೌಲ್ಯದ ಕುಸಿತ ವಿಷಯವೂ ಒಂದು. ಅಂದು, ಬಿಜೆಪಿ ನಾಯಕರು ರೂಪಾಯಿ ಮೌಲ್ಯ ಕುಸಿತ ಕುರಿತಂತೆ ಏನೆಲ್ಲಾ ಹೇಳಿದ್ದರು ಎಂಬುದಕ್ಕೆ ಒಂದರೆಡು ಉದಾಹರಣೆಗಳು ಇಲ್ಲಿವೆ:

ಪಕ್ಷದ ನಾಯಕಿ ಸುಸ್ಮಾ ಸ್ವರಾಜ್ ಅವರು ಟ್ವಿಟರ್ ನಲ್ಲಿ "ರೂಪಾಯಿ ಮೌಲ್ಯ ಕಳೆದುಕೊಂಡಿದೆ. ಪ್ರಧಾನಿ ಕೃಪೆ ಕಳೆದುಕೊಂಡಿದ್ದಾರೆ" ಎಂದು ಹೇಳಿದ್ದರು.

ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಅವರು 11 ಜುಲೈ 2013ರಂದು "ಯುಪಿಎ ಅಧಿಕಾರಕ್ಕೆ ಬಂದಾಗ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ರಾಹುಲ್ ಗಾಂಧಿಯವರ ವಯಸ್ಸಿಗೆ ಸಮನಾಗಿತ್ತು. ಇಂದು ಅದು ಸೋನಿಯಾ ಗಾಂಧಿ ಅವರ ವಯಸ್ಸಿಗೆ ಸಮಾನವಾಗಿದೆ ಮತ್ತು ಶೀಘ್ರದಲ್ಲೇ ಅದು ಮನಮೋಹನ್ ಸಿಂಗ್ ಅವರ ವಯಸ್ಸನ್ನು ಮುಟ್ಟಲಿದೆ" ಎಂದು ಹೇಳಿದ್ದರು. ಅಂದು ರಾಹುಲ್ ಗಾಂಧಿ ಅವರಿಗೆ 41 ವರ್ಷ, ಸೋನಿಯಾ ಗಾಂಧಿ ಅವರಿಗೆ 67 ವರ್ಷ ಮತ್ತು ಮನಮೋಹನ್ ಸಿಂಗ್ ಅವರಿಗೆ 80 ವರ್ಷ ವಯಸ್ಸಾಗಿತ್ತು.

"ತೀಕ್ಷ್ಣವಾದ ಕುಸಿತದ ನಂತರ US ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ 60.15 ಆಗಿದೆ. ಮೇ ಮತ್ತು ಜುಲೈ 9ರ ನಡುವೆ 53ರಿಂದ 60.15ಕ್ಕೆ ಕುಸಿದಿದೆ. ರಾಷ್ಟ್ರೀಯ ಹೆಮ್ಮೆಯನ್ನು ಗಂಭೀರವಾಗಿ ಘಾಸಿಗೊಳಿಸುವುದರ ಹೊರತಾಗಿ, ಈ ತೀವ್ರ ಕುಸಿತವು ಪ್ರಸ್ತುತ ಯುಪಿಎ ಸರ್ಕಾರದ ಭಾರತೀಯ ಆರ್ಥಿಕತೆಯ ಅಸಮರ್ಪಕ ನಿರ್ವಹಣೆಗೆ ನೇರವಾಗಿ ಸಂಬಂಧಿಸಿದೆ" ಎಂದು ರವಿಶಂಕರ್ ಪ್ರಸಾದ್ ಹೇಳಿದ್ದರು.

ಆದರೆ, ರೂಪಾಯಿ ಕುಸಿತಕ್ಕೆ ಕಾರಣವಾದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳಿಗೆ ಪರ್ಯಾಯವಾಗಿ ತನ್ನ ಬಳಿ ಯಾವ ನೀತಿಗಳಿವೆ ಎಂಬುದನ್ನು ಬಿಜೆಪಿ ನಾಯಕರು ಅಂದು ಹೇಳಲಿಲ್ಲ. ಇಂದೂ ಹೇಳುತ್ತಿಲ್ಲ. ದೇಶದ ಪ್ರಜೆಗಳನ್ನು ಮಾತುಗಳಿಂದಲೇ ಮರುಳುಮಾಡುವ ಕಲೆಯನ್ನು ಸಂಘಪರಿವಾರ ಎಷ್ಟು ಚೆನ್ನಾಗಿ ಕರಗತ ಮಾಡಿಕೊಂಡಿದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

11 ವರ್ಷಗಳಲ್ಲಿ ಶೇ.43ರಷ್ಟು ಕುಸಿದ ರೂಪಾಯಿ ಮೌಲ್ಯ

ಕಳೆದ 11 ವರ್ಷಗಳಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಶೇ.43ರಷ್ಟು ಕುಸಿದಿದೆ. ಹಿಂದೆಂದೂ ರೂಪಾಯಿ ಮೌಲ್ಯ ಇಷ್ಟೊಂದು ಪ್ರಮಾಣದಲ್ಲಿ ಕುಸಿದಿರಲಿಲ್ಲ. ಹಾಗಾಗಿಯೇ ಈ ಬೆಳವಣಿಗೆ ಆರ್ಥಿಕ ತಜ್ಞರಲ್ಲಿ ಸಂಚಲನ ಮೂಡಿಸಿದೆ. ರೂಪಾಯಿ ಮೌಲ್ಯದ ಕುಸಿತವು ತೈಲದಂತಹ ಅಗತ್ಯವಸ್ತುಗಳ ಆಮದು ವೆಚ್ಚವನ್ನು ಹೆಚ್ಚಿಸುತ್ತದೆ. ತತ್ಪರಿಣಾಮವಾಗಿ ಜನರು ಬಳಕೆ ಮಾಡುವ ವಸ್ತುಗಳ ಬೆಲೆಗಳು ಏರುತ್ತವೆ. ಇದು ಜನರ ದಿನನಿತ್ಯದ ಬದುಕಿನ ಮೇಲೆ ಮತ್ತಷ್ಟು ಹೊರೆ ಹೆಚ್ಚಳಕ್ಕೆ ಕಾರಣವಾಗಿದೆ.

ಡಿರಿಜಿಸ್ಟ್ ಅವಧಿಯಲ್ಲಿ (ಅಂದರೆ, ನಿಯಂತ್ರಣ ನೀತಿಗಳ ಅವಧಿಯಲ್ಲಿ) ಸರ್ಕಾರವು ಡಾಲರ್‌ಗೆ ಎದುರಾಗಿ ರೂಪಾಯಿಯ ಬೆಲೆಯನ್ನು (ಮತ್ತು ಸಾಂದರ್ಭಿಕವಾಗಿ ಅದರ ಅಪಮೌಲ್ಯದ ಪ್ರಮಾಣವನ್ನು) ನಿರ್ಧರಿಸುವ ಮೂಲಕ ವಿದೇಶಿ ವಿನಿಮಯವನ್ನು ನಿಯಂತ್ರಿಸುತ್ತಿತ್ತು. ಆ ಮೂಲಕ ಅರ್ಥವ್ಯವಸ್ಥೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಲಾಗಿತ್ತು. ಆದರೆ, ಈ ನಿಯಂತ್ರಣವನ್ನು 1991ರಲ್ಲಿ ಕಳಚಿ ಹಾಕಿದ ನಂತರ ರೂಪಾಯಿಯ ಮೌಲ್ಯವು ಇಳಿಯುತ್ತಲೇ ಬಂದಿದೆ. ನಿಯಂತ್ರಣಗಳನ್ನು ಕಳಚಿಹಾಕಿದ ಸಮಯದಲ್ಲಿ ವಿನಿಮಯ ದರವು ಡಾಲರ್‌ಗೆ 22.74 ರೂಪಾಯಿಗಳ ಮಟ್ಟದಲ್ಲಿತ್ತು. 2014ರಲ್ಲಿ ನರೇಂದ್ರ

ಪುಟ 14 ಕ್ಕೆ



ಈಗ ವಾರಕ್ಕೆ 90 ಗಂಟೆಗಳ ಕೆಲಸದ ಉಪದೇಶ!

ಇದು ಅಮೃತ ಕಾಲ!

"ಇದು ನನ್ನ ದೇಶ, ನಾನು ವಾರಕ್ಕೆ 70 ಗಂಟೆ ಕೆಲಸ ಮಾಡಬಯಸುತ್ತೇನೆ" ಎಂದು ನಮ್ಮ ಯುವಜನ ಹೇಳಬೇಕಾಗಿದೆ, ಏಕೆಂದರೆ ಭಾರತದ ಉತ್ಪಾದಕತೆ ಜಗತ್ತಿನಲ್ಲೇ ಅತಿ ಕಡಿಮೆ" ಎಂದು 2023ರ ಅಕ್ಟೋಬರಿನಲ್ಲಿ ಇನ್‌ಫೋಸಿಸ್‌ನ ಸಂಸ್ಥಾಪಕರಲ್ಲೊಬ್ಬರು ಹೇಳಿದ್ದರು.

"ನಿಜ ಹೇಳಬೇಕೆಂದರೆ, ನೀವು ಭಾನುವಾರ ಕೆಲಸ ಮಾಡುವಂತೆ ಮಾಡಲು ನನಗೆ ಸಾಧ್ಯವಿಲ್ಲ ಎಂಬ ಖೇದ ನನಗಿದೆ. ಏಕೆಂದರೆ ನಾನು ಭಾನುವಾರವೂ ಕೆಲಸ ಮಾಡುತ್ತೇನೆ. ನೀವು ಮನೆಯಲ್ಲಿ ಕುಳಿತು ಏನು ಮಾಡುತ್ತೀರಿ? ನಿಮ್ಮ ಹೆಂಡತಿಯನ್ನು ಎಷ್ಟು ಹೊತ್ತು ದಿಟ್ಟಿಸುತ್ತಿರಲು ಸಾಧ್ಯ? ಹೆಂಡತಿಯರು ಎಷ್ಟರವರೆಗೆ ತಮ್ಮ ಗಂಡಂದಿರನ್ನು ನೋಡುತ್ತಿರಲು ಸಾಧ್ಯ? ಆಫೀಸಿಗೆ ಬನ್ನಿ, ಕೆಲಸ ಮಾಡಿ"–ಹೀಗೆಂದು ಇತ್ತೀಚೆಗೆ ಭಾರತದ ಮತ್ತೊಬ್ಬ ಕಾರ್ಪೊರೇಟ್ ಕುಳ, ಲಾರ್ಸನ್ ಅಂಡ್ ಟುಬ್ರೊ(ಎಲ್ ಅಂಡ್ ಟಿ)ದ ಅಧ್ಯಕ್ಷರು ಹೇಳಿರುವುದಾಗಿ ವರದಿಯಾಗಿದೆ. ನೀವೇಕೆ ಶನಿವಾರವೂ ನೌಕರರನ್ನು ದುಡಿಸಿಕೊಳ್ಳುತ್ತೀರಿ ಎಂಬ ಒಬ್ಬ ನೌಕರನ ಪ್ರಶ್ನೆಗೆ ಉತ್ತರಿಸುತ್ತ ಅವರು ಹೀಗೆ ಹೇಳಿದರಂತೆ.

ಈ ಹೇಳಿಕೆಗೂ, ಈ ಹಿಂದೆ ಇನ್ಫೊಸಿಸ್ ಸಹಸಂಸ್ಥಾಪಕರ ಹೇಳಿಕೆಗೆ ಬಂದಂತೆ ಭಾರೀ ಟೀಕೆಗಳು ಬಂದಿವೆ. ಆದರೂ ನಾರಾಯಣ ಮೂರ್ತಿಯವರು ಇತ್ತೀಚೆಗೂ ತನ್ನ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಎಲ್ ಅಂಡ್ ಟಿ ಕೂಡ ತನ್ನ ಅಧ್ಯಕ್ಷರು ನಮ್ಮ ರಾಷ್ಟ್ರ ಅಸಾಧಾರಣ ಫಲಿತಾಂಶಗಳನ್ನು ಸಾಧಿಸಲು ಅಸಾಧಾರಣ ಪ್ರಯತ್ನಗಳು ಅಗತ್ಯ ಇವೆ ಎಂಬ ಸಂದರ್ಭದಲ್ಲಿ ಈ ಟಿಪ್ಪಣಿಗಳನ್ನು ಮಾಡಿದ್ದಾರೆ ಎಂದು 'ಸ್ಪಷ್ಟೀಕರಣ' ನೀಡಿದೆ.

ಇದರ ಬೆನ್ನಲ್ಲೇ ಕಳೆದ ಹಣಕಾಸು ವರ್ಷದಲ್ಲಿ ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಇಷ್ಟೊಂದು 'ಕಾಳಜಿ' ವ್ಯಕ್ತಪಡಿಸುವ ಈ ಅಧ್ಯಕ್ಷರ ಆದಾಯ 51 ಕೋಟಿ ರೂ. ಇದು ಆ ಕಂಪನಿಯ 59,018 ಕಾರ್ಮಿಕರ ಸರಾಸರಿ ಸಂಬಳದ 535 ಪಟ್ಟು ಎಂಬ ಮಾಹಿತಿ ಬಯಲಿಗೆ ಬಂದಿದೆ! ಇನ್ಫೊಸಿಸ್ ಸಹಸಂಸ್ಥಾಪಕರ 70 ಗಂಟೆಗಳ ಹೇಳಿಕೆಯ ನಂತರವೂ ಇಂತಹ ಮಾಹಿತಿಗಳು ಹೊರಬಂದಿದ್ದವು. ಅತ್ತ ಅವರ 'ಕರೆ' ಬರುತ್ತಿದ್ದರೆ, ಇತ್ತ ಇನ್‌ಫೊಸಿಸ್ ಕೂಡ ಸೇರಿದಂತೆ, ಐಟಿ ಕಂಪನಿಗಳಲ್ಲಿ ಭಾರೀ ಉದ್ಯೋಗ ಕಡಿತಗಳ ಸುದ್ದಿಗಳು ದೇಶದ ಯುವಜನರನ್ನು ಹತಾಶ ಗೊಳಿಸುತ್ತಿದ್ದಾಗಲೇ, ಈ 'ದೇಶಪ್ರೇಮಿ' ಸಹಸಂಸ್ಥಾಪಕರು ತಮ್ಮ 4 ತಿಂಗಳ ಪುಟ್ಟ ಮೊಮ್ಮಗನಿಗೆ 240 ಕೋಟಿ ರೂ. ಮೌಲ್ಯದ ಶೇರುಗಳನ್ನು ನೀಡಿ ಅವರನ್ನು ದೇಶದ ಅತಿ ಚಿಕ್ಕ ವಯಸ್ಸಿನ ಕೋಟ್ಯಾಧಿಪತಿಯಾಗಿ ಮಾಡಿದ್ದಾರೆ ಎಂಬ ಸುದ್ದಿಯೂ ಬಂದಿತ್ತು!

ಕಾರ್ಪೊರೇಟ್ 'ಉದ್ಧಾರಕ'ರ ನಡುವೆ ಧೂರ್ತ ಸ್ಪರ್ಧೆ

ಆದ್ದರಿಂದಲೇ ಮೊದಲು 70 ಗಂಟೆಗಳ ಮತ್ತು ಈಗ 90 ಗಂಟೆಗಳ ಕೆಲಸದ ಈ 'ಉಪದೇಶ'ಗಳನ್ನು ಕೇಳುತ್ತಿದ್ದರೆ, **ವಾಸ್ತವವಾಗಿ ಭಾರತೀಯ ಕಾರ್ಮಿಕರ ರಕ್ತ ಮತ್ತು ಬೆವರನ್ನು ಹಿಂಡಿಹಾಕಲು ಈ ಕಾರ್ಪೊರೇಟ್ 'ಉದ್ಧಾರಕರ' ನಡುವೆ ಒಂದು ಧೂರ್ತ ಸ್ಪರ್ಧೆ ನಡೆದಿರುವಂತೆ ಕಾಣುತ್ತದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಟಿಪ್ಪಣಿ ಮಾಡಿದೆ.** ನಮ್ಮ ಅಮೃತ ಕಾಲದ ಪ್ರಧಾನಿಗಳು ಇವರುಗಳನ್ನು ದೇಶದ ಸಂಪತ್ತಿನ ಸೃಷ್ಟಿಕರ್ತರು ಎಂದು ಹೊಗಳಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

"ಚೀನಾ, ಯುರೋಪ್ ಮತ್ತು ಯುಎಸ್ ನಂತಹ ಹೆಚ್ಚು ಉತ್ಪಾದಕ ದೇಶಗಳಿಗೆ ಹೋಲಿಸಿದರೆ ಭಾರತೀಯ ಕಾರ್ಮಿಕರು, ಔಪಚಾರಿಕ ವಲಯದಲ್ಲಿ ಖಾಯಂ ಉದ್ಯೋಗಗಳಲ್ಲಿ ನಿಯೋಜಿತರಾದವರು ಕೂಡ ಎಷ್ಟೋ ಹೆಚ್ಚು ಗಂಟೆಗಳ ಕೆಲಸ ಮಾಡುತ್ತಿದ್ದಾರೆ. ಕೆಲಸದ ಸಮಯವನ್ನು ವಿಸ್ತರಿಸುವುದು ಭಾರತೀಯ ಕಾರ್ಮಿಕರ ಆರೋಗ್ಯ ಮತ್ತು ಸಾಮಾಜಿಕ ಜೀವನದ ಮೇಲೆ ಬಹಳ ವಿನಾಶಕಾರಿ ಪರಿಣಾಮ ಬೀರುತ್ತದೆ. ಆದಾಗ್ಯೂ, ಈ ರೀತಿಯ ಪೈಶಾಚಿಕ ಕಸರತ್ತುಗಳ ಮೂಲಕ ಕಾರ್ಪೊರೇಟ್ ವರ್ಗವು ಉದ್ಯೋಗಗಳನ್ನು ಕನಿಷ್ಟಮಟ್ಟಕ್ಕೆ ಇಳಿಸುವ ಮತ್ತು ಶ್ರಮ ವೆಚ್ಚವನ್ನು ಮತ್ತಷ್ಟು ಕಡಿಮೆ ಮಾಡುವ ಕ್ರೂರ ಕೆಲಸದ ಪರಿಸ್ಥಿತಿಗಳನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ" ಎಂದು ಟೀಕಿಸಿರುವ ಸಿಐಟಿಯು, ಇದೆಲ್ಲಾ ದಕ್ಷತೆ ಮತ್ತು ಉತ್ಪಾದಕತೆಯ ನೆಪದಲ್ಲಿ ಹೆಚ್ಚಿನ ಲಾಭ ಪೇರಿಸಿಕೊಳ್ಳಲು ಕಾರ್ಮಿಕರನ್ನು ಹೆಚ್ಚು ತೀವ್ರವಾದ ಶೋಷಣೆಗೆ ಗುರಿಪಡಿಸಲು ಅನುಕೂಲ ಮಾಡಿಕೊಳ್ಳುವುದಕ್ಕಾಗಿ ಮತ್ತು ವೆಚ್ಚ ಕಡಿತಕ್ಕಾಗಿ ಮಾಡುತ್ತಿರುವ ಪ್ರಯತ್ನಗಳು ಎಂದು ವರ್ಣಿಸಿದೆ.


ಸಂಬಳದ ಪಾಲಿನಲ್ಲಿ ಇಳಿಕೆ –ಲಾಭದ ಪಾಲಿನಲ್ಲಿ ಏರಿಕೆ!

"ಅಪರಾಧ ಬ್ಯೂರೋದ ದಾಖಲೆಗಳ ಪ್ರಕಾರ 2022ರಲ್ಲಿ 11,486 ಆತ್ಮಹತ್ಯೆಗಳಿಗೆ ಇದು ಕಾರಣವಾಗಿದೆ. **ಕಾರ್ಮಿಕರಿಂದ ಎಷ್ಟೊಂದು ಅಮಾನವೀಯವಾಗಿ ಶ್ರಮವನ್ನು ಹೊರತೆಗೆಯಲಾಗಿದೆ ಎಂಬುದನ್ನು ನಿವ್ವಳ ಮೌಲ್ಯ ಸೇರ್ಪಡೆಯಲ್ಲಿ ವೇತನದ ಪಾಲು 1990–91ರಲ್ಲಿ ಶೇ.27.64 ಇದ್ದದ್ದು, 2022–23ರಲ್ಲಿ ಶೇ. 15.94ಕ್ಕೆ ತೀವ್ರವಾಗಿ ಇಳಿದಿದೆ ಮತ್ತು ಅದೇ ಅವಧಿಯಲ್ಲಿ ನಿವ್ವಳ ಲಾಭದ ಪಾಲು ಶೇ. 19.06ರಿಂದ ಶೇ. 51.92ಕ್ಕೆ ಏರಿದೆ ಎಂದು ಕೈಗಾರಿಕಾ ವಾರ್ಷಿಕ ಸಮೀಕ್ಷೆ ವರದಿಯ ಅಂಕಿ–ಅಂಶಗಳಲ್ಲಿ ಕಾಣಬಹುದು"** ಎಂದಿರುವ ಸಿಐಟಿಯು ಇದರ ಜೊತೆಗೆ ನಿರುದ್ಯೋಗವನ್ನೂ ಅದು ಉಲ್ಬಣಗೊಳಿಸಿದೆ ಎಂದು ಹೇಳಿದೆ.

ಬಂಡವಾಳಶಾಹಿ ವರ್ಗದ ಇಂತಹ ಹೊಲಸು ಸ್ಪರ್ಧೆಗಳ ದುರಹಂಕಾರಗಳ ವಿರುದ್ಧ ಕಾರ್ಮಿಕ ವರ್ಗದ ಎಲ್ಲ ವಿಭಾಗಗಳು ಸಿಡಿದೇಳಬೇಕು ಮತ್ತು ಒಗ್ಗಟ್ಟಿನಿಂದ ಇವನ್ನು ಖಂಡಿಸಬೇಕು, ಶ್ರಮಿಕರ ಹಕ್ಕುಗಳು ಮತ್ತು ಸಾಮಾಜಿಕ ಬದುಕಿನ ಮೇಲೆ ಇಂತಹ ಪೈಶಾಚಿಕ ದಾಳಿಗಳ ಪಿತೂರಿಗಳ ವಿರುದ್ಧ ಮುಂಬರುವ ದಿನಗಳಲ್ಲಿ ಕೆಲಸದ ಸ್ಥಳದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಐಕ್ಯ ಪ್ರತಿರೋಧ ಮತ್ತು ಹೋರಾಟದ ಕ್ರಮಗಳಿಗೆ ದೇಶಾದ್ಯಂತ ಸಿದ್ಧರಾಗಬೇಕು ಎಂದು ಸಿಐಟಿಯು ಕರೆ ನೀಡಿದೆ.

ಕಾರ್ಮಿಕರನ್ನು ಹಿಂಡುವಲ್ಲಿ ಸರಕಾರದ ಶಾಮೀಲು

ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳು ಒಂದರ ನಂತರ ಒಂದರಂತೆ ಕೆಲಸದ ಅವಧಿಯನ್ನು ಹೆಚ್ಚಿಸಲು ಇಂತಹ ಹತಾಶ ಮತ್ತು ಹೊಲಸು ಸ್ಪರ್ಧೆಗಿಳಿಯುವ ಪ್ರಯತ್ನವನ್ನು ನಡೆಸುತ್ತಿರುವುದು ಕೇಂದ್ರದಲ್ಲಿರುವ ತಮಗೆ ವಿಧೇಯವಾದ ಸರ್ಕಾರದ ಶಾಮೀಲಿನ ಪಿತೂರಿಯಿಂದಾಗಿ ಎಂದು ಸಿಐಟಿಯು ಮುಂದುವರೆದು ಹೇಳಿದೆ. ಕಾರ್ಮಿಕ ಸಂಹಿತೆಗಳು ಈಗಾಗಲೇ ಸರ್ಕಾರಗಳು ಆದೇಶ ಹೊರಡಿಸಿ ಕೆಲಸದ ಸಮಯವನ್ನು ಹೆಚ್ಚಿಸಲು ಅವಕಾಶವನ್ನು ಮಾಡಿಕೊಟ್ಟಿವೆ. ಈ ಕಾರ್ಮಿಕ ಸಂಹಿತೆಗಳು ಕಾರ್ಮಿಕ ಸಂಘಗಳ ಚಳುವಳಿಯ ಪ್ರತಿರೋಧದಿಂದಾಗಿ ಇನ್ನೂ ಅಧಿಸೂಚಿತವಾಗಿರದಿದ್ದರೂ, ಬಿಜೆಪಿ ಆಳ್ವಿಕೆಯ ರಾಜ್ಯ ಸರ್ಕಾರಗಳು ಮತ್ತು ಕೆಲವು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಸಹ ಕೆಲಸದ ಸಮಯವನ್ನು ದಿನಕ್ಕೆ 12 ಗಂಟೆಗಳಿಗೆ ಹೆಚ್ಚಿಸಲು ಹಲವಾರು ಪ್ರಯತ್ನಗಳನ್ನು / ಕ್ರಮಗಳನ್ನು ಕೈಗೊಂಡಿರುವುದನ್ನು ನಾವು ನೋಡಿದ್ದೇವೆ, ಇದನ್ನು ಕೂಡ ಅನೇಕ ರಾಜ್ಯಗಳಲ್ಲಿ ಐಕ್ಯ ಕಾರ್ಮಿಕ ಆಂದೋಲನ ವಿರೋಧಿಸುತ್ತಿದೆ ಎಂಬ ಸಂಗತಿಯತ್ತವೂ ಸಿಐಟಿಯು ಗಮನ ಸೆಳೆದಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್‌ಬುಕ್


ಕರ್ನಾಟಕದಲ್ಲಿಯೂ ಇಂತಹ ಒಂದು ಪ್ರಯತ್ನ ನಡೆದಿದೆ. ಕೆಲಸದ ಅವಧಿಯನ್ನು 10ರಿಂದ 14ಕ್ಕೆ ಏರಿಸಲು ಸರಕಾರ ನಿರ್ಧರಿಸಿತು. ಆದರೆ ಕರ್ನಾಟಕ ಐಟಿ & ಈಟಿಇಎಸ್ ನೌಕರರ ಸಂಘ(ಕೆಐಟಿಯು)ದ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯಿಂದಾಗಿ ಅದು ಜಾರಿಗೆ ಬರುವುದು ಸಾಧ್ಯವಾಗಿಲ್ಲ.

ಮಾಲಕ ವರ್ಗದ ಈ ಹೊಲಸು ದಾಳಿಗಳನ್ನು, ಕಾರ್ಮಿಕ ವರ್ಗ ಕೆಲಸದ ಅವಧಿಯನ್ನು ಇಳಿಸಬೇಕು ಎಂಬ ಪ್ರತಿದಾಳಿಯೊಂದಿಗೆ ಎದುರಿಸಬೇಕು, ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ (ಡಬ್ಲ್ಯುಎಫ್‌ಟಿಯು) ಆಗ್ರಹಿಸಿರುವಂತೆ ದಿನಕ್ಕೆ 7 ಗಂಟೆಗಳ ಮತ್ತು ವಾರಕ್ಕೆ 5 ದಿನಗಳ ಕೆಲಸದ ಆಗ್ರಹವನ್ನು ಎತ್ತಬೇಕು ಎಂದು ಸಿಐಟಿಯು ಹೇಳಿದೆ.


ದುಡಿದು ಕರಕಲಾಗುವ ಸೂತ್ರ –ಅಭಿವೃದ್ಧಿ ಸಾಧಿಸುವುದಕ್ಕಲ್ಲ

ಒಬ್ಬ ಗಂಡಸು/ಹೆಂಗಸು ವಾರದಲ್ಲಿ 90 ಗಂಟೆ ದುಡಿಮೆ ಮಾಡಲು ಸಾಧ್ಯವೇ? ಇಲ್ಲ ಎನ್ನುತ್ತಾರೆ ಹಲವು ಆರೋಗ್ಯ ತಜ್ಞರು. ವಾರದಲ್ಲಿ 55 ಗಂಟೆಗಳಿಗಿಂತ ಹೆಚ್ಚಿನ ದುಡಿಮೆ ಹೃದಯಾಘಾತದ ಅಪಾಯವನ್ನು ಶೇ. 35ರಷ್ಟು ಹೆಚ್ಚಿಸುತ್ತದೆ, ಹೃದಯಬೇನೆಗಳಿಂದ ಸಾಯುವ ಅಪಾಯವನ್ನು ಶೇ. 17ರಷ್ಟು ಹೆಚ್ಚಿಸುತ್ತದೆ ಎಂದು ಒಂದು ವಿಶ್ವ ಆರೋಗ್ಯ ಸಂಘಟನೆ(ಡಬ್ಲ್ಯುಹೆಚ್‌ಒ) ಅಧ್ಯಯನ ಹೇಳಿರುವುದಾಗಿ ವರದಿಯಾಗಿದೆ. 2021ರ

ಪುಟ 14 ನೋಡಿ



ಇನ್‌ಫೋಸಿಸ್ –ಊಟದ ವಿರಾಮ ಇಲ್ಲ
ಎಲ್ ಅಂಡ್ ಟಿ –ಊಟ ಮತ್ತು ಶೌಚ ವಿರಾಮಿಲ್ಲ
ವ್ಯಂಗ್ಯಚಿತ್ರ: ಪೊನ್ನಪ್ಪ, ಎಕ್ಸ್



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್




ದಿಟ್ಟಿಸುತ್ತಿರಲಾದರೂ ಸಮಯ ಎಲ್ಲಿದೆ ! ನಾನು ಎಲ್ ಅಂಡ್ ಟಿಗೆ ಕೆಲಸ ಮಾಡುತ್ತಿದ್ದೇನೆ...ನನ್ನ ಹೆಂಡತಿ ಇನ್‌ಫೋಸಿಸ್ ಗೆ!
ವ್ಯಂಗ್ಯಚಿತ್ರ: ನಲ ಪೊನ್ನಪ್ಪ, ಎಕ್ಸ್



ಸಮಾನತೆಯನ್ನು ನಿರಾಕರಿಸುವ 'ಜಿಡಿಪಿ–ರಾಷ್ಟ್ರೀಯವಾದ'

ನವ–ಉದಾರವಾದಿ 'ಸುಧಾರಣೆ'ಗಳಿಗೆ ಬಹುಪಾಲು ಕಾರಣಕರ್ತರಾದ ಮಾಜಿ ಪ್ರಧಾನಿ, ಡಾ ಮನಮೋಹನ್ ಸಿಂಗ್‌ರವರ ನಿಧನದ ಸಂದರ್ಭದಲ್ಲಿ ಅವರ ಅಸಾಧಾರಣ ವೈಯಕ್ತಿಕ ಗುಣಸ್ವಭಾವಗಳನ್ನು ಬಳಸಿಕೊಂಡು ನವ–ಉದಾರವಾದೀ ವ್ಯವಸ್ಥೆಯು ಸ್ವೀಕಾರಾರ್ಹ ಎಂದು ಉತ್ತೇಜಿಸುವ ಒಂದು ಪ್ರವೃತ್ತಿಯು ಕಂಡುಬರುತ್ತಿದೆ. ಈ ಪ್ರವೃತ್ತಿಯು, ನವ ಉದಾರವಾದ ಮತ್ತು ಫ್ಯಾಸಿಸ್ಟ್ ತೆರನ ಶಕ್ತಿಗಳ ರಾಜಕೀಯ ಉಚ್ಛ್ರಾಯದ ನಡುವಿನ ಕೊಂಡಿಯಿಂದಾಗಿ ಸ್ವಲ್ಪಮಟ್ಟಿನ ಯಶಸ್ಸನ್ನು ಪಡೆಯುವ ಸಾಧ್ಯತೆಯಿದೆ ಎಂಬುದನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತಿಲ್ಲ. ಡಾ.ಸಿಂಗ್ ಪರಿಚಯಿಸಿದ ನವ–ಉದಾರವಾದಿ 'ಸುಧಾರಣೆ'ಗಳಿಗೆ, ಆಧಾರವಾಗಿರುವ "ಜಿಡಿಪಿ–ರಾಷ್ಟ್ರೀಯವಾದ"ದ ತತ್ವಸಿದ್ಧಾಂತವು, ಅದರ ಮೊದಲಿದ್ದ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯವಾದವನ್ನು ದುರ್ಬಲಗೊಳಿಸುವ ಮೂಲಕ ಫ್ಯಾಸಿಸ್ಟ್ ತೆರನ "ರಾಷ್ಟ್ರೀಯವಾದ"ದ ಉತ್ಥಾನಕ್ಕೆ ಆಧಾರವನ್ನು ಸೃಷ್ಟಿಸಿದೆ. ಆದ್ದರಿಂದ ಫ್ಯಾಸಿಸ್ಟ್ ತೆರನ ಶಕ್ತಿಗಳ ಪ್ರಾಬಲ್ಯವನ್ನು ಮುರಿಯಬೇಕಾದರೆ ನವ ಉದಾರವಾದವನ್ನು ಮೀರಿ ಹೋಗಬೇಕಾಗುತ್ತದೆ, ಮಾತ್ರವಲ್ಲದೆ, ಜಿಡಿಪಿ–ರಾಷ್ಟ್ರೀಯವಾದವು ಪಲ್ಲಟಗೊಳಿಸಿದ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯವಾದವನ್ನು ಪುನರುಜ್ಜೀವನಗೊಳಿಸಬೇಕಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**





ಉದಾರ ನಿಲುವು ಹೊಂದಿರುವವರು "ರಾಷ್ಟ್ರೀಯವಾದ"ವನ್ನು ವಿರೋಧಿಸುತ್ತಾರೆ. "ರಾಷ್ಟ್ರೀಯವಾದ" ಎಂಬುದನ್ನು ಇತರ ದೇಶಗಳೊಂದಿಗೆ ಸ್ನೇಹಭಾವ ಮತ್ತು ಹೊಂದಾಣಿಕೆ ಬಯಸದ ಮತ್ತು ಪ್ರತಿಸ್ಪರ್ಧಿ ಮನೋಭಾವದ ಅರ್ಥವನ್ನಷ್ಟೇ ಹೊಂದಿರುವ ಒಂದು ಪದ ಎಂದು ಇವರು ಪರಿಗಣಿಸುತ್ತಾರೆ. ಆದರೆ ಇದು ಸಂಪೂರ್ಣವಾಗಿ ತಪ್ಪಾದ ದೃಷ್ಟಿಕೋನ. ಏಕೆಂದರೆ, ಮೂರನೇ ಜಗತ್ತಿನ ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದವು, ವೆಸ್ಟ್‌ಫ್ಯಾಲಿಯ (ಜರ್ಮನಿಯ ಒಂದು ಪ್ರದೇಶ) ಶಾಂತಿ ಒಪ್ಪಂದಗಳ ನಂತರ ಯುರೋಪಿನಲ್ಲಿ ಹದಿನೇಳನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ರಾಷ್ಟ್ರೀಯವಾದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಈ ವ್ಯತ್ಯಾಸವು, ಯುರೋಪಿಯನ್ ರಾಷ್ಟ್ರೀಯವಾದದಿಂದ ಒಡಮೂಡಿದ ಹಿಟ್ಲರನ ರಾಷ್ಟ್ರೀಯವಾದ ಮತ್ತು ವಸಾಹತುಶಾಹಿ–ವಿರೋಧಿ ಹೋರಾಟದ ಸಂದರ್ಭದಲ್ಲಿ ಮೂರನೇ ಜಗತ್ತಿನ ದೇಶಗಳಲ್ಲಿ ರೂಪುಗೊಂಡ ರಾಷ್ಟ್ರೀಯವಾದ (ಉದಾಹರಣೆಗೆ, ವಿಯಟ್‌ನಾಮಿನ ಹೋ ಚಿ ಮಿನ್ಹ್ ರೂಪಿಸಿದ ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದ) ಇವುಗಳ ನಡುವೆ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ.

ಹದಿನೇಳನೇ ಶತಮಾನದಲ್ಲಿ ರೂಪುಗೊಂಡ ಯುರೋಪಿಯನ್ ರಾಷ್ಟ್ರೀಯವಾದ ಮತ್ತು ಮೂರನೇ ಜಗತ್ತಿನ ದೇಶಗಳ ಇಪ್ಪತ್ತನೇ ಶತಮಾನದ ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದ ಇವುಗಳ ನಡುವೆ ಕನಿಷ್ಠ ಮೂರು ಮೂಲಭೂತ ವ್ಯತ್ಯಾಸಗಳಿವೆ: ಮೊದಲನೆಯದು, ಯುರೋಪಿಯನ್ ರಾಷ್ಟ್ರೀಯವಾದ ರಾಷ್ಟ್ರದೊಳಗೆ ಒಂದು "ಆಂತರಿಕ ಶತ್ರು"ವನ್ನು ಸಾಮಾನ್ಯವಾಗಿ ಗುರುತಿಸುತ್ತದೆ. ಉದಾಹರಣೆಗೆ ಉತ್ತರ ಯುರೋಪಿನಲ್ಲಿ ಕ್ಯಾಥೋಲಿಕರನ್ನು, ದಕ್ಷಿಣ ಯುರೋಪಿನಲ್ಲಿ ಪ್ರೊಟೆಸ್ಟಂಟರನ್ನು ಮತ್ತು ಸಾಮಾನ್ಯವಾಗಿ ಎಲ್ಲೆಡೆಯೂ ಯಹೂದಿಗಳನ್ನು "ಆಂತರಿಕ ಶತ್ರು" ಎಂದು ಗುರುತಿಸಲಾಗಿತ್ತು. ತದ್ವಿರುದ್ಧವಾಗಿ ಮೂರನೇ ಜಗತ್ತಿನ ರಾಷ್ಟ್ರೀಯವಾದವು ಎಲ್ಲರನ್ನೂ ಒಳಗೊಳ್ಳುವಂತದ್ದಾಗಿತ್ತು. ಈ ಒಳಗೊಳ್ಳುವಿಕೆಯು ವಸಾಹತುಶಾಹಿ ಯಜಮಾನರ ಅಗಾಧ ಶಕ್ತಿಯನ್ನು ಎದುರಿಸುವ ಸಲುವಾಗಿ ಇರಲೇಬೇಕಿದ್ದ ಒಂದು ಅವಶ್ಯಕತೆಯಾಗಿತ್ತು. ಎರಡನೆಯದು, ಯುರೋಪಿಯನ್ ರಾಷ್ಟ್ರೀಯವಾದವು ಜನರನ್ನು ತ್ಯಾಗ ಮಾಡಬೇಕಾಗಿದ್ದ ಒಂದು ಘಟಕವಾಗಿ ಮಾತ್ರ ಕಂಡಿತು ಮತ್ತು ರಾಷ್ಟ್ರವನ್ನು ಜನರಿಂದ ಬಲು ಎತ್ತರದಲ್ಲಿ ಕಂಡು (ಅಂದರೆ, ದೈವದ ಮಟ್ಟಕ್ಕೆ ಸಮೀಕರಿಸಿ) ಅದನ್ನು ಒಂದು ಉನ್ನತ ಮಟ್ಟದಲ್ಲಿ ಇರಿಸಿತು. ತದ್ವಿರುದ್ಧವಾಗಿ ಮೂರನೇ ಜಗತ್ತಿನ ರಾಷ್ಟ್ರೀಯವಾದವು ವಸಾಹತುಶಾಹಿಯಿಂದ ನೂರಾರು ವರ್ಷಗಳ ಕಾಲ ತುಳಿತಕ್ಕೊಳಗಾದ ಜನರನ್ನು ಮೇಲೆತ್ತುವ ಗುರಿಯನ್ನು ಹೊಂದಿತ್ತು. ಮೂರನೆಯದು, ಯುರೋಪಿಯನ್ ರಾಷ್ಟ್ರೀಯವಾದದಲ್ಲಿ ಅದು ರೂಪಗೊಂಡ ಸಮಯದಿಂದಲೂ ಸಾಮ್ರಾಜ್ಯಶಾಹಿ ಗುಣ–ಲಕ್ಷಣಗಳು ಅಡಕವಾಗಿದ್ದವು. ವೆಸ್ಟ್‌ಫ್ಯಾಲಿಯ ಶಾಂತಿ ಒಪ್ಪಂದಗಳು ಏರ್ಪಟ್ಟ ನಂತರದ ಕೆಲವೇ ಕೆಲವು ತಿಂಗಳುಗಳಲ್ಲಿ ಐರ್ಲೆಂಡ್ ಮೇಲೆ ಆಲಿವರ್ ಕ್ರೋಮ್‌ವೆಲ್ ಸಾಧಿಸಿದ ವಿಜಯವು ಎಲ್ಲ ಯುರೋಪಿಯನ್ ದೇಶಗಳೂ ಹೊಂದಿದ್ದ ಸಾಮ್ರಾಜ್ಯಶಾಹಿ ಬಯಕೆಯ ಒಂದು ಆರಂಭವಾಗಿತ್ತು. ಈ ಯೋಜನೆಯು "ರಾಷ್ಟ್ರೀಯವಾದ"ದ ನಿರ್ದಿಷ್ಟ ಪರಿಕಲ್ಪನೆಯಿಂದ ಪೋಷಣೆ ಪಡೆದಿತ್ತು. ಇದಕ್ಕೆ ತದ್ವಿರುದ್ಧವಾಗಿ ವಸಾಹತುಶಾಹಿ–ವಿರೋಧಿ ಮೂರನೆಯ ಜಗತ್ತಿನ ರಾಷ್ಟ್ರೀಯವಾದವು, ಪ್ರಾದೇಶಿಕ ಗುಣ–ಲಕ್ಷಣಗಳನ್ನು ಹೊಂದಿದ್ದರೂ, ಸಾಮ್ರಾಜ್ಯಶಾಹಿ ಗುಣ–ಲಕ್ಷಣಗಳನ್ನು ಹೊಂದಿರಲಿಲ್ಲ ಮತ್ತು ಅದಕ್ಕೆ ಬದಲಾಗಿ ತನ್ನದೇ ರೀತಿಯ ವಸಾಹತುಶಾಹಿ–ವಿರೋಧಿ ಹೋರಾಟಗಳಲ್ಲಿ ತೊಡಗಿದ ಮೂರನೆಯ ಜಗತ್ತಿನ ಇತರ ದೇಶಗಳೊಂದಿಗೆ ಸೋದರ ಸಂಬಂಧಗಳನ್ನು ಬೆಳೆಸುವ ಬಯಕೆಯನ್ನು ಹೊಂದಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯುರೋಪಿನ ರಾಷ್ಟ್ರೀಯವಾದದ ಹೆಗ್ಗುರುತು ಎಂದರೆ, ಜನರಿಗಿಂತ ಎತ್ತರದ ದೈವದ ಮಟ್ಟದಲ್ಲಿರಿಸಿದ "ರಾಷ್ಟ್ರ" ಎಂಬ ಒಂದು ಅಮೂರ್ತ ಆದರ್ಶಪ್ರಾಯ ಅಲೌಕಿಕ ಪರಿಕಲ್ಪನೆ. ಆದರೆ, ವಸಾಹತುಶಾಹಿ–ವಿರೋಧಿ ಮೂರನೇ ಜಗತ್ತಿನ ರಾಷ್ಟ್ರೀಯವಾದವು ಮೂಲಭೂತವಾಗಿ ಅಲೌಕಿಕವಾದುದಲ್ಲ. ಜನರ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸುವ ಇದನ್ನು ಮಾರ್ಕ್ಸ್ "ಈ–ಮುಖಿ" (this-sided) ಎಂದು ಕರೆಯುತ್ತಿದ್ದರು.

ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದದಿಂದ 'ಜಿಡಿಪಿ ರಾಷ್ಟ್ರೀಯವಾದ'ದತ್ತ ಪಲ್ಲಟ

ವಸಾಹತೋತ್ತರದ ಪ್ರಭುತ್ವವು, ಅದರ ಇತರ ವೈಫಲ್ಯಗಳು ಏನೇ ಇರಲಿ, ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದದ ಪರಿಕಲ್ಪನೆಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು. ಉದಾಹರಣೆಗೆ, ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದವನ್ನು ಆಧರಿಸಿದ ಭಾರತದ ಸಂವಿಧಾನದ ಮೂಲಭೂತ ಲಕ್ಷಣಗಳು ಅದರ ಪೀಠಿಕೆಯಲ್ಲೇ ಅಡಕವಾಗಿವೆ. ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಾಜವಾದ, ಈ ಎಲ್ಲವುಗಳಿಗೂ ಬದ್ಧವಾದ ಒಂದು ರಾಷ್ಟ್ರದ ಪರಿಕಲ್ಪನೆಯು ವಸಾಹತುಶಾಹಿ–ವಿರೋಧಿ ಹೋರಾಟದಲ್ಲಿ ಅಂತರ್ಗತವಾಗಿತ್ತು. ಅಂತೆಯೇ, ಪರವಾನಗಿ ವ್ಯವಸ್ಥೆಯ ಮೂಲಕ ಖಾಸಗಿ ವಲಯದ ಮೇಲಿನ ನಿಯಂತ್ರಣ, ಮಿಶ್ರ ಅರ್ಥವ್ಯವಸ್ಥೆಯ ಚೌಕಟ್ಟಿನೊಳಗೇ ಸಾರ್ವಜನಿಕ ವಲಯಕ್ಕೆ ತೋರಿದ ಪ್ರಾಮುಖ್ಯತೆ ಮತ್ತು ಸಮಾನ ಅವಕಾಶಗಳನ್ನು ಒದಗಿಸುವ ಒಂದು ಸಾಧಾರಣ ಬದ್ಧತೆಯನ್ನು ತೋರಿಸಿದೆ. ಹಾಗೆ ನೋಡಿದರೆ ಇವು ಯಾವುವೂ ಸಮಾಜವಾದದ ಘೋಷಣೆಯಿಂದ ಹುಟ್ಟಿಕೊಂಡ, ಒಂದು ಸಮಾಜವಾದಿ ಯೋಜನೆಯತ್ತ ಸಾಗುವುದಕ್ಕಾಗಿ ಎಂದೇನೂ ಅಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಭಾರತದ ನಿಯಂತ್ರಣ ನೀತಿಗಳ ಆಳ್ವಿಕೆಯು (dirigisme) ಸಮಾಜವಾದದ ಬಗ್ಗೆ ಹೊಂದಿದ್ದ ಬದ್ಧತೆಯನ್ನು ತೋರ್ಪಡಿಸಿತು ಮತ್ತು ಇದು ವಸಾಹತುಶಾಹಿ–ವಿರೋಧಿ ರಾಷ್ಟ್ರೀಯವಾದದ ಪರಿಕಲ್ಪನೆಯೊಂದಿಗೆ ಒಂದು ಜೀವಂತ ಸಂಬಂಧವನ್ನೂ ಹೊಂದಿತ್ತು.

ನವ–ಉದಾರವಾದಿ ವ್ಯವಸ್ಥೆಯು ಜಾರಿಗೆ ಬಂದ ನಂತರ ಭಾರತದ ಪ್ರಭುತ್ವವು ಪ್ರತಿಪಾದಿಸುವ ರಾಷ್ಟ್ರೀಯವಾದದ ಪರಿಕಲ್ಪನೆಯಲ್ಲಿ ಒಂದು ನಿರ್ಣಾಯಕ ಪಲ್ಲಟ ಸಂಭವಿಸಿದೆ. ನವ ಉದಾರವಾದಿ ನೀತಿಗಳನ್ನು ಪರಿಚಯಿಸುವಾಗ ಅವು "ರಾಷ್ಟ್ರ" ಹಿತದಲ್ಲಿವೆ ಎಂದು ಹೇಳಲಾಗಿತ್ತು. ಜಿಡಿಪಿಯು ಹೆಚ್ಚು ಕ್ಷಿಪ್ರವಾಗಿ ಬೆಳೆಯುತ್ತದೆ ಮತ್ತು ಅದರ ಪ್ರಯೋಜನಗಳು ಎಲ್ಲರಿಗೂ "ಜಿನುಗುತ್ತವೆ" ಮತ್ತು ಅದು ಭಾರತವನ್ನು ಒಂದು ಪ್ರಮುಖ ಶಕ್ತಿಯನ್ನಾಗಿ ಮಾಡುತ್ತದೆ ಎಂಬುದು ಅದರ ಸಮರ್ಥನೆಯಾಗಿತ್ತು. ನವ ಉದಾರವಾದಿ ಆಳ್ವಿಕೆಯು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತದೆ ಎಂಬ ಅಂಶವನ್ನು ನಿರಾಕರಿಸಲಾಗಿಲ್ಲ. ತದ್ವಿರುದ್ಧವಾದುದನ್ನು ನವ ಉದಾರವಾದದ ಅತ್ಯಂತ ಕಟ್ಟಾ ಬೆಂಬಲಿಗರು ಸಹ ಯಾವುದೇ ಸಮಯದಲ್ಲಿ ಹೇಳಿಕೊಂಡಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದವನ್ನು, ಅದು ಸ್ವಾತಂತ್ರ್ಯ ಹೋರಾಟಗಾರರ ಕನಸಿನ ರಾಷ್ಟ್ರವನ್ನು ನಿರ್ಮಿಸುವಲ್ಲಿ ಒಂದು ಉತ್ತಮ ಸಾಧನವಾಗಿದೆ ಎಂಬ ನೆಲೆಯಲ್ಲಿ ಪರಿಚಯಿಸಲಿಲ್ಲ. ಭಾರತ ರಾಷ್ಟ್ರವನ್ನು ಒಂದು ದೊಡ್ಡ ಶಕ್ತಿಯನ್ನಾಗಿ ಮಾಡುತ್ತದೆ ಎಂಬ ಭರವಸೆಯ ಆಧಾರದ ಮೇಲೆ ನವ ಉದಾರವಾದವನ್ನು ಸಮರ್ಥಿಸಲಾಗುತ್ತಿದೆ. ಈ ರೀತಿಯಲ್ಲಿ ಜನರಿಗೆ ಸಮತ್ವದಿಂದ ಸೇವೆ ಸಲ್ಲಿಸುವ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರದ ಪರಿಕಲ್ಪನೆಯು ತಾನು ಒಂದು ದೊಡ್ಡ ಶಕ್ತಿಯಾಗಲು ಇತರ ರಾಷ್ಟ್ರಗಳೊಂದಿಗೆ ಸ್ಪರ್ಧೆಯಲ್ಲಿ ತೊಡಗುವ ಒಂದು ರಾಷ್ಟ್ರವೆಂಬುದಾಗಿ ಪಲ್ಲಟಗೊಂಡಿದೆ.

ಈ ಪಲ್ಲಟವು ಜನರ ಜೀವನದ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಒಂದು ನಿಜ ಮತ್ತು ಮೂರ್ತ ಸ್ವರೂಪವನ್ನು ರಾಷ್ಟ್ರದ ಪರಿಕಲ್ಪನೆಯ "ಈ–ಮುಖಿ"ವನ್ನು ತ್ಯಜಿಸಿ, ಒಂದು ಅಮೂರ್ತ, ಅಲೌಕಿಕ ಸ್ವರೂಪದ, ಜನರಿಗಿಂತ ಮೇಲಿರುವ ಮತ್ತು ಜನರಿಂದ ತ್ಯಾಗವನ್ನು ಬಯಸುವೊಂದು ದೊಡ್ಡ ಶಕ್ತಿ ರಾಷ್ಟ್ರವಾಗಿ ಬದಲಾಗಿದೆ ಎಂಬುದನ್ನು ಸೂಚಿಸುತ್ತದೆ. ರಾಷ್ಟ್ರದ ಈ ಬದಲಾದ ಪರಿಕಲ್ಪನೆಯು ಯುರೋಪಿಯನ್ ರಾಷ್ಟ್ರದ ಪರಿಕಲ್ಪನೆಯನ್ನು ನೆನಪಿಸುತ್ತದೆಯಾದರೂ, ಅದೇ ಅಲ್ಲ ಎಂಬುದನ್ನು ಮುಂದೆ ನೋಡೋಣ.

ಫ್ಯಾಸಿಸ್ಟ್ ತೆರನ ರಾಷ್ಟ್ರೀಯವಾದಕ್ಕೆ ಸೇತುವೆ

ಸಂಕ್ಷಿಪ್ತವಾಗಿ ಹೇಳುವುದಾದರೆ, ನಿಯಂತ್ರಣ ನೀತಿಗಳ ಆಳ್ವಿಕೆಯು ಏನನ್ನು ಸಾಧಿಸಲು ಹೊರಟಿತ್ತೊ ಅದಕ್ಕಿಂತ ಹೆಚ್ಚಿನದನ್ನು ನವ ಉದಾರವಾದವು ಸಾಧಿಸುತ್ತದೆ ಎಂಬ ನಿರೀಕ್ಷೆ ಇರಲಿಲ್ಲ. ಒಂದು ರೀತಿಯ ಆಳ್ವಿಕೆಯಿಂದ ಇನ್ನೊಂದು ರೀತಿಯ ಆಳ್ವಿಕೆಗೆ ಬದಲಾಗುವಲ್ಲಿ, ಯಾವುದು ಅಪೇಕ್ಷಣೀಯ ಎಂಬುದರಲ್ಲೇ ಬದಲಾವಣೆಯಾಗಿತ್ತು. ಇದಕ್ಕನುಗುಣವಾಗಿ ರಾಷ್ಟ್ರದ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆಯೂ ಬದಲಾಯಿತು. ಈ ಬದಲಾವಣೆಯನ್ನು ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯವಾದದಿಂದ "ಜಿಡಿಪಿ–ರಾಷ್ಟ್ರೀಯವಾದ"ಕ್ಕೆ ಬದಲಾವಣೆ ಎಂದು ಕರೆಯಬಹುದು. ಖಚಿತವಾಗಿ ಹೇಳುವುದಾದರೆ, ಅಂತಹ "ಜಿಡಿಪಿ–ರಾಷ್ಟ್ರೀಯವಾದ"ವು, ರಾಷ್ಟ್ರವನ್ನು ಇತರ ರಾಷ್ಟ್ರಗಳ ವಿರುದ್ಧ ಸ್ಪರ್ಧಾತ್ಮಕ ಓಟದಲ್ಲಿ ತೊಡಗಿಸಿಕೊಂಡಿರುವಂತದ್ದಾಗಿ ನೋಡುತ್ತದೆಯಾದರೂ, ಈ ರಾಷ್ಟ್ರೀಯವಾದವು ಯುರೋಪಿನಲ್ಲಿದ್ದ ರಾಷ್ಟ್ರೀಯವಾದದಂತೆ ಸಾಮ್ರಾಜ್ಯ ವಾದಿಯಲ್ಲ ಅಥವಾ, "ಜಿಡಿಪಿ–ರಾಷ್ಟ್ರೀಯವಾದ"ವು ತನ್ನ ಹದಿನೇಳನೇ ಶತಮಾನದ ಯುರೋಪಿಯನ್ ರಾಷ್ಟ್ರೀಯವಾದವು ಮಾಡಿದ ರೀತಿಯಲ್ಲಿ ಒಂದು "ಆಂತರಿಕ ಶತ್ರು"ವನ್ನು ಆವಾಹಿಸಲೇ ಬೇಕೆಂದಿಲ್ಲ. ಜಿಡಿಪಿ–ರಾಷ್ಟ್ರೀಯವಾದದ ಅನುಯಾಯಿಗಳು ಜಾತ್ಯಾತೀತತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವ ಜನರೇನೂ ಅಲ್ಲ. ಆದರೆ, "ಜಿಡಿಪಿ–ರಾಷ್ಟ್ರೀಯವಾದ"ವು ರಾಷ್ಟ್ರದ ಬಗ್ಗೆ ಒಂದು ಅಲೌಕಿಕ ಪರಿಕಲ್ಪನೆಯನ್ನು ಪುನಃ ಪರಿಚಯಿಸುವ ಕಾರಣದಿಂದಾಗಿ ಅದು ಫ್ಯಾಸಿಸ್ಟ್ ತೆರನ ರಾಷ್ಟ್ರೀಯವಾದದ ಪರಿಕಲ್ಪನೆಗಳಿಗೆ ಒಂದು ಸೇತುವೆಯಾಗಿ ಕೆಲಸ ಮಾಡುತ್ತದೆ.

ಎರಡು ಕಾರಣಗಳಿಂದಾಗಿ ಇದು ಸಂಭವಿಸುತ್ತದೆ: ಮೊದಲನೆಯದು,

ಪುಟ 14 ನೋಡಿ

ದ.ಕ.ಜಿಲ್ಲೆಯ ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳ ಜಂಟಿ ವೇದಿಕೆಯಿಂದ...... ಪುಟ 9 ರಿಂದ

ಭಾಷಣಗಳು, ಕೋಮುವಾದಿ ಗೂಂಡಾಗಿರಿಗಳಿಗೂ ಈ ಅವಧಿಯಲ್ಲಿ ಅವಕಾಶ ಒದಗಿಸಲಾಗಿದೆ. ಪುನೀತ್ ಕೆರೆಹಳ್ಳಿ ಎಂಬ ಅಪಾಯಕಾರಿ ಕೋಮು ಕ್ರಿಮಿನಲ್‌ನನ್ನು ಮಂಗಳೂರಿಗೆ ಕರೆಸಿ ಸನ್ಮಾನ ನಡೆಸಿದಾಗಲೂ ಈ ಪೊಲೀಸ್ ಕಮೀಷನರ್ ಮೌನಕ್ಕೆ ಜಾರಿದ್ದರು.

ಇಷ್ಟು ಮಾತ್ರವಲ್ಲದೆ, ಮಂಗಳೂರು ಕಮಿಷನರೇಟ್ ವ್ಯಾಪ್ತಿಯನ್ನು ಕಮೀಷನರ್ ಸಾಹೇಬರು ಗ್ಯಾಂಬ್ಲಿಂಗ್ ಸಿಟಿ ಮಾಡಿ ಬಿಟ್ಟಿದ್ದಾರೆ. ಯಾವತ್ತೂ ಇಲ್ಲದಷ್ಟು ದಂಧೆಗಳು ಮಂಗಳೂರು ನಗರದಲ್ಲಿ ಹಾಡು ಹಗಲೇ ವಿಜೃಂಭಿಸುತ್ತಿದೆ. ಅಕ್ರಮ ಮರಳು ದಂಧೆಯ ಟಿಪ್ಪರ್‌ಗಳು ನೂರಾರು ಸಂಖ್ಯೆಯಲ್ಲಿ ಓಡಾಡುತ್ತಿವೆ. ನಂಬರ್ ಪ್ಲೇಟ್ ಇಲ್ಲದೆಯೂ ಪೊಲೀಸರ ಸಮ್ಮುಖ ಈ ಟಿಪ್ಪರ್‌ಗಳು ಅಕ್ರಮ ಮರಳು ಸಾಗಾಟ ನಡೆಸುತ್ತಿವೆ. ಜೀವನದಿಗಳನ್ನು ನಾಶಮಾಡುತ್ತಿವೆ. ಅನೈತಿಕ ಚಟುವಟಿಕೆಗಳ ಮಸಾಜ್ ಪಾರ್ಲರ್, ವೇಶ್ಯಾವಾಟಿಕೆ, ಜುಗಾರಿ, ಬೆಟ್ಟಿಂಗ್ ಮಾಫಿಯಾಗಳಿಗೆ ಈಗ ಮಂಗಳೂರು ಸ್ವರ್ಗ ಆಗಿಬಿಟ್ಟಿದೆ. ದಿನಕ್ಕೊಂದು ದಂಧೆಗಳು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗ ಆಗುತ್ತಲೇ ಇದೆ. ಸರಕಾರದ ಗೌರವಕ್ಕೆ ಕುಂದುಂಟಾಗುತ್ತಲೆ ಇದೆ. ಈ ಕುರಿತು ಹಲವು ಹೋರಾಟಗಳು ನಡೆದರೂ ಕಮೀಷನರ್ ಅನುಪಮ್ ಅಗ್ರವಾಲ್ "ನಾನಿರೋದೆ ಹೀಗೆ" ಎಂದು ನಿರ್ಲಜ್ಜತೆ ಪ್ರದರ್ಶಿಸುತ್ತಿದ್ದಾರೆ.

ಕಮೀಷನರ್ ಅಗ್ರವಾಲ್ ನಡೆಗಳು ಮಂಗಳೂರಿನ ಪ್ರತಿಷ್ಟೆಗೆ ಅಪಾರ ಹಾನಿ ಉಂಟುಮಾಡಿದೆ. ನಿಮ್ಮ ಸರಕಾರದ ಘೋಷಿತ ನೀತಿಗೆ ತದ್ವಿರುದ್ದವಾಗಿ ಪೊಲೀಸ್ ಇಲಾಖೆಯನ್ನು ಇವರು ಮುನ್ನಡೆಸುತ್ತಿದ್ದಾರೆ. ನಿಮ್ಮ ಮೇಲೆ ಅಪಾರ ನಂಬಿಕೆ, ಗೌರವ ಇಟ್ಟುಕೊಂಡಿದ್ದ, ಬಿಜೆಪಿ ಹಾಗೂ ಕೋಮುವಾದಿ ಪರಿವಾರದ ವಿರುದ್ದದ ಹೋರಾಟದಲ್ಲಿ ಜೊತೆಗಿದ್ದ ಚಳವಳಿಗಳು, ಜನಪರರು ಈ ಸರಕಾರದ ಕುರಿತು ಭ್ರಮನಿರಸನ ಹೊಂದುವಂತೆ ಮಾಡಿದ್ದಾರೆ. ಇದೆಲ್ಲದರಿಂದ ಜನ ಸಾಮಾನ್ಯರಲ್ಲೂ ಸರಕಾರದ ವಿರುದ್ಧ ಅಭಿಪ್ರಾಯ ರೂಪಣೆ ದಟ್ಟಗೊಳ್ಳುತ್ತಿದೆ. ನಿಮ್ಮದೇ ಪಕ್ಷದ ತಳಮಟ್ಟದ ಕಾರ್ಯಕರ್ತರಲ್ಲೂ ಅಸಮಾಧಾನ ಹೆಚ್ಚುತ್ತಿದೆ ಎಂಬುದನ್ನೂ ತಾವು ಗಮನಿಸಬೇಕು.

ಸರ್ವಾಧಿಕಾರಿ, ಕೋಮುವಾದಿ ಮನಸ್ಥಿತಿಯ, ಭ್ರಷ್ಟ ಆಡಳಿತದಿಂದ ಕುಖ್ಯಾತ ಆಗಿರುವ ಈ ಪೊಲೀಸ್ ಕಮೀಷನರ್ ರನ್ನು ವರ್ಗಾಯಿಸಬೇಕು, ಆರೋಪಗಳ ಕುರಿತು ತನಿಖೆ ನಡೆಸಬೇಕು ಎಂದು ನಾವೆಲ್ಲ ಜೊತೆಗೂಡಿ ಕಳೆದ ಎರಡು ತಿಂಗಳಿನಿಂದ "ದಕ್ಷಿಣ ಕನ್ನಡ ಜಿಲ್ಲಾ ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳ ಜಂಟಿ ವೇದಿಕೆ"ಯಿಂದ ಸತತ ಹೋರಾಟ ನಡೆಸುತ್ತಿದ್ದೇವೆ. ಇದೆಲ್ಲಾ ಖಂಡಿತಾ ನಿಮಗೆ ತಿಳಿದಿರುತ್ತದೆ. ಆದರೆ, ಯಾವುದೆ ಕ್ರಮಗಳು ಜರುಗದಿರುವುದು ನಿಜಕ್ಕೂ ಅಚ್ಚರಿಯ ಸಂಗತಿ. ಸರಕಾರಕ್ಕೆ ತೀರಾ ಕೆಟ್ಟ ಹೆಸರು ತರುತ್ತಿರುವ ಅಧಿಕಾರಿಯನ್ನು ರಕ್ಷಿಸಿ, ಬೆಂಬಲಿಸಿ ನಿಮ್ಮ ಸರಕಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜವಾಬ್ದಾರಿ ಹೊಂದಿದ ನಾಯಕರು ಏನನ್ನು ಸಾಧಿಸಲು ಹೊರಟಿದ್ದಾರೆ ಎಂಬುದು ನಮಗೆ ಅರ್ಥ ಆಗುತ್ತಿಲ್ಲ. ಈ ಎಲ್ಲಾ ಹಿನ್ನಲೆಯಲ್ಲಿ ಬಹಿರಂಗ ಪತ್ರವನ್ನು ಜಂಟಿ ವೇದಿಕೆಯ ಮೂಲಕ ತಮಗೆ ಬರೆಯುತ್ತಿದ್ದೇವೆ. ಒಂದು ವಾರದ ಅವಧಿಯಲ್ಲಿ ಎರಡನೆ ಭಾರಿಗೆ ಮಂಗಳೂರಿಗೆ ಆಗಮಿಸುತ್ತಿರುವ ತಾವು ಮೇಲಿನ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಜನವಿರೋಧಿ ಪೊಲೀಸ್ ಕಮೀಷನರ್ ಅನುಪಮ್ ಅಗ್ರವಾಲ್ ವಿರುದ್ಧ ಕ್ರಮಗಳನ್ನು ಜರುಗಿಸುತ್ತೀರಿ, ಕಮೀಷನರ್ ಮೇಲಿನ ಕ್ರಮಕ್ಕೆ ಒತ್ತಾಯಿಸಿ ಮತ್ತಷ್ಟು ಹೋರಾಟಗಳನ್ನು ನಡೆಸುವ ಅನಿವಾರ್ಯತೆ ಸೃಷ್ಟಿಸಲಾರಿರಿ ಎಂದು ನಂಬುತ್ತೇವೆ.

–ಮುನೀರ್ ಕಾಟಿಪಳ್ಳ

90 ಗಂಟೆಗಳ ಕೆಲಸದ ಉಪದೇಶ.... ಪುಟ 12 ರಿಂದ

ಡಬ್ಲ್ಯುಹೆಚ್‌ಒ ಮತ್ತು ಐಎಲ್‌ಒ ಅಧ್ಯಯನ ಕೂಡ ಇದೇ ತೀರ್ಮಾನಕ್ಕೆ ಬಂದಿದೆ. (ಇಂಡಿಯನ್ ಎಕ್ಸ್‌ಪ್ರೆಸ್, ಜನವರಿ 10).

ಭಾರತದ ದುಡಿಮೆಗಾರರ ಉತ್ಪಾದಕತೆ ಅತ್ಯಂತ ಕಡಿಮೆ ಎಂಬ ಇನ್‌ಫೋಸಿಸ್ ಸಹಸಂಸ್ಥಾಪಕರ ನಂಬಿಕೆಯೂ ಪ್ರಶ್ನಾರ್ಹ. ಉತ್ಪಾದಕತೆ ಕೇವಲ ಕೆಲಸದ ಅವಧಿಯನ್ನು ಅವಲಂಬಿಸಿರುವುದಿಲ್ಲ, ಅದು ಉತ್ಪಾದನಾ ಸಾಧನಗಳನ್ನೂ ಅವಲಂಬಿಸಿದೆ ಎಂದು ಅವರಿಗೆ ತಿಳಿದಿರದ ಸಂಗತಿಯೇನಲ್ಲ.

ಪುರುಷ ಪ್ರಾಬಲ್ಯದ ಪಾಳೇಗಾರೀ ಮನ:ಸ್ಥಿತಿ ಬಯಲು

ಎಲ್ ಅಂಡ್ ಟಿ ಅಧ್ಯಕ್ಷರ ಹೇಳಿಕೆ ಅವರ ಕಾರ್ಪೊರೇಟ್ ಸ್ವಾರ್ಥದ ಜೊತೆಗೆ ಗಂಡಸರು ಹೊರಗೆ ದುಡಿಯುವವರು, ಹೆಂಗಸರು ಮನೆಗೆ ಸೀಮಿತವಾಗಿ ಆರೈಕೆ ಮಾಡುವವರು ಎಂಬ ಈಗ ನಗೆಪಾಟಲಾಗಿರುವ ಮನ:ಸ್ಥಿತಿಯನ್ನು ಕೂಡ ಬಯಲಿಗೆ ತಂದಿದೆ ಎಂಬ ಟೀಕೆಗಳೂ ಹಲವೆಡೆಗಳಿಂದ ಬಂದಿದೆ.

"ಹೆಂಡಂದಿರು ಮನೆಯಲ್ಲಿ ಕೂತು ತಮ್ಮನ್ನು ದಿಟ್ಟಿಸಿ ನೋಡಬೇಕು ಎಂದು ಕಾಯುತ್ತಿರುತ್ತಾರೆಯೇ? ಪೂರ್ಣಕಾಲದ ಉದ್ಯೋಗವಿರುವ ಮಹಿಳೆಯರು ಈಗಾಗಲೇ ವಾರಕ್ಕೆ 90 ಗಂಟೆಗಳ ಕೆಲಸ ಮಾಡುತ್ತಿದ್ದಾರೆ" ಎಂದು ಅಂಬೇಡ್ಕರ್ ವಿವಿಯ ಪ್ರಾಧ್ಯಾಪಕಿ ಡಾ.ದೀಪಾ ಸಿನ್ಹ ಪ್ರತಿಕ್ರಿಯಿಸಿದ್ದಾರೆ.

ಮಹಿಳೆಯರು, ಅದರಲ್ಲೂ ಭಾರತದಂತಹ ದೇಶಗಳಲ್ಲಿ ಮಹಿಳೆಯರು ಪುರುಷರಿಗಿಂತ ನಾಲ್ಕು ಪಟ್ಟು ಹೆಚ್ಚು ಸಂಬಳವಿಲ್ಲದ ದುಡಿಮೆ ಮಾಡುತ್ತಾರೆ ಎಂದು 2018ರ ಐಎಲ್‌ಒ ವರದಿ ಹೇಳಿದೆ (ದಿ ವೈರ್, ಜ.13).

ದೇಶದ ಬಗ್ಗೆ ನಿಜವಾಗಿ ಕಾಳಜಿಯಿದ್ದರೆ ಇವರು ಶನಿವಾರ ಮತ್ತು ಭಾನುವಾರವಾದರೂ ಮನೆಗೆಲಸಗಳಲ್ಲಿ ಸಹಕರಿಸಿ ಎಂದು ತಮ್ಮ ಪುರುಷ ನೌಕರರಿಗೆ ಹೇಳಬೇಕಾಗಿತ್ತು!

ಕಚೇರಿಗಳಲ್ಲಿ, ಕಾರ್ಖಾನೆಗಳಲ್ಲಿ ಗಂಡಸರು ಮಾತ್ರವಲ್ಲ, ಹೆಂಗಸರೂ ದುಡಿಯುತ್ತಿದ್ದಾರೆ. ಕಚೇರಿಯಲ್ಲಿ/ಕಾರ್ಖಾನೆಯಲ್ಲಿ ಕೆಲಸ ಮಾಡದಿದ್ದರೆ, ಅವರು ಮನೆಯಲ್ಲಿ ಪರಸ್ಪರ ದಿಟ್ಟಿಸುತ್ತ ಸುಮ್ಮನೆ ಕೂತಿರುತ್ತಾರೆ ಎಂದಲ್ಲ ಎಂದು ಈತನಿಗೆ ತಿಳಿದಿರಬೇಕಾಗಿತ್ತು ಎಂದು ಇನ್ನು ಕೆಲವರು ಟೀಕಿಸಿದ್ದಾರೆ.

ಒಟ್ಟಿನಲ್ಲಿ ಈ ಕಾರ್ಪೊರೇಟ್ ಮಂದಿಯ ಹೇಳಿಕೆಗಳು ಅಚ್ಛೇದಿನ್/ಅಮೃತಕಾಲದ ಈ ಅವಧಿ ಸೃಷ್ಟಿಸಿರುವ 'ನಯೀ ಭಾರತ್" ಎಂತಹ ಸ್ಥಿತಿಯನ್ನು ತಲುಪುತ್ತಿದೆ ಎಂಬುದನ್ನು ಬಿಂಬಿಸುತ್ತಿರುವಂತಿದೆ.

86 ಕ್ಕೆ ಕುಸಿದ ರೂಪಾಯಿ ಮೌಲ್ಯ....... ಪುಟ 11 ರಿಂದ

ಮೋದಿ ಅಧಿಕಾರಕ್ಕೆ ಬಂದ ಸಮಯದಲ್ಲಿ 62.33 ಗಳಷ್ಟಿದ್ದದ್ದು ಈಗ 86.5 ರ ಮಟ್ಟವನ್ನು(ಜನವರಿ 13, 2024) ದಾಟಿದೆ.

"ರೂಪಾಯಿ ಮೌಲ್ಯ ಕುಸಿತದ ಪ್ರಾಥಮಿಕ ಕಾರಣವೆಂದರೆ ಭಾರತದ ಶ್ರೀಮಂತರು ತಮ್ಮ ಸಂಪತ್ತನ್ನು ಭಾರತೀಯ ರೂಪಾಯಿಗಿಂತ ಹೆಚ್ಚಾಗಿ ಅಮೆರಿಕ ಡಾಲರ್ ರೂಪದಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ. ಇದು ರೂಪಾಯಿಯಿಂದ ಡಾಲರ್ ಕರೆನ್ಸಿಗೆ ಹೊರಳುವ ಒಂದು ನಿರಂತರ ಬದಲಾವಣೆಗೆ ಕಾರಣವಾಗುತ್ತದೆ. ಇದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗುತ್ತದೆ" ಎನ್ನುತ್ತಾ ಕುಸಿತಕ್ಕೆ ಮತ್ತೊಂದು ಕಾರಣ ನಿಡುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್ ಅವರು.

LPG ನೀತಿಗಳನ್ನೇ ಅಳವಡಿಸಿಕೊಂಡಿರುವ, ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲೂಟಿಒ) ನೀಡುವ ಉಪದೇಶಗಳನ್ನು ನಿಷ್ಟೆಯಿಂದ ಪಾಲಿಸುವ ಬಿಜೆಪಿ, ತನ್ನ ಆಡಳಿತದಲ್ಲಿ ರೂಪಾಯಿಯನ್ನು ಬಲಗೊಳಿಸುತ್ತದೆ ಎಂದು ನಂಬಲಾಗದು. ಪೆಟ್ರೋಲ್, ಡೀಸಲ್, ಅಡುಗೆ ಅನಿಲ, ತೈಲ ಇವುಗಳ ಬೆಲೆ ಹೆಚ್ಚಳಕ್ಕೆ ರೂಪಾಯಿ ಮೌಲ್ಯದಲ್ಲಿನ ಕುಸಿತವೂ ಒಂದು ಕಾರಣ. ಇದರ ಜೊತೆಗೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳ, ತೈಲ ಕಂಪನಿಗಳ ಲಾಭದ ದುರಾಸೆ, ಕೇಂದ್ರ ಸರ್ಕಾರದ ಖಾಸಗೀಕರಣ ನೀತಿಗಳು ಮತ್ತು ಇತರೆ ಕಾರಣಗಳು ಬೆಲೆ ಹೆಚ್ಚಳಕ್ಕೆ ಕಾರಣ ಎಂಬುದನ್ನು ಹೇಳಲೇಬೇಕಿದೆ. ರೂಪಾಯಿ ಮೌಲ್ಯ ಕುಸಿದರೆ ಬೆಲೆ ಏರಿಕೆ ಖಚಿತ. ಇದರಿಂದಾಗಿ ತರಕಾರಿ, ಉಪ್ಪು, ಬೇಳೆಕಾಳು, ಎಣ್ಣೆ, ಮನೆಯಲ್ಲಿ ಬಳಸುವ ಎಲ್ಲ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚುತ್ತಿದೆ. ಒಟ್ಟಾರೆಯಾಗಿ ರೂಪಾಯಿ ಕುಸಿತದಿಂದ ತೀವ್ರ ನಷ್ಟ ಅನುಭವಿಸುತ್ತಿರುವವರು ಬಡವರು, ಮಧ್ಯಮ ವರ್ಗದವರು, ಜನಸಾಮಾನ್ಯರು.

ಇದರಿಂದ ಪಾರಾಗಲು ಇರುವ ಮಾರ್ಗವೆಂದರೆ

ಸರ್ಕಾರಗಳು ಉದ್ಯೋಗ ಸೃಷ್ಟಿ ಮತ್ತು ಮೂಲಸೌಕರ್ಯಗಳತ್ತ ಗಮನಹರಿಸಬೇಕು. ಇದರೊಂದಿಗೆ ಉತ್ಪಾದನೆ ಮತ್ತು ರಫ್ತು ಹೆಚ್ಚಳದಿಂದ ವಿದೇಶಿ ವಿನಿಮಯ ಗಳಿಸಬಹುದು ಮತ್ತು ರೂಪಾಯಿಯನ್ನು ಸ್ಥಿರಗೊಳಿಸಬಹುದು. ಮೂಲಸೌಕರ್ಯಗಳನ್ನು ನಿರ್ಮಿಸುವ ಮತ್ತು ಕಾನೂನು, ಸುವ್ಯವಸ್ಥೆಯನ್ನು ಸುಧಾರಿಸುವ ಮೂಲಕ ವಿದೇಶಿ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಬೇಕು. ದೇಶೀಯ ಎಲೆಕ್ಟ್ರಾನಿಕ್ಸ್ ಕಂಪನಿಗಳನ್ನು ಸ್ಥಾಪಿಸುವುದು, ಅಸ್ತಿತ್ವದಲ್ಲಿರುವ ಸಾಮರ್ಥ್ಯವನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸಿ, ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಬೇಕು. ಆಮದುಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಇಂಧನ ಅಗತ್ಯಗಳಿಗಾಗಿ ಹೆಚ್ಚಿನ ಉತ್ಪಾದನೆಯನ್ನು ಸಾಧಿಸಲು ದೇಶೀಯ ಕಂಪನಿಗಳನ್ನು ಪ್ರೋತ್ಸಾಹಿಸಬೇಕು. ಪರ್ಯಾಯ ಇಂಧನ ಮೂಲಗಳ ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ ಸ್ವಾವಲಂಬನೆಯನ್ನು ಸಾಧಿಸುವುದು ಸಾಧ್ಯ. ದೇಶೀಯ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿಮೆ ಮಾಡುವ ಮೂಲಕ ರಫ್ತಿಗೆ ಅನುಕೂಲ ಮಾಡಿಕೊಡಬೇಕು. ಇದಕ್ಕಾಗಿ, ಭಾರತ ಸರ್ಕಾರದ ನವ ಉದಾರವಾದಿ ನೀತಿಗಳ ವಿರುದ್ಧ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ವಿರುದ್ಧ, ಸಿರಿವಂತರ ಪರವಾದ ಮತ್ತು ಜನವಿರೋಧಿ ನೀತಿಗಳ ವಿರುದ್ಧ ಜನರು ಧ್ವನಿ ಎತ್ತಿ ಹೋರಾಡುವ ಅವಶ್ಯಕತೆಯಿದೆ.

–ಸಿಜಿ

ಮಾನವತೆಯನ್ನು ನಿರಾಕರಿಸುವ 'ಜಿಡಿಪಿ-ರಾಷ್ಟ್ರೀಯವಾದ'.......... ಪುಟ 13 ರಿಂದ

ನಾವು ಈಗಾಗಲೇ ನೋಡಿರುವಂತೆ, "ಜಿಡಿಪಿ-ರಾಷ್ಟ್ರೀಯವಾದ"ವು ಸಮಾನ ಪೌರತ್ವ ಹಕ್ಕುಗಳು ಮತ್ತು ಹೆಚ್ಚಿನ ಲೌಕಿಕ ಸಮಾನತೆಯಿರುವ ಒಂದು ಸಮತ್ವದ ಸಮಾಜದತ್ತ ಮುನ್ನಡೆಯುವ ಬಯಕೆಯನ್ನು ನಿರಾಕರಿಸುತ್ತದೆ, ಸಮತ್ವದ ಸಮಾಜದ ಸ್ಥಳದಲ್ಲಿ ಅಸಮಾನತೆಯ ಸಮಾಜವನ್ನು ಇರಿಸುತ್ತದೆ ಮತ್ತು ಅದರ ಅಸಮಾನತೆಗಳು ಬಲಾಢ್ಯ ದೇಶ ಎಂಬ ಸ್ಥಾನಮಾನದಂತಹ ಕೆಲವು "ಉನ್ನತ" ಅಲೌಕಿಕ ಗುರಿಯನ್ನು ಸಾಧಿಸುತ್ತವೆ ಎಂದು ಭಾವಿಸಲಾಗುತ್ತದೆ. ಎರಡನೆಯದು, ನವ ಉದಾರವಾದಿ ವ್ಯವಸ್ಥೆಯು ಬಿಕ್ಕಟ್ಟಿನಲ್ಲಿ ಸಿಲುಕುತ್ತ ಹೋದಂತೆ, ಪ್ರಯೋಜನಗಳು "ಕೆಳಕ್ಕೆ ಜಿನುಗುವ" ನಿರೀಕ್ಷೆಗಳು ಕೂಡ ಮರೆಯಾದಂತೆ, ಭೌತಿಕ ಕಷ್ಟಕಾರ್ಪಣ್ಯಗಳ ವಾಸ್ತವವು ಹೆಚ್ಚು ಹೆಚ್ಚು ಸಂಖ್ಯೆಯ ಜನರನ್ನು ತಟ್ಟಲಾರಂಭಿಸಿದಂತೆ, ಅನಾವರಣಗೊಳ್ಳುತ್ತಿರುವ ಅಸಮಾನ ವ್ಯವಸ್ಥೆಯ ವಿರುದ್ಧ ಅಸಮಾಧಾನ ಹೆಚ್ಚುತ್ತದೆ. ಅಂತಹ ಅಸಮಾಧಾನವನ್ನು ಶಮನಗೊಳಿಸಲು ನಮ್ಮ ರಾಷ್ಟ್ರವು ಈಗ ಒಂದು ದೊಡ್ಡ ಶಕ್ತಿಯೆಂಬ ಸ್ಥಾನಮಾನವನ್ನು ಪಡೆದಿದೆ ಎಂಬುದೂ ಸಾಲುವುದಿಲ್ಲ. ಆಗ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದೊಂದಿಗೆ ಸಂಯೋಜಿತವಾಗಿರುವ ಮತ್ತು ನವ ಉದಾರವಾದಿ ವ್ಯವಸ್ಥೆಯನ್ನು ಪೋಷಿಸುವ ದೇಶದ ಹಿರಿ ಬಂಡವಾಳವು ಫ್ಯಾಸಿಸ್ಟ್ ತೆರದವರೊಂದಿಗೆ ಕೈಜೋಡಿಸುತ್ತದೆ, ಒಂದು ಹೊಸ ಅಲೌಕಿಕ 'ಹಿಂದೂ ರಾಷ್ಟ್ರ'ವನ್ನು ಸೃಷ್ಟಿಸುತ್ತದೆ. ಇದು ಒಂದು ಫ್ಯಾಸಿಸ್ಟ್ ತೆರನ ಪ್ರಭುತ್ವವನ್ನು ಮರೆಮಾಚುವ ಮುಖವಾಡ.

ಈ ಹೊಸ ಅಲೌಕಿಕತೆಯು ಹಳೆಯದಕ್ಕೆ ಬದಲಾಗಿ ಅಲ್ಲ, ಅದಕ್ಕೆ ಪೂರಕವಾಗಿಯೇ ಇದೆ. ಅಂದರೆ ನವ ಉದಾರವಾದಿ ಆಳ್ವಿಕೆಗೆ ಒಂದು ಸೈದ್ಧಾಂತಿಕ ಹೊದಿಕೆಯನ್ನು ಒದಗಿಸುವ ಉದ್ದೇಶದ ಜಿಡಿಪಿ ರಾಷ್ಟ್ರೀಯವಾದ ಫ್ಯಾಸಿಸ್ಟ್ ತೆರನ "ರಾಷ್ಟ್ರೀಯವಾದ"ದೊಳಗೆ ತೂರಿಕೊಳ್ಳುತ್ತದೆ.

ಭಾರತದಲ್ಲಿ ಈ ವಿದ್ಯಮಾನವು ಸಂಭವಿಸುತ್ತಿರುವುದನ್ನೇ ನಾವು ನೋಡುತ್ತಿದ್ದೇವೆ. ನವ ಉದಾರವಾದವನ್ನು ಆರಂಭದಲ್ಲಿ ಪರಿಚಯಿಸಿದ ರಾಜಕೀಯ ಶಕ್ತಿಗಳು ಜಾತ್ಯಾತೀತತೆಗೆ ವಿರುದ್ಧವಾಗಿದ್ದವುಗಳಲ್ಲ, ಅವು ಅದನ್ನು ಜಿಡಿಪಿ ಬೆಳವಣಿಗೆಯನ್ನು ತ್ವರಿತಗೊಳಿಸುವ ಮತ್ತು ಭಾರತವನ್ನು ಒಂದು ಬೃಹತ್ ಆರ್ಥಿಕ ಶಕ್ತಿಯನ್ನಾಗಿ ಪರಿವರ್ತಿಸುವ ಹೆಸರಿನಲ್ಲಿ ಸಮರ್ಥಿಸಿಕೊಂಡವು (ಎಷ್ಟರ ಮಟ್ಟಿಗೆ ಎಂದರೆ, ಭ್ರಷ್ಟಾಚಾರವನ್ನು ತೊಡೆದುಹಾಕಬೇಕು, ಏಕೆಂದರೆ, ಅದು ಭಾರತವನ್ನು ಒಂದು ಬಲಾಢ್ಯ ಶಕ್ತಿಯಾಗದಂತೆ ತಡೆಯುತ್ತದೆ ಎಂದು ಕಾಂಗ್ರೆಸ್ಸಿನ ಹಿರಿಯ ನಾಯಕರೊಬ್ಬರು ಹೇಳಿದ್ದರು!). ಈಗ ನವ ಉದಾರವಾದವು ಮುಂದೆ ದಾರಿ ಕಾಣದ ಹಂತವನ್ನು ತಲುಪುತ್ತಿರುವಾಗ, ಅದು ದೇಶವನ್ನು ಎಲ್ಲರನ್ನೂ ಒಳಗೊಳ್ಳುವ ವಸಾಹತುಶಾಹಿ– ↗

'ಮಹಾತ್ಮ-ಹುತಾತ್ಮ' - ಜನವರಿ 30, 2025 ರಂದು ರಾಜ್ಯವ್ಯಾಪಿ 'ಸೌಹಾರ್ದ ಸಂಕಲ್ಪ ದಿನ' - ಸಭೆ-ಪ್ರತಿಜ್ಞೆ ಸ್ವೀಕಾರ - ಸೌಹಾರ್ದ ಗೀತೆಗಳ ಗಾಯನ

ಜನವರಿ-30 ಗಾಂಧೀಜಿಯವರು ಹುತಾತ್ಮರಾದ ದಿನ. ಧಾರ್ಮಿಕ ಮೂಲಭೂತವಾದ ಹುಟ್ಟು ಹಾಕಿದ ಅಮಾನವೀಯ ಮನೋಧರ್ಮ ಹಿಂಸೆಯ ರೂಪಕವಾಗಿ ಗೋಡ್ಸೆ ಮೂಲಕ ಪ್ರಕಟಗೊಂಡ ದಿನ. ಇದು ಅಂತಿಂಥ ಹಿಂಸೆಯಲ್ಲ. ಸಂತ ಮನೋಭಾವದ ಪ್ರಾಣಶಕ್ತಿಯನ್ನು ಭೌತಿಕವಾಗಿ ಬಲಿ ತೆಗೆದುಕೊಂಡ ಕ್ರೌರ್ಯದ ಹಿಂಸೆ. ಇಲ್ಲಿ ಇದ್ದದ್ದು ಮಾನವೀಯತೆ ಮತ್ತು ಮತೀಯತೆಗಳ ನಡುವಿನ ಸಂಘರ್ಷ. ಹಿಂದೂ ಧರ್ಮದ ಅನುಯಾಯಿಯಾಗಿದ್ದೂ ಧರ್ಮದ್ವೇಷಕ್ಕೆ ವಿರುದ್ಧವಾದ ಧಾರ್ಮಿಕ ಸೌಹಾರ್ದತೆಯನ್ನು ಜೀವಮಾನದುದ್ದಕ್ಕೂ ಪ್ರತಿಪಾದಿಸುತ್ತ ಬಂದ ಗಾಂಧಿಯವರ ಹತ್ಯೆ ಜಗತ್ತನ್ನೇ ತಲ್ಲಣಗೊಳಿಸಿತ್ತು. ಯಾವುದೇ ಧರ್ಮದ ಮೂಲಭೂತವಾದವು ಜೀವಹತ್ಯೆಗೂ ಹಿಂಜರಿಯುವುದಿಲ್ಲ ಎಂಬ ಅರಿವಿಗೊಂದು ಅಮಾನವೀಯ ಸಾಕ್ಷಿಯಾಗಿತ್ತು. ಎಲ್ಲ ಧರ್ಮಗಳ ಮೂಲಭೂತವಾದ ಎಷ್ಟರಮಟ್ಟಿಗೆ ಜೀವ ವಿರೋಧಿಯಾಗಬಲ್ಲದು ಎಂಬ ಕಟು ಕಠೋರ ವಾಸ್ತವವನ್ನು ಮನುಷ್ಯ ಮನಸ್ಸಿನವರೆಲ್ಲ ಅರ್ಥ ಮಾಡಿಕೊಳ್ಳಬೇಕಾದ ಜರೂರು ಅಂದಿಗೂ ಇಂದಿಗೂ ಅಂತಃಕರಣದ, ಒಂದು ಮೌಲ್ಯವಾಗಿದೆ. ನಿಜವಾದ ಧರ್ಮ ಮತ್ತು ಮನೋಧರ್ಮಗಳು ಯಾವತ್ತೂ ಹಿಂಸೆ ಮತ್ತು ಹತ್ಯೆಗಳ ಅಸ್ತ್ರವಾಗುವುದಿಲ್ಲ. ಧರ್ಮದ ಹೆಸರಿನಲ್ಲಿ ನಡೆಯುವ ಅಧರ್ಮ ಕೇಂದ್ರಿತ ಮನೋಧರ್ಮಕ್ಕೆ ಮಾತ್ರ ಹಿಂಸೆ ಮತ್ತು ಹತ್ಯೆಗಳು ಆದರ್ಶವಾಗಬಲ್ಲವು.

ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿ ವಿಜೃಂಭಿಸುತ್ತಿರುವ ಧಾರ್ಮಿಕ ಮೂಲಭೂತವಾದವು ದ್ವೇಷೋತ್ಪಾದನೆಯ ಸಾಧನವಾಗುತ್ತಿದೆ. ಅನೇಕರು ತಮ್ಮ ನಡೆ-ನುಡಿಗಳಲ್ಲಿ ಹಿಂಸಾರೂಪಿಗಳಾಗುತ್ತಿರುವುದು ಆತಂಕವುಂಟು ಮಾಡುತ್ತಿದೆ. ಜಗತ್ತಿನ ಯಾವ ಧರ್ಮವೂ ಹಿಂಸಾರೂಪಿಗಳಾಗಲು ಮನುಷ್ಯರನ್ನು ಪ್ರಚೋದಿಸುವುದಿಲ್ಲ. ಆದರೆ ಧರ್ಮದ ದುರುಪಯೋಗ ಮಾಡಿಕೊಳ್ಳುವುದನ್ನೇ ಹುಸಿ ಕರ್ತವ್ಯವಾಗಿ ಮಾಡಿಕೊಂಡ ಕೆಲವರು ದೇಶವನ್ನು ಒಡೆಯುತ್ತಿದ್ದಾರೆ. ಸಮಾನತೆಯ ಆಶಯಗಳನ್ನು ಬದಿಗೊತ್ತಿ ಭಾವೋದ್ರೇಕವನ್ನು ಸಹಜವಾಗಿಸುತ್ತಿದ್ದಾರೆ. ದ್ವೇಷದ ಬೆಂಕಿಯಲ್ಲಿ ಭಾರತದ ನೈಜ ಭಾವಕೋಶವನ್ನು ಸುಡುತ್ತಿದ್ದಾರೆ. ನಮ್ಮದು ಸೌಹಾರ್ದ ಭಾರತವೆಂಬ ಮನೋಧರ್ಮಕ್ಕೆ ಧಕ್ಕೆ ತರುತ್ತಿದ್ದಾರೆ.



ಇಂತಹ ಸಂಕಟದ ಸನ್ನಿವೇಶದಲ್ಲಿ ಗಾಂಧಿಯವರ ಸೌಹಾರ್ದ ಭಾರತದ ಪರಿಕಲ್ಪನೆ ತುಂಬಾ ಪ್ರಸ್ತುತವಾಗುತ್ತದೆ. ಗಾಂಧಿಯವರ ಸೌಹಾರ್ದ ಸಂಬಂಧಿ ವಿಚಾರಧಾರೆಯು ಸದಾ ಮೂಲಭೂತವಾದಕ್ಕೆ ವಿರೋಧವಾಗಿದ್ದನ್ನು ಇಂದಿಗೂ ನೆನೆಯಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಗಾಂಧಿ ಹತ್ಯೆಯಾದ ಹಾಗೂ ಅವರು ಹುತಾತ್ಮರಾದ ಜನವರಿ 30 ರಂದು ರಾಜ್ಯಾದ್ಯಂತ 'ಸೌಹಾರ್ದ ಸಂಕಲ್ಪ ದಿನ'ವೆಂಬ ಹೆಸರಿನ ಕಾರ್ಯಕ್ರಮವನ್ನು ಹಮ್ಮಿಕೊಂಡು ಸೌಹಾರ್ದ ಭಾರತದ ಮಹತ್ವವನ್ನು ಸಾರಲಾಗುತ್ತಿದೆ.

ಜನವರಿ 30, 2025. ಸಂಜೆ 5.00 ಕ್ಕೆ **'ಸೌಹಾರ್ದ ಸಂಕಲ್ಪ ಸಭೆ'** - ಪ್ರತಿಜ್ಞೆ ಸ್ವೀಕಾರ. ಸೌಹಾರ್ದತೆ ಮತ್ತು ಸಮಾನತೆಯ ಆಶಯವುಳ್ಳ ಗೀತೆಗಳ ಗಾಯನ, ಸ್ಥಳ: ಸ್ವಾತಂತ್ರ್ಯ ಉದ್ಯಾನವನ, ಬೆಂಗಳೂರು ಮತ್ತು ರಾಜ್ಯ, ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಏಕ ಕಾಲದಲ್ಲಿ ನಡೆಯಲಿದೆ.

ಬನ್ನಿ, ಎಲ್ಲರೂ ಒಟ್ಟಾಗೋಣ; ಸೌಹಾರ್ದ ಸಂಕಲ್ಪ ದಿನವನ್ನು ಅರ್ಥಪೂರ್ಣಗೊಳಿಸೋಣ.

ಸಂಯೋಜಕರು: ಪ್ರೊ.ಬರಗೂರು ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಬಡಗಲಪುರ ನಾಗೇಂದ್ರ, ನಿಸಾರ್ ಅಹಮದ್, ಐ.ಪಿ.ಎಸ್.(ನಿ), ಡಾ. ಎಸ್.ವೈ.ಗುರುಶಾಂತ್, ಡಾ.ಆರ್.ಮೋಹನ್ ರಾಜ್, ವಿ.ನಾಗರಾಜ್, ಡಾ.ಎಚ್.ಎಲ್.ಪುಷ್ಪ, ಬಿ.ರಾಜಶೇಖರಮೂರ್ತಿ, ಮಲ್ಲಿಗೆ ಸಿರಿಮನೆ, ಜ್ಯೋತಿ ಅನಂತ ಸುಬ್ಬರಾವ್, ಎಂ.ಪ್ರಕಾಶಮೂರ್ತಿ, ಇಕ್ಬಾಲ್, ಆರ್.ರಾಮಕೃಷ್ಣ, ಡಾ.ಮನೋಹರ ಚಂದ್ರಪ್ರಸಾದ್, ಪರಿಕೋ ಪ್ರಭು, ಟಿ.ಎಸ್.ವಿಜಯ್ ಕುಮಾರ್, ರಾಜಶೇಖರ ಕಿಗ್ಗ.

ಸೌಹಾರ್ದ ಸಂಘಟನೆಗಳು: ಕರ್ನಾಟಕ ಬಂಡಾಯ ಸಾಹಿತ್ಯ ಸಂಘಟನೆ, ಸಂಯುಕ್ತ ಹೋರಾಟ ಕರ್ನಾಟಕ (ರೈತ ಒಕ್ಕೂಟ), ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ದಲಿತ ಸಂಘರ್ಷ ಸಮಿತಿ (ಭೀಮವಾದ), ದಲಿತ ಹಕ್ಕುಗಳ ಸಮಿತಿ-ಕರ್ನಾಟಕ, ಮಾನವ ಬಂಧುತ್ವ ವೇದಿಕೆ, ಗ್ರಾಮ ಭಾರತ, ಸಮುದಾಯ, ಕರ್ನಾಟಕ ರಾಷ್ಟ್ರೀಯ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ, ಅಖಿಲ ಕರ್ನಾಟಕ ಸೂಫಿ ಸಂತರ ಸಂಘ, ಭಾರತ ವಿದ್ಯಾರ್ಥಿ ಫೆಡರೇಷನ್, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ಅಖಿಲ ಭಾರತ ಯುವಜನ ಫೆಡರೇಷನ್, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(JCTU), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(CITU), AITUC, AICCTU, ಕರ್ನಾಟಕ ಜನಶಕ್ತಿ, ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ(ಅಜಯ್ ಭವನ), ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಅಖಿಲ ಭಾರತ ವಕೀಲರ ಸಂಘ(AILU), ಸಮಾನ ಮನಸ್ಕ ವಕೀಲರ ವೇದಿಕೆ, ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್(ರಿ), ಕರ್ನಾಟಕ ದಲಿತ ಸಂಘರ್ಷ ಸಮಿತಿ(ಸಂಯೋಜಕ), ದಲಿತ ಕ್ರಿಶ್ಚಿಯನ್ ಫೆಡರೇಷನ್, ಕರ್ನಾಟಕ., ಕರ್ನಾಟಕ ಲೇಖಕಿಯರ ಸಂಘ, ಸದ್ಭಾವನಾ ಪ್ರತಿಷ್ಠಾನ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ, ಪ್ರಗತಿಪರ ವಿದ್ಯಾರ್ಥಿ ಯುವ ಸಂಘಟನೆಗಳು, ಇತರೆ ಜನ ಸಂಘಟನೆಗಳು.

ಕಾಮ್ರೇಡ್ ಬಯ್ಯಾರೆಡ್ಡಿ.........

ಪುಟ 16 ರಿಂದ

ಈ ಹಿನ್ನೆಲೆಯಿಂದ ಅವರು ಮೈಗೂಡಿಸಿಕೊಂಡದ್ದು ದಿಟ್ಟತನ, ಮುನ್ನುಗ್ಗುವಿಕೆ. ಅದನ್ನು ಚಿಂತಾಮಣಿಯಲ್ಲಿ ವಿದ್ಯಾರ್ಥಿ ನಾಯಕರಾಗಿದ್ದಾಗ ಮತ್ತು ಎಸ್‌ಎಫ್‌ಐನ ಅಧ್ಯಕ್ಷರಾದ ಮೇಲೆ ವಿದ್ಯಾರ್ಥಿ ಚಳುವಳಿಯ ಹೋರಾಟಗಳನ್ನು ರೂಪಿಸುವಲ್ಲಿ ಎದ್ದು ಕಾಣುತ್ತದೆ.

ಈ ವಾತಾವರಣದಿಂದ ಪಡೆದ ಅವರ ಮತ್ತೊಂದು ಅವಕಾಶ ಸಂಪರ್ಕಗಳು. ಕೋಲಾರ ಜಿಲ್ಲೆಯ ಎಡಪಂಥೀಯ ವಾತಾವರಣದ ಉಸಿರಾಡಿದ ಎಷ್ಟೋ ಜನರು ನ್ಯಾಯಾಂಗದಲ್ಲಿದ್ದಂತೆ ಕರ್ನಾಟಕ ಸರ್ಕಾರದ ಕಾರ್ಯಾಂಗ, ಶಾಸಕಾಂಗಗಳಲ್ಲಿಯೂ ವಿವಿಧ ಸ್ಥಾನಗಳಲ್ಲಿದ್ದಾರೆ. ಬಯ್ಯಾರೆಡ್ಡಿಯವರು ಅವರ ಪರಿಚಯ ಮಾಡಿಕೊಂಡರು. ನಿರಂತರವಾಗಿ ಸಂಪರ್ಕ ಉಳಿಸಿಕೊಂಡರು. ಚಳುವಳಿಗೆ ನಿಧಿ ಸಂಗ್ರಹ ಮಾಡಲು, ಜನರ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಲು, ಹೋರಾಟಗಳ ಸಂದರ್ಭದಲ್ಲಿ ಒತ್ತಾಯಗಳನ್ನು ಪಡೆದುಕೊಳ್ಳಲು ಈ ಸಂಪರ್ಕಗಳನ್ನು ಯಶಸ್ವಿಯಾಗಿ ಬಳಸಿಕೊಂಡರು.

ಸಂಘಟನೆಗೆ ಆದ್ಯತೆ ಸಾಮೂಹಿಕ ಸಂಘಟನೆ ಹಾಗೂ ಪಕ್ಷಕ್ಕೆ ಅವರು ನೀಡಿದ ಮುಖ್ಯ ಕೊಡುಗೆ. ಹೋರಾಟಗಳು, ಅದರ ಯಶಸ್ಸು, ಜನರ ಸಮಸ್ಯೆಗೆ ಪರಿಹಾರವನ್ನೇ ಕಮ್ಯೂನಿಸ್ಟ್ ಕೆಲಸ, ಇವುಗಳಿಂದ ಸಂಘಟನೆಯ ಬೆಳವಣಿಗೆ ತಂತಾನೆ ಸಂಭವಿಸುತ್ತದೆ ಎಂದು ಬಹಳಷ್ಟು ಸಂಗಾತಿಗಳು ತಪ್ಪು ಕಲ್ಪನೆ ಹೊಂದಿದ್ದಾರೆ. ಇಂದಿನ ಹೋರಾಟವನ್ನು, ಅದರ ಯಶಸ್ಸು, ಅರೆ ಯಶಸ್ಸು, ಅಯಶಸ್ಸನ್ನೂ ಕೂಡಾ ಸಂಘಟನೆಯನ್ನು ವಿಸ್ತರಿಸಲು ಬಳಸಬೇಕು. ಮುಂದೆ ಮತ್ತಷ್ಟು ದೊಡ್ಡ ಹೋರಾಟಗಳನ್ನು ಕೈಗೊಳ್ಳಲು ಇದೇ ಸಾಧನ ಎಂಬ ಮುಖ್ಯ ಕಮ್ಯೂನಿಸ್ಟ್ ತತ್ವವನ್ನು ಇಂತಹವರು ಮನಗಾಣುವುದೇ ಇಲ್ಲ. ಬಯ್ಯಾರೆಡ್ಡಿಯವರಲ್ಲಿ ಈ ಅಪರೂಪದ ಗುಣ ಇತ್ತು.

ಆದರೆ ಬಯ್ಯಾರೆಡ್ಡಿಯವರು ಸಂಘಟನೆಗೆ ಅದರ ಅಂಗವಾಗಿ ಕಾರ್ಯಕರ್ತರನ್ನು ಗುರುತಿಸುವುದು, ಅವರು ಪೂರ್ಣಾವಧಿ ಚಳುವಳಿಗೆ ತ್ಯಾಗ ಮಾಡುವಂತೆ ಪ್ರೇರೇಪಿಸುವುದಕ್ಕೆ ಗಮನ ಕೊಡುತ್ತಿದ್ದರು.

ಯಾವುದೇ ಸಭೆ, ಯಾವುದೇ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಅದಕ್ಕಾಗಿ ಬಹಳ ವಿವರವಾಗಿ ಪ್ರತಿ ಸಣ್ಣ ವಿಷಯಗಳಿಗೂ ಕೂಡಾ ಗಮನನೀಡಿ ಯೋಜಿಸುತ್ತಿದ್ದರು. ಈ ರೀತಿ ಪೂರ್ವ ಯೋಜನೆಯ ಅಂಗ ಯಾವ ಕೆಲಸವನ್ನು ಯಾರಿಗೆ ವಹಿಸಬೇಕು ಎಂಬ ಕೆಲಸದ ವಿಂಗಡಣೆ. ಅದರಿಂದ ಕೆಲಸ ಸರಾಗವಾಗಿ ಸಾಗುವಂತೆ ಪ್ಲಾನ್ ಮಾಡುತ್ತಿದ್ದರು. ಇದೂ ಕೂಡ ಬಹಳ ಜನ ಸಂಗಾತಿಗಳಲ್ಲಿ ಕಾಣದ ಅಪರೂಪದ ಗುಣ.

ಈ ಸಾಮರ್ಥ್ಯದ ಫಲವಾಗಿಯೇ ಅವರು ಕೋವಿಡ್ ಕಾಲದಲ್ಲಿ ತಮ್ಮ ತೀವ್ರ ಅನಾರೋಗ್ಯದ ದೆಸೆಯಿಂದ ಊರಿನ ಒಂದು ಫಾರಂ ಹೌಸಿನಲ್ಲಿ ತಮ್ಮನ್ನು ತಾವೇ ಕೂಡಿ ಹಾಕಿಕೊಂಡಿದ್ದ ಸಂದರ್ಭದಲ್ಲಿಯೂ ದೆಹಲಿ ರೈತ ಚಳುವಳಿ ಭುಗಿಲೆದ್ದಾಗ ಕರ್ನಾಟಕದ ರೈತ, ಕಾರ್ಮಿಕ, ದಲಿತ, ಮಹಿಳಾ, ವಿದ್ಯಾರ್ಥಿ ಮತ್ತಿತರ ಸಂಘಟನೆಗಳನ್ನು ಒಗ್ಗೂಡಿಸಿದ ವೇದಿಕೆಯನ್ನು ಅಲ್ಲಿಂದಲೇ ನಿರ್ವಹಿಸಿದ್ದು. ಇದು ಅವರಿಗೆ ಗಣನೀಯ ಹೆಸರು ಬರಲು ಕಾರಣವಾಯಿತು. ಇಂತಹ ಕೆಲಸ ನಿರ್ವಹಿಸಲು ಅವರು ಒಂದು ದಿನಕ್ಕೆ ಎಷ್ಟು ಫೋನು ಮಾಡುತ್ತಿದ್ದರೋ ಏನೋ ಅವರಿಗೇ ಗೊತ್ತು.

ಅವರ ಬದುಕಿನ ಕೊನೆಯ ಭಾಗದಲ್ಲಿ ಅವರು ನೇತೃತ್ವ ವಹಿಸಿದ ದೇವನಹಳ್ಳಿ ಚನ್ನರಾಯಪಟ್ಟಣ ಭೂ ಹೋರಾಟ ಸಾವಿರಾರು ದಿನಗಳನ್ನು ದಾಟಿ ಇನ್ನೂ ದೃಢತೆಯಿಂದ ಮುಂದುವರೆದಿದೆ. ಸರ್ಕಾರಕ್ಕೆ ಸೆಡ್ಡು ಹೊಡೆದಿದೆ.

ತಮ್ಮ ತೀವ್ರ ಉಸಿರಾಟದ ಸಮಸ್ಯೆಯ ನಡುವೆಯೂ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಬೇಕು ಎಂಬ ಕಾತರದಿಂದ ವೈದ್ಯರ ಬಳಿಗೆ ಹೋದರೆ ಅವರೆಲ್ಲಿ ಆಸ್ಪತ್ರೆಗೆ ಅಡ್ಮಿಟ್ ಆಗಲು ಒತ್ತಾಯಿಸುತ್ತಾರೋ ಎಂಬ ಶಂಕೆಯಿಂದ ಸಕಾಲದಲ್ಲಿ ವೈದ್ಯಕೀಯ ಸಹಾಯ ಪಡೆಯದಿದ್ದುದು ವಿಷಾದಕರ.

ನನಗೂ ಅವರಿಗೂ ಹಲವು ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ಪಕ್ಷದ ಆರೋಗ್ಯ ಮತ್ತು ಬೆಳವಣಿಗೆಯ ವಿಷಯದಲ್ಲಿ ಸಹಮತರಾಗಿ ನಾಲ್ಕು ದಶಕಗಳ ಕಾಲ ಒಟ್ಟಿಗೆ ಕೆಲಸ ಮಾಡಿದ ಸಂಗಾತಿಯನ್ನು ಕಳೆದುಕೊಂಡುದು ಪಕ್ಷಕ್ಕೂ, ರೈತ ಚಳುವಳಿಗೂ, ವೈಯುಕ್ತಿಕವಾಗಿ ನನಗೂ ತುಂಬಲಾರದ ನಷ್ಟ.

ಮಾರ್ಕ್ಸ್‌ವಾದ ಮತ್ತು ಕಮ್ಯೂನಿಸ್ಟ್ ಪಕ್ಷದಲ್ಲಿ ಅದರ ವೈಜ್ಞಾನಿಕ ವಿಸ್ತಾರ, ಸಂಘಟನಾ ತತ್ವವನ್ನು ಒಂದಿಷ್ಟು ಅರ್ಥೈಸಿಕೊಂಡು ಕ್ರಿಯಾಶೀಲರಾಗುವ ಪ್ರೌಢಿಮೆ ಬರುವುದು ತಡವಾಗಿಯೇ. ಕಮ್ಯುನಿಸ್ಟ್ ಪಕ್ಷದ ಲೆಕ್ಕದಲ್ಲಿ ನಲವತ್ತು ವರ್ಷದ ಅವರ ಚಳುವಳಿಯ ಅನುಭವದಿಂದ ಬಯ್ಯಾರೆಡ್ಡಿವರು ಈಗಷ್ಟೇ ಯವ್ವನಕ್ಕೆ ಕಾಲಿಟ್ಟಿದ್ದರು. ಇನ್ನೂ ಬಹಳ ಕಾಲ ಅವರ ಕ್ರಿಯಾಶೀಲತೆಯ ತುರ್ತು ಅಗತ್ಯವಿತ್ತು. ಹಾಗಾಗಿ ತುಂಬಲಾರದ ನಷ್ಟ ಎಂಬುದು ಕೇವಲ ಬಾಯ್ಮಾತಲ್ಲ. ಕಟು ವಾಸ್ತವ.

ವಿರೋಧಿ ರಾಷ್ಟ್ರೀಯವಾದದ ವಿಚಾರದಿಂದ ಮತ್ತಷ್ಟು ದೂರ ತಳ್ಳುತ್ತದೆ. ಅದು ಹಿರಿ ಬಂಡವಾಳ ಮತ್ತು ಫ್ಯಾಸಿಸ್ಟ್ ತೆರನ ಶಕ್ತಿಗಳ ನಡುವೆ ಒಂದು ಮೈತ್ರಿಯನ್ನು ತರುತ್ತದೆ ಮಾತ್ರವಲ್ಲ, ಈ ಫ್ಯಾಸಿಸ್ಟ್ ತೆರನ ಶಕ್ತಿಗಳನ್ನು ಅವರ ಫ್ಯಾಸಿಸ್ಟ್ ತೆರನ "ರಾಷ್ಟ್ರೀಯವಾದ"ದೊಂದಿಗೆ ಅಧಿಕಾರಕ್ಕೂ ತರುತ್ತದೆ.

ಹೀಗೆ ನವ ಉದಾರವಾದವು ಫ್ಯಾಸಿಸ್ಟ್ ತೆರನ ಶಕ್ತಿಗಳ ಪ್ರಾಬಲ್ಯಕ್ಕೆ ಭೌತಿಕ ಪರಿಸ್ಥಿತಿಗಳನ್ನು ಸೃಷ್ಟಿಸಿದರೆ, ನವ ಉದಾರವಾದದ ಪರಿಚಯಕ್ಕೆ ಆಧಾರವಾಗಿರುವ "ಜಿಡಿಪಿ-ರಾಷ್ಟ್ರೀಯವಾದ"ದ ತತ್ವಸಿದ್ಧಾಂತವು, ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯವಾದವನ್ನು ದುರ್ಬಲಗೊಳಿಸುವ ಮೂಲಕ ಫ್ಯಾಸಿಸ್ಟ್ ತೆರನ "ರಾಷ್ಟ್ರೀಯವಾದ"ದ ಉತ್ಥಾನಕ್ಕೆ ಆಧಾರವನ್ನು ಸೃಷ್ಟಿಸುತ್ತದೆ.

ತಪ್ಪು ಗ್ರಹಿಕೆ ಆದ್ದರಿಂದ ಫ್ಯಾಸಿಸ್ಟ್ ತೆರನ ಶಕ್ತಿಗಳ ಪ್ರಾಬಲ್ಯವನ್ನು ಮುರಿಯಬೇಕಾದರೆ ನವ ಉದಾರವಾದವನ್ನು ಮೀರಿ ಹೋಗಬೇಕಾಗುತ್ತದೆ, (ಇಲ್ಲದಿದ್ದರೆ ಅಧಿಕಾರದಿಂದ ಹೊರಹಾಕಲ್ಪಟ್ಟರೂ ಸಹ ಫ್ಯಾಸಿಸ್ಟ್ ತೆರನ ಶಕ್ತಿಗಳು ಯುಎಸ್‌ನಲ್ಲಿ ಡೊನಾಲ್ಡ್ ಟ್ರಂಪ್ ಮಾಡಿದಂತೆ ಮತ್ತೆ ಮತ್ತೆ ಬರುತ್ತವೆ), ಮಾತ್ರವಲ್ಲದೆ, ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯವಾದವನ್ನು ಪುನರುಜ್ಜೀವನ ಗೊಳಿಸಬೇಕಾಗುತ್ತದೆ. ಪ್ರಸಕ್ತ ಸನ್ನಿವೇಶದಲ್ಲಿ ಈ ಅಂಶವನ್ನು ಒತ್ತಿಹೇಳಲು ಒಂದು ಕಾರಣವಿದೆ. ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಿ ಡಾ ಮನಮೋಹನ್ ಸಿಂಗ್, ಮೆದುಳು ಮತ್ತು ಹೃದಯದ ಅತ್ಯುತ್ತಮ ಗುಣಗಳನ್ನು ಹೊಂದಿದ್ದವರು ಮತ್ತು ಒಬ್ಬ ಸಂಪೂರ್ಣ ಜಾತ್ಯಾತೀತ ವ್ಯಕ್ತಿಯಾಗಿದ್ದರು. ಆದರೆ ದೇಶದಲ್ಲಿ ನವ-ಉದಾರವಾದಿ "ಸುಧಾರಣೆಗಳನ್ನು" ಪರಿಚಯಿಸಿದ ಜವಾಬ್ದಾರಿಯೂ ಬಹುಪಾಲು ಅವರದ್ದೇ. ಸದ್ಯ ಡಾ ಸಿಂಗ್ ಅವರ ಅಸಾಧಾರಣ ವೈಯಕ್ತಿಕ ಗುಣಲಕ್ಷಣಗಳನ್ನು ಬಳಸಿಕೊಂಡು ಈ ವ್ಯವಸ್ಥೆಯನ್ನು ಸ್ವೀಕಾರಾರ್ಹ ಎಂದು ಉತ್ತೇಜಿಸುವ ಒಂದು ಪ್ರವೃತ್ತಿಯು ನವ-ಉದಾರವಾದದ ಪ್ರತಿಪಾದಕರಲ್ಲಿ ಕಂಡುಬರುತ್ತಿದೆ. ಈ ಪ್ರವೃತ್ತಿಯು, ನವ ಉದಾರವಾದ ಮತ್ತು ಫ್ಯಾಸಿಸ್ಟ್ ತೆರನ ಶಕ್ತಿಗಳ ರಾಜಕೀಯ ಉಚ್ಛ್ರಾಯದ ನಡುವಿನ ಕೊಂಡಿಯಿಂದಾಗಿ ಸ್ವಲ್ಪಮಟ್ಟಿನ ಯಶಸ್ಸನ್ನು ಪಡೆಯುವ ಸಾಧ್ಯತೆಯಿದೆ ಎಂಬುದನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತಿಲ್ಲ. ಇಂತಹ ಉಚ್ಛ್ರಾಯಕ್ಕೆ ಶುದ್ಧ ರಾಜಕೀಯ ಕಾರಣಗಳನ್ನು ಕೊಡಲಾಗುತ್ತದೆ, ಅದರ ಹಿಂದಿರುವ ಆರ್ಥಿಕ ಸಂದರ್ಭದಿಂದ ಬೇರ್ಪಡಿಸಿ ನೋಡಲಾಗುತ್ತದೆ. ಆದರೆ ಇದು ಒಂದು ತಪ್ಪು ಗ್ರಹಿಕೆಯಾಗಿದೆ. ಇದನ್ನು ಸರಿಪಡಿಸದಿದ್ದರೆ, ಫ್ಯಾಸಿಸ್ಟ್ ತೆರನ ಶಕ್ತಿಗಳ ಪ್ರಾಬಲ್ಯ ಶಾಶ್ವತಗೊಳ್ಳುತ್ತದೆಯಷ್ಟೇ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 20–26, 2025 Price: Rs. 10/- Date of Publication: 17 January 2025 RNI No. KARKAN /2006/17926 Posted on 20-01-2025
Posted at BG PSO, BG - 560026 **Posted at Periodical Rate -** Rs. 2

ಕೋಲಾರ ಜಿಲ್ಲೆಯ ಕಮ್ಯೂನಿಸ್ಟ್ ಪರಂಪರೆಯ ವಾರಸುದಾರ ಕಾಮ್ರೆಡ್ ಬಯ್ಯಾರೆಡ್ಡಿ

ಜಿ.ಎನ್. ನಾಗರಾಜ

ಕಾಮ್ರೆಡ್ ಜಿ.ಸಿ.ಬಯ್ಯಾರೆಡ್ಡಿ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನವರು. ಸಂಯುಕ್ತ ಕೋಲಾರ ಜಿಲ್ಲೆಯ ಪ್ರಜಾಸತ್ತಾತ್ಮಕ ಚಳುವಳಿಯ ಕಮ್ಯುನಿಸ್ಟ್ ಧಾರೆಯ ಒಬ್ಬ ವಾರಸುದಾರ. (ಈಗ ಅವರ ಊರು ಚೇಳೂರು ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದೆ). ಕೋಲಾರ ಜಿಲ್ಲೆ ಅಂದಿನ ಮೈಸೂರು ಸಂಸ್ಥಾನದಲ್ಲಿಯೇ ಅತ್ಯಂತ ಬಿರುಸಿನ ಸ್ವಾತಂತ್ರ್ಯ ಚಳುವಳಿಯ ನೆಲೆಯಾಗಿತ್ತು. ಅಂದಿನ ಕೋಲಾರ ಜಿಲ್ಲೆಯ ಗೌರಿಬಿದನೂರಿನ ವಿದುರಾಶ್ವತ್ಥ ಗುಂಡೇಟು ಮತ್ತು ಹುತಾತ್ಮರಾದ ಘಟನೆ ಕೇವಲ ಮೈಸೂರು ಸಂಸ್ಥಾನ ಮಾತ್ರವಲ್ಲ ಭಾರತದ ರಾಜಾಡಳಿತದ ಸಂಸ್ಥಾನಗಳ ಒಳಗೆ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಚಳುವಳಿಗಳಲ್ಲಿಯೇ ತೀವ್ರತರ ಚಳುವಳಿಯಾಗಿತ್ತು. ಇದು ಕೋಲಾರ ಜಿಲ್ಲೆಯ ಒಂದು ದಿಕ್ಕಿನ ಚಳುವಳಿಯಾದರೆ, ಮತ್ತೊಂದು ಕಡೆ ಕೆಜಿಎಫ್‌ನ ಬಂಗಾರದ ಗಣಿ ಕಾರ್ಮಿಕರ ಹೋರಾಟಗಳು, ಸ್ವಾತಂತ್ರ್ಯ ಚಳುವಳಿ. ತಮಿಳುನಾಡಿನ ಕಮ್ಯೂನಿಸ್ಟ್ ನಾಯಕತ್ವದ ಮಾರ್ಗದರ್ಶನದಲ್ಲಿ ವಾಸನ್, ಗೋವಿಂದನ್ ನಡೆಸುತ್ತಿದ್ದ ಚಳುವಳಿ, ಇವೆರಡೂ ಅಂದಿನ ಕೋಲಾರ ಜಿಲ್ಲೆಯ ಮನೆ ಮನೆ ಮಾತಾಗಿತ್ತು. ಜನರನ್ನು ಉದ್ದೀಪಿಸಿ ಸ್ವಾತಂತ್ರ್ಯ ಚಳವಳಿಗೆ ಸೆಳೆಯಿತು. ಕಮ್ಯೂನಿಸ್ಟ್ ಚಿಂತನೆಯ ಬೀಜ ಬಿತ್ತಿತು. ಹೀಗೆ ಭಾರತದ ಸ್ವಾತಂತ್ರ್ಯ ಚಳುವಳಿಯ ಎರಡು ಧಾರೆಗಳು ಕೋಲಾರ ಜಿಲ್ಲೆಯಲ್ಲಿ ಜನತೆಯ ಮೇಲೆ ಪ್ರಭಾವ ಬೀರಿದವು. ಇವು ಕೇವಲ ಎರಡು ಧಾರೆ ಮಾತ್ರವೇ ಆಗಿರಲಿಲ್ಲ, ಸ್ವಾತಂತ್ರ್ಯದ ಬಗ್ಗೆ ಎರಡು ವಿಭಿನ್ನ ಪರಿಕಲ್ಪನೆಗಳನ್ನೇ ಭಾರತದ ಜನರ ಮುಂದಿಟ್ಟಿದ್ದವು. ಒಂದು ಭಾರತದಿಂದ ಬ್ರಿಟಿಷರನ್ನು ಬಿಟ್ಟು ತೊಲಗಿಸಿ ನಮ್ಮ ಆಡಳಿತ ನಾವೇ ಮಾಡಿಕೊಂಡರೆ ಸಾಕು ಎಂಬ ಭಾರತದ ಸಮಾಜದಲ್ಲಿ ಪ್ರತಿಷ್ಠಿತರಾಗಿದ್ದ ಆಳುವ ವರ್ಗದ ಪರಿಕಲ್ಪನೆ. ಮತ್ತೊಂದು ಸ್ವಾತಂತ್ರ್ಯವೆಂದರೆ ಭಾರತದ ಕಾರ್ಮಿಕರೂ ಸೇರಿದಂತೆ ದುಡಿಯುವ ಜನರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಖಾತರಿಪಡಿಸುವ, ಅವರ ಬದುಕಿನಲ್ಲಿ ಅರಳಬೇಕಾದ ಸ್ವಾತಂತ್ರ್ಯ, ಬ್ರಿಟಿಷರ ವಿರುದ್ಧ ಮಾತ್ರವಲ್ಲ ಭಾರತೀಯ ಸಮಾಜದಲ್ಲಿ ಪಟ್ಟಭದ್ರರಾಗಿರುವ ಭೂಮಾಲಕರು, ಬಂಗಾರದ ಗಣಿಗಳ, ಕೈಗಾರಿಕೆಗಳ ಮಾಲೀಕರುಗಳಿಂದಲೂ ಪಡೆದುಕೊಳ್ಳಬೇಕಾದ ಬದುಕಿನ ಸ್ವಾತಂತ್ರ್ಯ. ಈ ಧಾರೆಗಳ ಒಡನಾಟದ ಸಂಕೇತವಾಗಿ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಒಳಗೇ ಜನ ಜಾಗೃತಿ ಸಂಘದ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದ ಕಮ್ಯೂನಿಸ್ಟ್ ಧಾರೆ ಕೋಲಾರದಲ್ಲಿ ಕೂಡಾ ಅಸ್ತಿತ್ವದಲ್ಲಿತ್ತು. ಅದೇ ಸಮಯದಲ್ಲಿ ಈ ಎರಡು ಧಾರೆಗಳ ನಡುವೆ ಸಂಘರ್ಷ ಕಾಂಗ್ರೆಸ್‌ನ ಕೆ.ಸಿ.ರೆಡ್ಡಿ ಮೊದಲಾದವರು ಮತ್ತು ಕಮ್ಯೂನಿಸ್ಟ್ ನಾಯಕರಾದ ವಾಸನ್, ಗೋವಿಂದನ್ ರವರ ನಡುವೆ ಕಾರ್ಮಿಕ ಸಂಘದ ನಾಯಕತ್ವಕ್ಕಾಗಿ ಸಂಘರ್ಷ.

ಈ ಎರಡು ಧಾರೆಗಳು, ಸ್ವಾತಂತ್ರ್ಯದ ಎರಡು ಪರಿಕಲ್ಪನೆಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಕೋಲಾರದಂತೆ ಮತ್ತೆಲ್ಲಿಯೂ ಇಂತಹ ತೀವ್ರತೆಯಲ್ಲಿ ಎದ್ದು ಬಂದಿರಲಿಲ್ಲ. ಸಂಘರ್ಷ ನಡೆಸಿರಲಿಲ್ಲ.

ಇದರ ಪರಿಣಾಮವಾಗಿ ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಗೇ ಕಾರ್ಮಿಕರ, ಗೇಣಿದಾರರ, ಭೂರಹಿತ ಬಡ ರೈತರ ಹಕ್ಕುಗಳ ಪ್ರಜ್ಞೆ ಮೂಡಿತು. ಅದು ಕೋಲಾರದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಆಯಾಮಗಳ ಮೇಲೆ ಮಾತ್ರವಲ್ಲ ಕರ್ನಾಟಕದಲ್ಲಿಯೂ ಈ



ಆಯಾಮಗಳ ಮೇಲೆ ಗಣನೀಯ ಪರಿಣಾಮ ಬೀರಿದೆ.

ಇವುಗಳ ಬಗ್ಗೆ ವಿವರವಾಗಿ ಬರೆಯುವ ಸಂದರ್ಭ ಇದಲ್ಲ. ಕಾಂ.ಬಯ್ಯಾರೆಡ್ಡಿಯವರ ಬೆಳವಣಿಗೆ ಮತ್ತು ಕಮ್ಯೂನಿಸ್ಟ್ ಚಳುವಳಿಗೆ ನೀಡಿದ ಕೊಡುಗೆಯ ಹಿನ್ನೆಲೆಯಲ್ಲಿ ಕೆಲ ಅಂಶಗಳನ್ನು ಮಾತ್ರ ನೀಡುತ್ತೇನೆ.

ಸ್ವಾತಂತ್ರ್ಯ ಪಡೆದ ಕೂಡಲೇ ರಾಜಪ್ರಭುತ್ವ ತೊಲಗಬೇಕು, ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ವಹಿಸಿ ಕೊಡಬೇಕು ಎಂಬ ಜವಾಬ್ದಾರಿ ಸರ್ಕಾರದ ಚಳುವಳಿ. ಈ ಪ್ರಜಾಸತ್ತಾತ್ಮಕ ಒತ್ತಾಯಕ್ಕೆ ಬೆಂಬಲ ನೀಡಿದ ಕಮ್ಯೂನಿಸ್ಟ್ ಧಾರೆಯಿಂದ ಕಾರ್ಮಿಕ ಚಳುವಳಿಯ ಜೊತೆಗೆ ಜೋಡಿದಾರಿ, ಜಮೀನುದಾರಿಗಳ ವಿರುದ್ಧ ಗೇಣಿದಾರ ರೈತರ ಹೋರಾಟ ಹಳ್ಳಿ ಹಳ್ಳಿಗಳಿಗೆ ಹಬ್ಬಿತು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯಾನಂತರ ಮೊದಲ ಸರ್ಕಾರದ ಮುಖ್ಯಮಂತ್ರಿಯಾದ ಕೂಡಲೇ ಕೆಸಿ ರೆಡ್ಡಿಯವರು ಮಾಡಿದ ಮೊದಲ ಕೆಲಸಗಳಲ್ಲಿ ಕೆಜಿಎಫ್‌ನ ಕಮ್ಯೂನಿಸ್ಟ್‌ರನ್ನು, ಕಮ್ಯೂನಿಸ್ಟ್ ಪರ ಕಾರ್ಮಿಕ ನಾಯಕರು, ಕಾರ್ಯಕರ್ತರನ್ನು ಜೈಲಿಗೆ ಹಾಕಿಸಿದರು. ಅಲ್ಲಿಯ ಕಾರ್ಮಿಕ ಸಂಘವನ್ನು ಕಾಂಗ್ರೆಸ್‌ನ ಹಿಡಿತಕ್ಕೆ ತೆಗೆದುಕೊಳ್ಳಲು ಇನ್ನಿಲ್ಲದಂತೆ ಪ್ರಯತ್ನಿಸಿದರು.

ಭಾರತದಲ್ಲಿ 1952ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಭಾರತದಲ್ಲಿ ಮೊದಲ ಸ್ಥಾನ ಪಡೆದ ಪಕ್ಷ ಕಾಂಗ್ರೆಸ್, ಎರಡನೇ ಸ್ಥಾನ ಪಡೆದು ವಿರೋಧ ಪಕ್ಷದ ಸ್ಥಾನ ಕಮ್ಯೂನಿಸ್ಟ್ ಪಕ್ಷದ್ದು. ಕೋಲಾರದಲ್ಲಿ ಕಾಂಗ್ರೆಸ್ ಮೊದಲ ಸ್ಥಾನ ಪಡೆಯಿತು. ಅದರ ಜೊತೆಯಲ್ಲಿಯೇ ಕಮ್ಯೂನಿಸ್ಟ್ ಪಕ್ಷದ ಮೊದಲ ವಿಧಾನಸಭಾ ಸದಸ್ಯರನ್ನು ಕೊಟ್ಟ ಜಿಲ್ಲೆ ಕೋಲಾರ. ಕಮ್ಯೂನಿಸ್ಟರಾದ ವಾಸನ್‌ರವರನ್ನು ಗೆಲ್ಲಿಸಿದ ಕೆಜಿಎಫ್ ಕಾರ್ಮಿಕರು ಕೆಸಿ ರೆಡ್ಡಿಯವರಿಗೆ ಸರಿಯಾದ ಪ್ರತ್ಯುತ್ತರ ನೀಡಿದರು.

ಮೈಸೂರು ಸಂಸ್ಥಾನದ ಮೊದಲ ಮುಖ್ಯಮಂತ್ರಿ ಕೋಲಾರದ ಕೆ.ಸಿ.ರೆಡ್ಡಿಯವರಾದರೆ, ಕರ್ನಾಟಕದ ಮೊದಲ ರಾಜ್ಯ ಮಟ್ಟದ ಮುಖ್ಯ ನಾಯಕರಾಗಿ ಆಯ್ಕೆಯಾದವರೂ ಕೂಡಾ ಕೋಲಾರ ಜಿಲ್ಲೆಯವರೇ. ಕೆಪಿಟಿಯುಸಿ ಕಾರ್ಮಿಕ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮುಂದೆ ಕೆಜಿಎಫ್‌ನಿಂದಲೇ ಶಾಸಕರಾಗಿ ಆಯ್ಕೆಯಾದ ನರಸಿಂಹನ್, ಹೊಸದಾಗಿ ರೂಪು ತಳೆದ ಕರ್ನಾಟಕ ಪ್ರಾಂತ ರೈತ ಸಂಘದ ಮೊದಲ ಅಧ್ಯಕ್ಷರು ಕೂಡಾ ಕೋಲಾರ ಜಿಲ್ಲೆಯ ವೆಂಕಟಗಿರಿಯಪ್ಪನವರು. ಅವರು ಕೂಡಾ ಎರಡು ಬಾರಿ ಶಾಸಕರಾಗಿ ಆಯ್ಕೆಯಾದರು.

ಮೊದಲ ಚುನಾವಣೆಯಿಂದ ಆರಂಭವಾಗಿ 1977ರಲ್ಲಿ ಜನತಾ ಪಕ್ಷ ಅಸ್ತಿತ್ವಕ್ಕೆ ಬರುವವರೆಗೂ ಕೋಲಾರದಲ್ಲಿ ಕಾಂಗ್ರೆಸ್ ಒಂದು ಕಡೆ, ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡಪಂಥೀಯ ಕೂಟ ಮತ್ತೊಂದು ಕಡೆ ಇವೆರಡರ ನಡುವೆ ಸೆಣೆಸಾಟ.

ಇಂತಹ ಸೆಣೆಸಾಟದಲ್ಲಿ ಕೆಜಿಎಫ್ ಕ್ಷೇತ್ರವನ್ನು ಮೊದಲ ಚುನಾವಣೆಯಿಂದಲೇ ಮೂರು ಬಾರಿ ಗೆದ್ದರು. ಈ ಮೊದಲ ಮೂರು ನಾಲ್ಕು ಚುನಾವಣೆಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಚಿಹ್ನೆಯ ಬದಲಾಗಿ ಸೈಕಲ್ ಗುರುತಿನಿಂದ ಸ್ಪರ್ಧಿಸಿ ಕಮ್ಯೂನಿಸ್ಟರು ಕಾಂಗ್ರೆಸ್‌ಗೆ ಪ್ರಬಲ ಪೈಪೋಟಿ ನೀಡಿದರು ಮತ್ತು ಕೆಲವು ಬಾರಿ ಗೆದ್ದರು.

ಕಾಂ.ರಾಮಕೃಷ್ಣ ತಮ್ಮ ಲೇಖನದಲ್ಲಿ ವಿವರಿಸಿದಂತೆ, ಹೀಗೆ ಗೆದ್ದವರಲ್ಲಿ ಬಯ್ಯಾರೆಡ್ಡಿಯವರ ಹತ್ತಿರದ ಸಂಬಂಧಿ, ಅವರ ತಂದೆ ಮತ್ತು ಸೋದರ ಮಾವನ ಸ್ವಾತಂತ್ರ್ಯ ಚಳುವಳಿಯ ಜೊತೆಗಾರ ಗಂಗಿರೆಡ್ಡಿ 52ರ ಮೊದಲ ಮಹಾ ಚುನಾವಣೆಯಿಂದಲೇ ಸ್ಪರ್ಧಿಸುತ್ತಾ ಬಂದರು. 57 ಮತ್ತು 67ರಲ್ಲಿ ಎರಡು ಬಾರಿ ಗೆದ್ದರು.

ಇಂತಹ ವಾತಾವರಣ ಕಾಂಗ್ರೆಸ್ ಶಾಸಕರಾಗಿದ್ದ ಶಿಡ್ಲಘಟ್ಟ ತಾಲೂಕಿನ ಮಳ್ಳೂರು ಪಾಪಣ್ಣ ಮತ್ತು ಹಲವು ಕಾಂಗ್ರೆಸ್ಸಿಗರು.

ಈ ಗಂಗಿರೆಡ್ಡಿಯವರದೊಂದು ವಿಶೇಷ ಸಾಹಸ. ಸ್ವಾತಂತ್ರ್ಯ ಚಳುವಳಿಯ ಸೆಳೆತಕ್ಕೆ ಒಳಗಾಗಿ ತಂದೆ ತಾಯಂದಿರಿಗೆ ಹೇಳದೆ ಮನೆ ಬಿಟ್ಟು ವಾರ್ಧಾದ ಗಾಂಧೀಜಿ ಆಶ್ರಮಕ್ಕೆ ಹೊರಟರು. ಹೇಗೆ? ಮನೆಯಿಂದ ವಾರ್ಧಾದವರೆಗೆ ಕಾಲ್ನಡಿಗೆಯಲ್ಲಿ! ಒಂದು ತಿಂಗಳು ಹದಿನೇಳು ದಿನಗಳ ಕಾಲ 1800 ಕಿಮೀ ನಡೆದು ಅವರು ವಾರ್ಧಾ ಸೇರಿದರು. ಆರೆಂಟು ತಿಂಗಳ ಕಾಲ ಅಲ್ಲಿ ಉಳಿದು 42ರ ಚಲೇಜಾವ್ ಚಳುವಳಿಯ ಸಮಯದಲ್ಲಿ ಚಿಂತಾಮಣಿಗೆ ಮರಳಿ ಇಲ್ಲಿ ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿದರು. ಸೆರೆಮನೆವಾಸ ಅನುಭವಿಸಿದರು. ಸೆರೆಯಲ್ಲಿದ್ದಾಗಲೇ ಅವರ ತಂದೆ ತಾಯಂದಿರು ಮರಣ ಸ್ಥಿತಿಯಲ್ಲಿದ್ದಾಗಲೂ ಇವರನ್ನು ಬಿಡುಗಡೆ ಮಾಡದೆ ಸತ್ತ ಮೇಲೆ ಬಿಡುಗಡೆ ಮಾಡಿದರು. ಇವೆಲ್ಲ ಬಯ್ಯಾರೆಡ್ಡಿಯವರ ಬಂಧು ಬಳಗದಲ್ಲಿ ದಂತಕತೆಗಳು. ಇಷ್ಟೇ ಅಲ್ಲ, ಗಂಗಿರೆಡ್ಡಿಯವರು 47ರ ನಂತರ ಜವಾಬ್ದಾರಿ ಸರ್ಕಾರಕ್ಕಾಗಿನ ಮೈಸೂರು ಚಲೋ ಚಳುವಳಿಯಲ್ಲಿ ಇವರು ಬಾಂಬ್ ತಯಾರಿಕೆ, ಪೋಲೀಸ್ ಸ್ಟೇಷನ್ ವಶಪಡಿಸಿಕೊಳ್ಳುವುದು, ಅಲ್ಲಿಯ ಶಸ್ತ್ರಗಳ ಲೂಟಿ ಮುಂತಾದ ಮಿಲಿಟೆಂಟ್ ಕಾರ್ಯಗಳಲ್ಲಿ, ಮೈಸೂರು ಚಲೋ ಎಂಬ ಪತ್ರಿಕೆಯನ್ನು ಹೊರಡಿಸುವುದು ಮುಂತಾದವುಗಳಲ್ಲಿ ತೊಡಗಿದರು. ಮುಂದೆ ಸ್ವತಂತ್ರ ಸರ್ಕಾರದ ವರ್ತನೆಯಿಂದ ಭ್ರಮನಿರಸನಗೊಂಡು ಭೂಮಾಲಕ ಪದ್ಧತಿ ರದ್ದಾಗಬೇಕು, ಉಳುವವನೇ ಹೊಲದೊಡೆಯನಾಗಬೇಕೆಂಬ ಚಳುವಳಿಯ ಮೂಲಕ ಕಮ್ಯೂನಿಸ್ಟ್ ಪಕ್ಷದತ್ತ ಆಕರ್ಷಿತರಾದರು. ಬಯ್ಯಾರೆಡ್ಡಿಯವರ ಬಾಲ್ಯ ಕಾಲದ ವೇಳೆಗೆ ಇವರು ಸಿಪಿಎಂ ಸೇರಿ ಶಾಸಕರಾಗಿದ್ದರು.

ಅಂದಿನ ಕೋಲಾರ ಜಿಲ್ಲೆಯಲ್ಲಿ

ಕೇವಲ ಚುನಾವಣೆ ಮಾತ್ರವಲ್ಲ ಎಸ್‌ಎಫ್‌ಐ ಸ್ಥಾಪನೆಯಲ್ಲಿ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದವರು ಚಿಂತಾಮಣಿ ತಾಲೂಕಿನವರು. ಎಸ್‌ಎಫ್‌ಐ ಮೂಲದವರು ಹಲವರು ವಕೀಲರಾದರು. ಅಡ್ವೋಕೇಟ್ ಜನರಲ್ ಆದ ಆರ್.ಎನ್.ಬೈರಾರೆಡ್ಡಿಯವರ ಪ್ರಭಾವ ಗಣನೀಯ. ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳ ನ್ಯಾಯಾಧೀಶರಾಗಿ ಕೂಡಾ ಈ ಜಿಲ್ಲೆಯ ಕಮ್ಯೂನಿಸ್ಟ್ ನಾಯಕರು ಪಾತ್ರ ವಹಿಸಿದ್ದಾರೆ.



ದಲಿತ, ಬಂಡಾಯ ಸಾಹಿತ್ಯ, ಸಮುದಾಯ ಮೊದಲಾದ ಸಾಂಸ್ಕೃತಿಕ ರಂಗದಲ್ಲಿಯೂ ಅಲ್ಲಿಯ ಎಡ ಪ್ರಜಾಸತ್ತಾತ್ಮಕ ವಾತಾವರಣ ರಾಜ್ಯದ ಮೇಲೆ ಎಡಪಂಥೀಯ ಚಿಂತನೆ ಮುಖ್ಯ ಪ್ರಭಾವವಾಗಿದೆ.

ಹೀಗೆ ಎಡಪಂಥೀಯ ಪ್ರಗತಿಪರ ಚಿಂತನೆಗಳು, ಕಮ್ಯೂನಿಸ್ಟ್ ಚಳುವಳಿಯ ಗಾಳಿಯನ್ನು ಉಸಿರಾಡಿಕೊಂಡು ಬೆಳೆದ ಬಯ್ಯಾರೆಡ್ಡಿಯವರು ಈ ಪರಂಪರೆಯ ವಾರಸುದಾರರಾಗಿ ಸಿಪಿಐಎಂ ಪಕ್ಷಕ್ಕೆ ಸೇರಿದರು. ಅದರ ನಾಯಕರಾಗಿ ಬೆಳೆದರು.

ಎಡಪಂಥೀಯ ಚಿಂತನೆಯ ಜೊತೆಗೆ
ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**